23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 244 | ನವದೆಹಲಿ | ಬೆಲೆ ₹ 10 | ಮಾರ್ಚ್ 9, 2026, ಸೋಮವಾರ



## ನಿತ್ಯ ಪಂಚಾಂಗ 9.03.2026 ಸೋಮವಾರ



ಶ್ರೀ ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ ಶಿಶಿರ ಹೇಮಂತ ಋತು, ಚಾಂದ್ರಮಾನ, ಪಾಲ್ಗುಣ ಬಹುಳ

ಬನ್ನೇರುಘಟ್ಟ ಚಂಪಕಧಾಮ ರಥ, ಕಲ್ಲವೀರನಹಳ್ಳಿ ಮತ್ತೀತಲೇಶ್ವರ ರಥ, ಕನಕಗಿರಿ, ಮೈಸೂರು ಹೆಬ್ಬಳ ಲಕ್ಷ್ಮೀಕಾಂತ ರಥ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ಪ್ರಧಾನಿ ನೇತೃತ್ವದಲ್ಲಿ ಜಲಜೀವನ ಮಿಷನ್ ಜನಾಂದೋಲನ

**ಮುಂಬೈ, ಮ.8:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಜಲಜೀವನ್ ಮಿಷನ್ ಜನ ಆಂದೋಲನವಾಗಿ ಮಾರ್ಪಟ್ಟಿದೆ. 2019ರಿಂದ ನಮ್ಮ ಸರ್ಕಾರವು ಪ್ರತಿ ಗ್ರಾಮೀಣ ಮನೆಗೂ ನಲ್ಲಿ ನೀರಿನ ಸಂಪರ್ಕವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುತ್ತಿದೆ.

ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ವೆಂಗುರ್ಲಾ ಬ್ಲಾಕ್‌ನಲ್ಲಿರುವ ಕಾರ್ಲಿಯಲ್ಲಿ ಗ್ರಾಮ ಸಮುದಾಯಕ್ಕೆ ಜೆಜೆಎಂ ಸ್ವತ್ತುಗಳನ್ನು ಹಸ್ತಾಂತರಿಸಲಾಯಿತು. ಮಹಾರಾಷ್ಟ್ರದ ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವ ನಿತೇಶ್ ರಾಣೆ, ಶಾಸಕ ದೀಪಕ್ ಕೇಸರ್ಕರ್ ಮತ್ತು ಇತರ ಗಣ್ಯರ ಸಮ್ಮುಖದಲ್ಲಿ 'ಜಲ ಅರ್ಪಣ್' ಅನ್ನು ನಡೆಸಲಾಯಿತು.

'ಜಲ ಮಹೋತ್ಸವ'ವು ನೀರಿನ ಪ್ರಾಮುಖ್ಯದ ಆಚರಣೆಯಾಗಿದೆ, ನೀರಿನ ವ್ಯವಸ್ಥೆಗಳ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯಗಳಿಗೆ ಜವಾಬ್ದಾರಿ ಹಂಚಿಕೆಯಾಗಿದ್ದು, ಆಡಳಿತದಲ್ಲಿ ಜನರ ಭಾಗವಹಿಸುವಿಕೆಯು ದೀರ್ಘಕಾಲೀನ ಸುಸ್ಥಿರತೆಗೆ ಕಾರಣವಾಗಲಿದೆ.

ಈ ವೇಳೆ ನಾನು ಒಂದು ಮನೆಗೆ ಭೇಟಿ ನೀಡಿ, ನೇರವಾಗಿ ನಲ್ಲಿಯಿಂದ ನೀರು ಕುಡಿದೆ. ಪ್ರತಿ ಗ್ರಾಮೀಣ ಮನೆಗೂ ಸಕಾಲಿಕ ಮತ್ತು ಶುದ್ಧ ಕುಡಿಯುವ ನೀರನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಜೆಜೆಎಂ ಕೇವಲ ಸರ್ಕಾರಿ ಯೋಜನೆಯಲ್ಲ, ನಮ್ಮ ತಾಯಂದಿರು, ಹೆಣ್ಣುಮಕ್ಕಳು ಮತ್ತು ಸಹೋದರಿಯರನ್ನು ಸಬಲೀಕರಣಗೊಳಿಸುವ ಪರಿವರ್ತನಾ ಉಪಕ್ರಮವಾಗಿದೆ.



ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಗ್ರಾಮದಲ್ಲಿ ಜಲ ಅರ್ಪಣ್ ಯೋಜನೆಗೆ ಕೇಂದ್ರ ಸಚಿವ ವಿ.ಸೋಮಣ್ಣ ಭಾನುವಾರ ಚಾಲನೆ ನೀಡಿದರು.

ಸ್ವಾತಂತ್ರ್ಯದ 70 ವರ್ಷಗಳ ನಂತರವೂ ನಮ್ಮ ಅನೇಕ ಹಳ್ಳಿಗಳಿಗೆ ಸುರಕ್ಷಿತ ಕುಡಿಯುವ ನೀರು ಲಭ್ಯವಾಗದಿರುವುದು ದುರದೃಷ್ಟಕರ. ಮೋದಿ ಅವರ ಮಾರ್ಗದರ್ಶನ ಮತ್ತು ಸಿ.ಆರ್ ಪಾಟೀಲ್ ಅವರ ಬೆಂಬಲದೊಂದಿಗೆ, ದೇಶದ 80% ಕ್ಕೂ ಹೆಚ್ಚು ಗ್ರಾಮೀಣ ಕುಟುಂಬಗಳು ಈಗ ಕುಡಿಯುವ ನೀರಿನ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಮಹಾರಾಷ್ಟ್ರ ಮತ್ತು ಸಿಂಧುದುರ್ಗದಲ್ಲಿ ಈ ಮಹತ್ವದ ಯೋಜನೆಯನ್ನು ಬೆಂಬಲಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ನಾನು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಸಚಿವ ನಿತೇಶ್ ರಾಣೆ ಮತ್ತು ಸಂಸದ ನಾರಾಯಣ್ ರಾಣೆ ಅವರನ್ನು ಅಭಿನಂದಿಸುತ್ತೇನೆ ಎಂದರು

## ಜಿಬಿಎ ಸೇರಿ ಸ್ಥಳೀಯ ಚುನಾವಣೆ ಗೆಲ್ಲಲು ಸಮರ್ಥ ನಾಯಕತ್ವ ಬೇಕೆಂದು ಬೇಡಿಕೆ



**ಬೆಂಗಳೂರು, ಮಾ.8:** ಜಿಬಿಎಯ ವ್ಯಾಪ್ತಿಯ 5 ಮಹಾನಗರ ಪಾಲಿಕೆಗಳು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳು ನಡೆಯಬೇಕಿದೆ. ಈ ಸಂದರ್ಭದಲ್ಲಿ ಪಕ್ಷವನ್ನು ಗೆಲ್ಲಿಸಿಕೊಂಡು ಬರಬೇಕಾದರೆ ಸಮರ್ಥ ನಾಯಕತ್ವ ಬೇಕು ಎಂಬ ಬೇಡಿಕೆಯನ್ನು ಡಿ.ಕೆ.ಶಿವಕುಮಾರ್ ಮುಂದಿಟ್ಟಿದ್ದಾರೆ. ಈಗಾಗಲೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಗಾಂಧಿ, ಕಾಂಗ್ರೆಸ್ ಸಂಸದೀಯ ಮಂಡಳಿ ಅಧ್ಯಕ್ಷೆ ಸೋನಿಯಾಗಾಂಧಿ ಸೇರಿದಂತೆ ಹಲವರನ್ನು ಭೇಟಿ ಮಾಡಿ ಡಿ.ಕೆ.ಶಿವಕುಮಾರ್ ಒತ್ತಡ ಹೇರುವ ಪ್ರಯತ್ನ ಮಾಡಿದರು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಎಲ್ಲವೂ ರಾಹುಲ್‌ಗಾಂಧಿ ಅವರ ಮೇಲೆ ಅವಲಂಬಿತವಾಗಿದೆ.

**ಡಿಕೆಶಿ ಭೇಟಿಗೆ ಸಿಗದೆ ರಾಹುಲ್**

ರಾಹುಲ್‌ಗಾಂಧಿ ಮಾತ್ರ ಕೈಗೆ ಸಿಗದಂತೆ ಆಟವಾಡುತ್ತಿದ್ದಾರೆ. ಹೈಕಮಾಂಡ್ ಆಟ ಒಂದು ಕಡೆಯಾದರೆ, ಡಿ.ಕೆ.ಶಿವಕುಮಾರ್ ಹಠ ಮತ್ತೊಂದು ಕಡೆಯಾಗಿದೆ. ರಾಜ್ಯ ರಾಜಕೀಯದಲ್ಲಿ ಸುಲಭಕ್ಕೆ ಸೋಲು ಒಪ್ಪಿಕೊಳ್ಳದ ಡಿ.ಕೆ.ಶಿವಕುಮಾರ್ ಮರಳಿ ಯತ್ನವ ಮಾಡು ಎನ್ನುವಂತೆ ಬಜೆಟ್ ಮಂಡನೆ ಬೆನ್ನಲ್ಲೇ ದೆಹಲಿ ಯಾತ್ರೆ ನಡೆಸಿದ್ದಾರೆ. ಇವರ ಹಿಂದೆ ಕೆಲವು ಶಾಸಕರೂ ಕೂಡ ಡಿ.ಕೆ.ಶಿವಕುಮಾರ್ ಪರವಾಗಿ ದೆಹಲಿಗೆ ಹೋಗುವ ಸಾಧ್ಯತೆಯಿದೆ.

## ಮಹಿಳೆಯರು ಕೇವಲ ಕುಟುಂಬದ ಭಾಗವಲ್ಲ ಸಮಾಜದ ಶಕ್ತಿ: ಸಚಿವ ಲಕ್ಷ್ಮೀ ಹೆಬ್ಬಾಳ್ಕರ್



**ಬೆಂಗಳೂರು, ಮಾ.8:** ಮಹಿಳೆ ಎಂದರೆ ಕೇವಲ ಕುಟುಂಬದ ಭಾಗವಲ್ಲ; ಸಮಾಜದ ಶಕ್ತಿ, ಸಂಸ್ಕೃತಿಯ ಸಾರಥಿ ಮತ್ತು ಭವಿಷ್ಯದ ನಿರ್ಮಾತೃ. ಮಹಿಳೆಯರು ಶಿಕ್ಷಣ, ಉದ್ಯೋಗ, ವಿಜ್ಞಾನ, ರಾಜಕೀಯ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಸಾಧನೆಯ ಹೊಸ ಅಧ್ಯಾಯಗಳನ್ನು ಬರೆಯುತ್ತಿರುವ ಈ ಕಾಲಘಟ್ಟದಲ್ಲಿ ನಾವು ಅವರ ಸಾಧನೆಗಳನ್ನು ಗೌರವಿಸುವುದೂ, ಮತ್ತಷ್ಟು ಅವಕಾಶಗಳನ್ನು ಸೃಷ್ಟಿಸುವುದೂ ಅತ್ಯಂತ ಮುಖ್ಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಮಹಿಳಾ ದಿನಾಚರಣೆ ಹಿನ್ನೆಲೆ ನಾಡಿನ ಮಹಿಳೆಯರಿಗೆ ಸಂದೇಶ ನೀಡಿದ ಅವರು, ಸಮಾಜದ ಇತಿಹಾಸವನ್ನು ನೋಡಿದಾಗ ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸಿ ಮುಂದೆ ಬಂದಿರುವುದು ಕಾಣಿಸುತ್ತದೆ. ಶತಮಾನಗಳ ಹಿಂದೆ ಸಮಾನತೆಗಾಗಿ ನಡೆದ ಹೋರಾಟಗಳು ಇಂದು ನಮ್ಮ ಸಮಾಜವನ್ನು ಹೆಚ್ಚು ನ್ಯಾಯಸಮ್ಮತ ಮತ್ತು ಪ್ರಗತಿಪರವಾಗಿಸಿವೆ. ನಮ್ಮ ಕರ್ನಾಟಕದ ನೆಲದಲ್ಲಿ ಬಸವಾದಿ ಶರಣರು ಸಾರಿದ ಸಮಾನತೆಯ ಚಿಂತನೆ ಮಹಿಳೆಯರಿಗೂ ಗೌರವಯುತ ಸ್ಥಾನವನ್ನು ನೀಡುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ತಿಳಿಸಿದ್ದಾರೆ.

ಇಂದು ಶಿಕ್ಷಣ, ಆಡಳಿತ, ಉದ್ಯಮ, ಕ್ರೀಡೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದಾರೆ. ಇತ್ತೀಚಿನ ಸ್ಪರ್ಧಾತ್ಮಕ ಪರೀಕ್ಷೆಗಳು, ಆಡಳಿತ ಸೇವೆಗಳು ಮತ್ತು ವೃತ್ತಿ ಕ್ಷೇತ್ರಗಳಲ್ಲಿ ಕನ್ನಡದ ಹೆಣ್ಣುಮಕ್ಕಳು ಸಾಧಿಸುತ್ತಿರುವ ಯಶಸ್ಸು ನಮ್ಮ ರಾಜ್ಯದ ಹೆಮ್ಮೆ. ಅವರ ಸಾಧನೆ ಮುಂದಿನ ಪೀಳಿಗೆಯ ಹೆಣ್ಣುಮಕ್ಕಳಿಗೆ ಸ್ಫೂರ್ತಿಯಾಗಬೇಕು. ರಾಜ್ಯ ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದೆ. ವಿಶೇಷವಾಗಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಭದ್ರತೆಯನ್ನು ಬಲಪಡಿಸುವ ಉದ್ದೇಶದಿಂದ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಮಹಿಳೆಯರು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಅವಕಾಶಗಳನ್ನು ಸಮಾನವಾಗಿ ಪಡೆಯಲು ಸರ್ಕಾರ ನಿರಂತರ ಪ್ರಯತ್ನ ಮಾಡುತ್ತಿದೆ ಎಂದು ಹೇಳಿದ್ದಾರೆ.

ಮಹಿಳೆಯರ ಗೌರವ, ಭದ್ರತೆ ಮತ್ತು ಸ್ವಾವಲಂಬನೆ ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಮಹಿಳೆಯರು ಕುಟುಂಬದ ನಿರ್ವಹಣೆಯಲ್ಲಿ ಮಾತ್ರವಲ್ಲದೆ ಸಮಾಜದ ಅಭಿವೃದ್ಧಿಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಅವರ ಶ್ರಮ, ತ್ಯಾಗ ಮತ್ತು ಸಮರ್ಪಣೆ ನಮ್ಮ ಸಮಾಜದ ಬಲವಾದ ಅಡಿಪಾಯವಾಗಿದೆ. ಈ ಅಂತಾರಾಷ್ಟ್ರೀಯ ಮಹಿಳಾ ದಿನದಂದು ನಾವು ಎಲ್ಲರೂ ಮಹಿಳೆಯರ ಸಾಧನೆಗಳನ್ನು ಗೌರವಿಸಿ, ಸಮಾನತೆ ಮತ್ತು ನ್ಯಾಯಯುತ ಸಮಾಜ ನಿರ್ಮಾಣದತ್ತ ಮತ್ತಷ್ಟು ಬದ್ಧರಾಗೋಣ. ನಾಡಿನ ಪ್ರತಿಯೊಂದು ಮಹಿಳೆಯೂ ಆತ್ಮವಿಶ್ವಾಸದಿಂದ, ಸ್ವಾಭಿಮಾನದಿಂದ ಬದುಕುವಂತಹ ಕರ್ನಾಟಕವನ್ನು ನಿರ್ಮಿಸುವುದು ನಮ್ಮೆಲ್ಲರ ಕನಸು. ಆ ಕನಸು ನನಸಾಗಲು ನಾವು ಒಟ್ಟಾಗಿ ಕೆಲಸ ಮಾಡೋಣ ಎಂಬ ಸಂದೇಶದೊಂದಿಗೆ ಲಕ್ಷ್ಮಿ ಹೆಬ್ಬಾಳ್ಕರ್ ರಾಜ್ಯದ ಸಮಸ್ತ ಮಹಿಳೆಯರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನದ ಶುಭಾಶಯ ಕೋರಿದ್ದಾರೆ.



ಅಹ್ಮದಾಬಾದ್‌ನಲ್ಲಿ ನಡೆದ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟಿ20 ವಿಶ್ವಕಪ್ ಅಂತಿಮ ಪಂದ್ಯವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಯ ಕರ್ನಾಟಕ ಭವನದಲ್ಲಿ ವೀಕ್ಷಿಸಿದರು.

## 2025–26ನೇ ಸಾಲಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿಗೆ ಆಯ್ಕೆ

**ಬೆಂಗಳೂರು, ಮಾ.8:** ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ "ಕರ್ನಾಟಕ ಕಲಾಶ್ರೀ" ಪ್ರಶಸ್ತಿಗೆ 2025–26ನೇ ಸಾಲಿನ ಪುರಸ್ಕತರನ್ನು ಅಕಾಡೆಮಿಯ ಅಧ್ಯಕ್ಷೆ ಶುಭಾ ಧನಂಜಯ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಸಂಗೀತ ಮತ್ತು ನೃತ್ಯ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಹಿರಿಯ ಕಲಾವಿದರನ್ನು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

**ಪ್ರಶಸ್ತಿ ಪುರಸ್ಕತರ ವಿವರ:** ಗೌರವ ಪ್ರಶಸ್ತಿಗೆ ಗಮಕ ಪ್ರಕಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಧೂರ ಮೋಹನ ಕಲ್ಲೂರಾಯ, ಕಥಾ ಕೀರ್ತನದಲ್ಲಿ ಹಾಸನದ ಲೋಕೇಶ್ ದಾಸ್ ಆಯ್ಕೆಯಾಗಿದ್ದಾರೆ.

ವಾರ್ಷಿಕ ಪ್ರಶಸ್ತಿ: ಕರ್ನಾಟಕ ಸಂಗೀತ: ವಿದ್ವಾನ್ ಎಂ. ವೆಂಕಟರಾಯ್ (ಡೋಲ್) – ಬೆಂಗಳೂರು ಗ್ರಾಮಾಂತರ, ಎ.ವಿ. ವಿಶ್ವನಾಥ (ಹಾರ್ಮೋನಿಯಂ) – ಕೋಲಾರ, ಡಾ.ಹಂಸಿನಿ ನಾಗೇಂದ್ರ (ಗಾಯನ) – ಮೈಸೂರು, ನಾಗೇಶ ಎ. ಬಪ್ಪನಾಡು (ನಾದಸ್ವರ) – ದಕ್ಷಿಣ ಕನ್ನಡ ಇವರು ಆಯ್ಕೆಯಾಗಿದ್ದಾರೆ.

ಹಿಂದೂಸ್ತಾನಿ ಸಂಗೀತ: ಮೃತ್ಯುಂಜಯ ಶೆಟ್ಟರ್ (ಗಾಯನ) – ಧಾರವಾಡ, ರವೀಂದ್ರ ಸೊರಗಾವಿ (ಗಾಯನ) – ಬಾಗಲಕೋಟೆ ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನಿಯಂ) ಗದಗ, ವಿಠಲ್ ಸಿದ್ದಪ್ಪ ಪೂಜಾರಿ (ತಬಲ) – ಬೀದರ ಇವರು ಆಯ್ಕೆಯಾಗಿದ್ದಾರೆ.

ನೃತ್ಯ: ಜಿಲಾನಿ (ಕೂಚಿಪುಡಿ) – ಬಳ್ಳಾರಿ, ಶಿವಪ್ರಕಾಶ (ಭರತನಾಟ್ಯ) ಚಿತ್ರದುರ್ಗ, ನಾಗರತ್ನ ಹಡಗಲಿ (ಭರತನಾಟ್ಯ) ಧಾರವಾಡ ಇವರು ಆಯ್ಕೆಯಾಗಿದ್ದಾರೆ.

**ಇತರ ಕಲಾ ಪ್ರಕಾರಗಳು:** ಸುಗಮ ಸಂಗೀತ: ಶ್ರೀಧರ್ ಅಯ್ಯರ್ – ಕೋಲಾರ ಕಥಾಕೀರ್ತನ (ತಬಲ): ಪಿ. ರಾಮಯ್ಯ – ಬೆಂಗಳೂರು, ಗಮಕ (ವಾಚನ): ವಿಶ್ವನಾಥ ಕುಲಕರ್ಣಿ – ಧಾರವಾಡ,

ವಾದ್ಯ ತಯಾರಿಕೆ: ಕೃಷ್ಣ ಮೂರ್ತಿ – ಬೆಂಗಳೂರು, ಸಂಘ ಸಂಸ್ಥೆ: ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯ ಕಲ್ಮಠ, ಗಂಗಾವತಿ – ಕೊಪ್ಪಳ ಇವರು ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಆಯೋಜಿಸಲಾಗುವುದು. ಗೌರವ ಪ್ರಶಸ್ತಿ ಪುರಸ್ಕೃತರಿಗೆ ರೂ. 50,000 ನಗದು, ವಾರ್ಷಿಕ ಪ್ರಶಸ್ತಿಗೆ ರೂ. 25,000 ನಗದು ಸೇರಿದಂತೆ ಕರ್ನಾಟಕ ಕಲಾಶ್ರೀ ಪ್ರಶಸ್ತಿಯೊಂದಿಗೆ ಗೌರವಿಸಲಾಗುವುದು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಎನ್.ನರೇಂದ್ರಬಾಬು ತಿಳಿಸಿದ್ದಾರೆ.

## ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿದೆ: ಸಚಿವ ಈಶ್ವರ ಖಂಡ್ರೆ

**ಬೆಂಗಳೂರು, ಮಾ.8:** ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯಲ್ಲಿ ಹೆಚ್ಚಿನ ಜವಾಬ್ದಾರಿಯಿದೆ. ಪರಿಸರ ಸಂರಕ್ಷಣೆಗೆ ಕಾರ್ಯೋನ್ಮುಕರಾಗಬೇಕು ಎಂದು ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಪರಿಸರ ವಿಜ್ಞಾನ ವಿಭಾಗವು ಗ್ರಾಮೀಣ ಸಾಕ್ಷರತಾ ಮತ್ತು ಆರೋಗ್ಯ ಕಾರ್ಯಕ್ರಮ ಹಾಗೂ ಕರ್ನಾಟಕ ಸ್ಟೇಟ್ ಯೂಥ್ ನೆಟ್ವರ್ಕ್ ಸಹಯೋಗದಲ್ಲಿ ಆಯೋಜಿಸಿದ್ದ "ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ" ಎಂಬ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

"ರಾಜ್ಯದಲ್ಲಿ ಶೇ.33ರಷ್ಟು ಅರಣ್ಯಪ್ರದೇಶವಿರಬೇಕು ಆದರೆ ಶೇ.21 ಅರಣ್ಯ ಪ್ರದೇಶವಿದ್ದು, ಶೇ.12 ಕೊರತೆಯಿದೆ. ಕಳೆದ 3 ವರ್ಷದಲ್ಲಿ ರಾಜ್ಯದಲ್ಲಿ 11 ಕೋಟಿ ಸಸಿಗಳನ್ನು ನೆಡಲಾಗಿದೆ. ನಗರ ಪ್ರದೇಶದಲ್ಲಿ ಕಾಂಕ್ರೀಟ್ ವಿಸ್ತರಣೆ ಕಡಿಮೆಯಾಗಬೇಕು. ರಾಜ್ಯದಲ್ಲಿ ಕನಿಷ್ಠ ಶೇ.1ರಷ್ಟು ಹಸಿರು ಹೊದಿಕೆ ಹೆಚ್ಚಿಸಲು 10 ಕೋಟಿ ಸಸಿ ನೆಡುವ ಅಗತ್ಯವಿದೆ. ಈ ಕಾರ್ಯ ಸರ್ಕಾರದಿಂದ ಮಾತ್ರ ಸಾಧ್ಯವಾಗುವುದಿಲ್ಲ ಸಂಘ ಸಂಸ್ಥೆಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಜವಾಬ್ದಾರಿ ಹೊರಬೇಕು ಎಂದರು.

ಬೆಂಗಳೂರಿನ ವಾಯು ಗುಣಮಟ್ಟ ಸೂಚ್ಯಂಕ 100 ದಾಟಿದ್ದು ಹೀಗೆ ಮುಂದುವರೆದರೆ ದೆಹಲಿ ಮಾದರಿಯ ಸಮಸ್ಯೆಗಳು ಎದುರಿಸಬೇಕಾಗಬಹುದು. ಬೆಂಗಳೂರಿನಲ್ಲಿ ಶುದ್ಧ ಮತ್ತು ಆರೋಗ್ಯಕರ ಪರಿಸರ ಹೆಚ್ಚಿಸುವ ಅಗತ್ಯವಿದೆ ಎಂದು ಎಚ್ಚರಿಸಿದರು. ಪ್ರಕೃತಿ ಸಮತೋಲನಕ್ಕೆ ವನ್ಯಜೀವಿಗಳು ಅತ್ಯಂತ ಅವಶ್ಯಕ. ವನ್ಯಜೀವಿ ಸಂರಕ್ಷಣೆಗೆ ಕಾನೂನುಬದ್ಧ ವ್ಯವಸ್ಥೆಯಿದ್ದು ಅವುಗಳ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಭೂಮಿಯ ಮೇಲೆ ಹುಟ್ಟಿದ ಪ್ರತಿ ಜೀವಿಗೂ ಬದುಕುವ ಹಕ್ಕಿದೆ. ಕೀಟರಾಶಿ,ಸಸ್ಯ ಪ್ರಭೇದ,ಪ್ರಾಣಿ ಸಂಕುಲ ಎಲ್ಲವೂ ಪ್ರಕೃತಿ ಸಮತೋಲನದ ಭಾಗವಾಗಿದೆ. ಮಾನವ ಜೀವ ಅಮೂಲ್ಯವಾದರೂ ವನ್ಯಜೀವಿಗಳ ರಕ್ಷಣೆಯೂ ಸಮಾನವಾಗಿ ಅಗತ್ಯವಾಗಿದೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಚಿಂತಿಸಬೇಕು ಎಂದು ತಿಳಿಸಿದರು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸುವುದು ಮತ್ತು ಏಕಬಳಕೆ ಪ್ಲಾಸ್ಟಿಕ್ ನಿಷೇಧದ ಬಗ್ಗೆ ವಿದ್ಯಾರ್ಥಿಗಳು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಜೊತೆಗೆ ತ್ಯಾಜ್ಯ ಸಂಸ್ಕರಣೆ,ನೀರಿನ ಮರುಬಳಕೆ,ಶಬ್ದ ಮಾಲಿನ್ಯ ಕುರಿತು ಜನರಲ್ಲಿ ಅರಿವು ಮೂಡಿಸುವುದು ಅಗ್ಯವಾಗಿದೆ.ಭವಿಷ್ಯದ ನಾಗರೀಕರಾದ ವಿದ್ಯಾರ್ಥಿಗಳು ಪ್ರಕೃತಿ ಮತ್ತು ಪರಿಸರದ ಬಗ್ಗೆ ಕಾಳಜಿ ವಹಿಸಿ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು " ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ (ಪ್ರಭಾರ) ಕುಲಪತಿಗಳು ಪ್ರೊ.ಸಿ.ಸೋಮಶೇಖರ್, ಕುಲಸಚಿವರು ಕೆ.ಟಿ.ಶಾಂತಲಾ, ಅರಣ್ಯ,ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸಲು ಪಿಎಂ ಉಷಾ ನೋಡಲ್ ಆಫೀಸರ್ ಪ್ರೊ.ವಿ.ಸುದೇಶ್, ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥರು ಡಾ.ಬಿ.ಸಿ.ನಾಗರಾಜ, ಖಊಐಕ ನಿರ್ದೇಶಕರು ಕೆ.ಸರಸ್ವತಿ, ರೇನ್ ವಾಟರ್ ಕ್ಲಬ್ ಸಂಸ್ಥಾಪಕರು ಎಸ್.ವಿಶ್ವನಾಥ್, ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್ನ ಭಾರ್ಗವಿ ಎಸ್. ರಾವ್ ಉಪಸ್ಥಿತರಿದ್ದರು.

## ಮಹಿಳಾ ದಿನದಂದೇ ಅಡುಗೆ ಅನಿಲ ಬೆಲೆ ಏರಿಸಿದ್ದೇ ಅಚ್ಛೇ ದಿನ್: ಸಚಿವ ಖರ್ಗೆ ಟೀಕೆ




**ಬೆಂಗಳೂರು. ಮಾ.8:** ವಿಶ್ವ ಮಹಿಳಾ ದಿನದಂದೇ ಕೇಂದ್ರ ಸರ್ಕಾರ ಅಡುಗೆ ಅನಿಲದ ಬೆಲೆ ಏರಿಸಿದೆ. ಇದು ಅಚ್ಛೇ ದಿನ್ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಚಿತ್ತಾಪುರ ಪಟ್ಟಣದಲ್ಲಿ ನಡೆದ ರೂ 1069 ಕೋಟಿ ವೆಚ್ಚದ ಕಾಮಗಾರಿಗಳು ಅಡಿಗಲ್ಲು ಹಾಗೂ ಉದ್ಘಾಟನೆ ಸಮಾರಂಭದಲ್ಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಿಂದ ಜನರು ನೆಮ್ಮದಿಯ ಹಾಗೂ ಸ್ವಾಭಿಮಾನದ ಜೀವನ ನಡೆಸುತ್ತಿದ್ದಾರೆ. ನಿಮ್ಮ ದುಡ್ಡನ್ನು ಗ್ಯಾರಂಟಿ ಯೋಜನೆಗಳ ಮೂಲಕ ನಿಮಗೆ ವಾಪಸ್ ಕೊಟ್ಟರೆ, ಬಿಜೆಪಿಯವರು ಟೀಕಿಸುತ್ತಿದ್ದಾರೆ. ಅವರಿಗೆ ಜನರ ದುಡ್ಡು ಜನರಿಗೆ ಮರುಬಳಕೆಯಾಗುವುದು ಬೇಕಾಗಿಲ್ಲ ಎಂದು ಹರಿಹಾಯ್ದರು.

ರಾಜ್ಯದ ಮುಖ್ಯಮಂತ್ರಿ ಹೊರತುಪಡಿಸಿದರೆ ನಾನೇ ನಂತರದ ಟಾರ್ಗೆಟ್ ಆಗಿದ್ದೇನೆ ಎಂದು ಕೆಲವರು ಹೇಳುತ್ತಾರೆ. ಚಿತ್ತಾಪುರದ ಜನರ ಆಶೀರ್ವಾದ ಇರುವವರೆಗೆ ನನಗೇನೂ ಆಗುವುದಿಲ್ಲ ಎಂದು ಜನರ ಕರಡಾತನದ ನಡುವೆ ಘೋಷಿಸಿದರು. ವೇದಿಕೆ ಮೇಲೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿಸಿಎಂ ಡಿ.ಕೆ.ಶಿವಕುಮಾರ ಸೇರಿದಂತೆ ಹಲವರಿದ್ದರು.

## ರಾಷ್ಟ್ರಪತಿಗೆ ಅವಮಾನಿಸುವುದು ಸಂವಿಧಾನಕ್ಕೆ ಮಾಡಿದ ಅಪಮಾನಕ್ಕಿಂತ ಕಡಿಮೆಯಲ್ಲ: ಎಚ್‌ಡಿಕೆ



**ಬೆಂಗಳೂರು, ಮಾ.8:** ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸುವುದು ಸಂವಿಧಾನಕ್ಕೆ ಮಾಡಿದ ಅವಮಾನಕ್ಕಿಂತ ಕಡಿಮೆಯಿಲ್ಲ ಎಂದು ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಸಂಬಂಧ ಮಾಹಿತಿ ಹಂಚಿಕೊಂಡಿರುವ ಅವರು, ರಾಷ್ಟ್ರಪತಿ ಹುದ್ದೆಯು ನಮ್ಮ ಗಣರಾಜ್ಯದ ಸಾರ್ವಭೌಮತ್ವ, ಏಕತೆ ಮತ್ತು ಘನತೆಯನ್ನು ಸಂಕೇತಿಸುತ್ತದೆ ಮತ್ತು ಅದು ಎಲ್ಲಾ ರಾಜಕೀಯ ಪರಿಗಣನೆಗಳಿಗಿಂತ ಮೇಲಿರುತ್ತದೆ ಎಂದಿದ್ದಾರೆ.

ರಾಷ್ಟ್ರದ ಅತ್ಯುನ್ನತ ಸಾಂವಿಧಾನಿಕ ಅಧಿಕಾರಕ್ಕೆ ತೋರುವ ಯಾವುದೇ ಅಗೌರವವು ಪ್ರಜಾಪ್ರಭುತ್ವ ಸಂಸ್ಥೆಗಳ ಚೈತನ್ಯವನ್ನೇ ಹಾಳು ಮಾಡುತ್ತದೆ ಮತ್ತು ಆಳವಾಗಿ ತೊಂದರೆಗೊಳಿಸುವ ಪೂರ್ವನಿದರ್ಶನವನ್ನು ಸ್ಥಾಪಿಸುತ್ತದೆ. ರಾಜಕೀಯ ಸಿದ್ಧಾಂತದಲ್ಲಿನ ವ್ಯತ್ಯಾಸಗಳು ದೇಶಾದ್ಯಂತ ಸಾರ್ವತ್ರಿಕ ಗೌರವ ವನ್ನು ಹೊಂದಿರುವ ಸಾಂವಿಧಾನಿಕ ಹುದ್ದೆಗಳನ್ನು ನಿರ್ಲಕ್ಷಿಸುವುದನ್ನು ಎಂದಿಗೂ ಸಮರ್ಥಿಸುವುದಿಲ್ಲ ಎಂದು ಹೇಳಿದ್ದಾರೆ. ಪ್ರಬುದ್ಧ

ಪ್ರಜಾಪ್ರಭುತ್ವದಲ್ಲಿ, ನಮ ಸಾಂವಿಧಾನಿಕ ಚೌಕಟ್ಟನ್ನು ರಕ್ಷಿಸುವ ಸಂಸ್ಥೆಗಳ ಘನತೆಯನ್ನು ಎತ್ತಿಹಿಡಿಯುವುದು ಪಕ್ಷಪಾತದ ಸಂಬಂಧವನ್ನು ಲೆಕ್ಕಿಸದೆ ಪ್ರತಿಯೊಂದು ಸರ್ಕಾರದ ಜವಾಬ್ದಾರಿಯಾಗಿದೆ. ರಾಷ್ಟ್ರಪತಿ ಹುದ್ದೆಯ ಗೌರವವು ಉಲ್ಲಂಘಿಸಲಾಗದ ಮತ್ತು ಪಕ್ಷಪಾತದ ರಾಜಕೀಯದ ವ್ಯಾಪ್ತಿಯನ್ನು ಮೀರಿ ಉಳಿಯಬೇಕು ಎಂದು ತಾಕೀತು ಮಾಡಿದರು.


## ಆಪ್ತ ಸಹಾಯಕನ ಪುತ್ರನ ಸಂಕಷ್ಟ ಪರಿಹರಿಸಿದ ಎಸ್.ಈ ಸುಧೀಂದ್ರ

**ಬೆಂಗಳೂರು.ಮ.8:** ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಸ್.ಈ ಸುಧೀಂದ್ರ ಆಪ್ತ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸುತ್ತಿರುವಕೆ ಕಿಶೋರ್ ಕುಮಾರ್ ಅವರ ಪುತ್ರ ಕೀರ್ತಿ ಕುಮಾರ್ ನಾಯಕ್, ಯೋಜನಾ ವ್ಯವಸ್ಥಾಪಕರು, ಟ್ರಿನಿಟಿ ಮೊಬಿಲಿಟಿ ಕಂಪನಿ, ಬೆಂಗಳೂರು ಮತ್ತು ಅವರ ಸಹೋದ್ಯೋಗಿಗಳಾದ ಶ್ರೀಕಾಂತ್ ಮತ್ತು ವಿಶಾಲ್ ರೊಂದಿಗೆ ಕಾರ್ಯನಿಮಿತ್ತ ಅಬುಧಾಬಿಗೆ ತೆರಳಿದ್ದು ಈ ಯುದ್ಧ ಸಂದರ್ಭದ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ವಾಪಸ್ ಬರಲಾಗದೆ ಒತ್ತಡಕ್ಕೆ ಒಳಗಾಗಿದ್ದು ಅತಂತ್ರ ಪರಿಸ್ಥಿತಿಯಲ್ಲಿದ್ದರು.

ಕೀರ್ತಿ ಕುಮಾರ್ ಸಿನಿಮಾ ನಟರಾಗಿದ್ದು ನಸಾಬ್ ಕನ್ನಡ ಚಲನಚಿತ್ರದ ನಾಯಕ ನಟರಾಗಿದ್ದಾರೆ. ಬೆಂಗಳೂರಿನಲ್ಲಿ ಅವರ ಪೋಷಕರು ಸಹ ಮಾನಸಿಕವಾಗಿ ಜರ್ಜರಿತರಾಗಿದ್ದ ಈ ಸಂಧಿಗ್ಧ ಸಮಯದಲ್ಲಿ



ಮಂಡಳಿಯ ಅಧ್ಯಕ್ಷರಾದ ಎಸ್ ಈ ಸುಧೀಂದ್ರ ಅವರು ಕೂಡಲೇ ಅವರ ಈ ಪರಿಸ್ಥಿತಿಗೆ ಸ್ಪಂದಿಸಿ, ಧೈರ್ಯ ತುಂಬಿ ಸಿದ್ದರಾಮಯ್ಯ ಮುಖ್ಯ ಮಂತ್ರಿಗಳು,ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್. ಜೈ ಶಂಕರ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮಮೋಹನ್ ನಾಯ್ಡು, ಕೇಂದ್ರ ಸರ್ಕಾರದ ಹಾಗೂ ಅಬುದಾಬಿಯಲ್ಲಿನ ನಾಗರಿಕ ವಿಮಾನಯಾನ ಇಲಾಖೆಯ ಅಧಿಕಾರಿಗಳು, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಂಸ್ಥೆಯ ಅಧಿಕಾರಿಗಳನ್ನು ಸಂಪರ್ಕಿಸಿ ಅವರನ್ನು ಭಾರತಕ್ಕೆ ಶೀಘ್ರವಾಗಿ,ಸುರಕ್ಷಿತವಾಗಿ ಕರೆತರಲು ಸಹಾಯ ಹಸ್ತ ನೀಡಿರುವುದಕ್ಕೆ ಇಡೀ ಅವರ ಕುಟುಂಬ ಹಾಗೂ ಸ್ನೇಹಿತರು ಮಂಡಳಿಯ ಅಧ್ಯಕ್ಷರಿಗೆ ಹೃತ್ಪೂರ್ವಕ ಧನ್ಯವಾದ ಸಲ್ಲಿಸಿದ್ದಾರೆ.



ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನವದೆಹಲಿಯ ಕರ್ನಾಟಕ ಭವನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಮಾವು ಮಂಡಳಿ ಅಧ್ಯಕ್ಷೆ ಕಮಲಾಕ್ಷಿ ರಾಜಣ್ಣ ಮತ್ತು ಇತರ ಮಹಿಳಾ ಕಾಂಗ್ರೆಸ್ ಮುಖಂಡರು ಭೇಟಿಯಾಗಿದ್ದರು.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಮಾರ್ಚ್ 9, 2026, ಸೋಮವಾರ

## ಒಳಪುಟಗಳಲ್ಲಿ

ಇರಾನ್‌ಗೆ ಅಮೇರಿಕಾ-ಇಸ್ರೇಲ್‌ನಿಂದ ಬಿಗ್‌ಶಾಕ್- ಪು.4

ಬಾಲ್ಯಾವಸ್ಥೆಯಲ್ಲಿನ ಪೋಕ್ರಿ ಮಕ್ಕಳೇ, ಸಾಧಕರೆನಿಸುವುದು : ಡಾ.ಪದ್ಮನಾಭ ವಿ.ಶೆಟ್ಟಿ- ಪು.4


ಶರಣ ಬಸವೇಶ್ವರರ ಮಹಾರಥೋತ್ಸವ: ಐತಿಹಾಸಿಕ ಶರಣಬಸವೇಶ್ವರ ಜಾತ್ರೆಗೆ ಸಾಕ್ಷಿಯಾದ ಲಕ್ಷಾಂತರ ಭಕ್ತರು- ಪು.4

# ಪ್ರಧಾನಿಯಿಂದ ದೇಶದ ಮರ್ಯಾದೆ ಹಾಳು:ಖರ್ಗೆ

### ಭಾರತವನ್ನು ಅಮೆರಿಕಕ್ಕೆ ಗಿರವಿ ಇಟ್ಟಿದ್ದಾರೆ: ಮೋದಿ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಟೀಕೆ

**ಬೆಂಗಳೂರು, ಮಾ.8:** ಪ್ರಧಾನಿ ನರೇಂದ್ರ ಮೋದಿ ತಮ್ಮ ವಿದೇಶಾಂಗ ನೀತಿಯಿಂದಾಗಿ ನಮ್ಮ ದೇಶವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹಾಳುಮಾಡುತ್ತಿದ್ದಾರೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಚಿತ್ತಾಪುರ ಪಟ್ಟಣದಲ್ಲಿ ರೂ 1069 ಕೋಟಿ ವೆಚ್ಚದ ಕಾಮಗಾರಿಗಳು ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದ ಅವರು, "ಟ್ರಂಪ್ ಒಬ್ಬ ಸರ್ವಾಧಿಕಾರಿ, ಮೋದಿ ಅವರ ಗುಲಾಮ ಎಂದು ಕಟು ಟೀಕಿಸಿದ ಖರ್ಗೆ, ರಷ್ಯಾದಿಂದ ಈಗ ಒಂದು ತಿಂಗಳ ಮಾತ್ರ ತೈಲ ಖರೀದಿಗೆ ಅಮೆರಿಕ ಅನುಮತಿ ನೀಡಿದೆ. ಅಮೆರಿಕದವರು ಹೇಳಿದಂತೆ ಮೋದಿ ಕೇಳುತ್ತಿದ್ದಾರೆ. ಟ್ರಂಪ್ ಜೊತೆ ಸ್ನೇಹ ಮಾಡಿಕೊಂಡು ನಮ್ಮ ದೇಶವನ್ನು ಗಿರಿವಿ ಇಟ್ಟಿದ್ದಾರೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕಲಬುರಗಿಯಲ್ಲಿ ಭಾನುವಾರ ನಡೆದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿ, ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿದರು.

ಮಧ್ಯಪ್ರಾಚ್ಯ ನಲ್ಲಿ ನಡೆಯುತ್ತಿರುವ ಯುದ್ಧದ ಬಗ್ಗೆ ಪ್ರಸ್ತಾಪಿಸಿದ ಮಲ್ಲಿಕಾರ್ಜುನ ಖರ್ಗೆ, ಜವಾಹರ್ ಲಾಲ್ ನೆಹರು ಪ್ರಧಾನಿಯಾಗಿದ್ದಾಗ ಅಲಿಪ್ತ ನೀತಿಯ ಒಪ್ಪಂದ ಮಾಡಿಕೊಂಡಿದ್ದರಿಂದ ಅದು ವಿಶ್ವಶಾಂತಿಗೆ ಕಾರಣವಾಗಿತ್ತು. ಆದರೆ, ಮೋದಿ ಈಗ ಮಾಡುತ್ತಿರುವುದೇನು? ಮೋದಿ ಇಸ್ರೇಲ್‌ಗೆ ಹೋಗಿ ಬಂದ ನಂತರ ಅದು ಇರಾನ್ ಮೇಲೆ ಬಾಂಬ್ ಹಾಕಿತು. ದೇಶದ ಮುಖ್ಯಸ್ಥ ಖಮೇನಿಯನ್ನು ಅಮೆರಿಕದವರು ಹತ್ಯೆ ಮಾಡಿದರು.

■ ...4ನೇ ಪುಟಕ್ಕೆ

### ಎಪ್‌ಸ್ಟೀನ್ ಫೈಲ್ ಇಟ್ಟುಕೊಂಡೇ ಬೆದರಿಕೆ

ಭಾರತ ದೇಶದ 65% ರೈತರು ಕೃಷಿ ಅವಲಂಬಿತರಾಗಿದ್ದರೆ ಅಮೇರಿಕಾದದಲ್ಲಿ 3% ರಷ್ಟು ಮಾತ್ರ. ನಮ್ಮ ದೇಶದ ಉತ್ಪನ್ನಗಳಿಗೆ ಅಮೇರಿಕಾದಲ್ಲಿ ಟ್ಯಾಕ್ಸ್ ಇಲ್ಲ. ಆದರೆ, ಅಮೇರಿಕಾದ ಉತ್ಪನ್ನಗಳ ಮೇಲೆ ಮನಬಂದಂತೆ ಟ್ಯಾಕ್ಸ್ ಹಾಕಲಾಗುತ್ತಿದೆ. ಟ್ರಂಪ್ ನನ್ನ ಸ್ನೇಹಿತ ಎನ್ನುತ್ತಾರೆ. ಆದರೆ, ರಷ್ಯಾದಿಂದ ತೈಲ ಖರೀದಿ ಮಾಡಿದರೆ ನಿಮ್ಮ ಮೇಲೆ ಟ್ಯಾಕ್ಸ್ ಹಾಕುತ್ತೇನೆ ಟ್ರಂಪ್ ಹೇಳುತ್ತಾರೆ. ಟ್ರಂಪ್ ಜೊತೆ ದಿನಾಲೂ ಮಾತನಾಡುತ್ತಿರುವುದಾಗಿ ಮೋದಿ ಹೇಳುತ್ತಾರೆ. ಟ್ಯಾಕ್ಸ್ ಹಾಕುವ ಬಗ್ಗೆನೆ ಮಾತನಾಡುತ್ತಾರ? ಎಪ್‌ಸ್ಟೀನ್ ಫೈಲ್‌ನಲ್ಲಿ ಯಾರು ಎಲ್ಲಿ ಹೋಗಿದ್ದರು ಎನ್ನುವ ಮಾಹಿತಿ ಇದೆ ಎನ್ನಲಾಗುತ್ತಿದೆ. ಅದನ್ನು ಇಟ್ಟುಕೊಂಡೆ ಟ್ರಂಪ್ ಮೋದಿಗೆ ಹೆದರಿಸುತ್ತಿದ್ದಾರೆ" ಎಂದರು. ಕಾಂಗ್ರೆಸ್ ಅಧಿಕಾರದ 75 ವರ್ಷ ಆದರೂ ಕೂಡಾ ನಮ್ಮ ದೇಶದ ತಂಟೆಗೆ ಯಾರೂ ಬಂದಿರಲಿಲ್ಲ. ಪಾಕಿಸ್ತಾನವನ್ನು ಒಡೆದು ಎರಡು ಭಾಗ ಮಾಡಿದರು. ಅವರಿಗೆ ಇದ್ದಂತ ಧೈರ್ಯ ನಿಮಗೇಕಿಲ್ಲ ಎಂದು ಪ್ರಶ್ನಿಸಿದ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿರುವ ಬಿಜೆಪಿ ನಾಯಕರ ಮೇಲೆ ಹರಿಹಾಯ್ದರು. "ಬಿಜೆಪಿಯರವರಿಗಂತೂ ಕೆಲಸನೇ ಇಲ್ಲ. ಸೋನಿಯಾ, ರಾಹುಲ್, ನನಗೆ, ಪ್ರಿಯಾಂಕ್‌ಗೆ , ಸಿದ್ದರಾಮಯ್ಯಗೆ ಹಾಗೂ ಶಿವಕುಮಾರ್‌ಗೆ ಬೈಯ್ಯುವುದೇ ಕೆಲಸವಾಗಿದೆ. ನಮ್ಮ ಸರ್ಕಾರ ಇದ್ದಾಗ ಮಾಡಿರುವ ಕೆಲಸಗಳ ಬಗ್ಗೆ ಎಲ್ಲರಿಗೂ ಗೊತ್ತಿದೆ. ಗದಗ-ವಾಡಿ ರೈಲ್ವೆ ಮಾರ್ಗ, ರಸ್ತೆ, ಹೆದ್ದಾರಿ ಮಾಡಿದ್ದು ನಾವೇ ಹೊರತು ನೀವಲ್ಲ" ಎಂದು ಬಿಜೆಪಿ ವಿರುದ್ಧ ಖರ್ಗೆ ಟೀಕಿಸಿದರು.

# ಸಾಧನೆ ಗುರುತಿಸಿ ಗೌರವಿಸುವುದೇ ಮಹಿಳಾ ದಿನಾಚರಣೆಯ ಆಶಯ



■ ಸಾಮಾಜಿಕ, ದೈಹಿಕ ಸವಾಲು ಮೀರಿ ಮಹಿಳೆಯರು ಬೆಳೆದಿದ್ದರೂ ಶೋಷಣೆ ತಪ್ಪಿಲ್ಲ: ಸಿದ್ದರಾಮಯ್ಯ ಕಳವಳ

**ಬೆಂಗಳೂರು, ಮಾ.8:** ನನ್ನ ಪ್ರೀತಿಯ ಅಕ್ಕ ತಂಗಿಯರಿಗೆ, ತಾಯಂದಿರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು. ಮಹಿಳೆಯರ ಸಬಲೀಕರಣ, ಸಮಾನತೆ ಮತ್ತು ಘನತೆಯ ಬದುಕಿಗಾಗಿ ಜಾಗೃತರಾಗುವುದು, ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಾಧನೆಗಳನ್ನು ಗುರುತಿಸಿ, ಗೌರವಿಸುವುದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಆಶಯವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ಕುಟುಂಬದ ಒಳಗೆ ಮತ್ತು ಹೊರಗೆ ಮಹಿಳೆಯರ ಪಾತ್ರ ಸಾಕಷ್ಟು ಬದಲಾಗಿದೆ. ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಮಹಿಳೆಯರು ಏರದ ಎತ್ತರವಿಲ್ಲ, ಸಾಧಿಸದ ಸಾಧನೆಯಿಲ್ಲ ಎನ್ನುವಷ್ಟರ ಮಟ್ಟಿಗೆ ಮಹಿಳೆಯರು ತಮ್ಮ ಸಾಮಾಜಿಕ ಹಾಗೂ ದೈಹಿಕ ಸವಾಲುಗಳನ್ನು ಮೀರಿ ಬೆಳೆದಿದ್ದಾರೆ. ಇಷ್ಟೆಲ್ಲದರ ಹೊರತಾಗಿಯೂ ಇಂದಿಗೂ ಲಿಂಗ ಅಸಮಾನತೆ, ಕೌಟುಂಬಿಕ ದೌರ್ಜನ್ಯ, ಉದ್ಯೋಗ ಸ್ಥಳದಲ್ಲಿ ದೈಹಿಕ ಮತ್ತು ಮಾನಸಿಕ ಶೋಷಣೆಗೆ ಒಳಗಾಗುತ್ತಿರುವುದು ನಿಜಕ್ಕೂ ದುರದೃಷ್ಟಕರ ಎಂದು ಸಿಎಂ ಕಳವಳ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ಮನುಸ್ಮೃತಿಯ ಪ್ರಭಾವ ಮತ್ತು ಆಚರಣೆ ಗಾಢವಾಗಿದ್ದ ಕಾಲದಲ್ಲಿ ಸಮಾನ ಅವಕಾಶ ಎನ್ನುವುದು ಮಹಿಳೆಯರ ಪಾಲಿಗೆ ಕನ್ನಡಿಯೊಳಗಿನ ಗಂಟಿನಂತಿತ್ತು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರಿಂದ ಆರಂಭವಾದ ಸಾಮಾಜಿಕ ನ್ಯಾಯದ ಚಳವಳಿ ಬರೀ ವರ್ಣಾಧಾರಿತ ವ್ಯವಸ್ಥೆಯ ವಿರುದ್ಧದ ಪ್ರತಿರೋಧಕ್ಕೆ ಸೀಮಿತವಾಗದೆ ಲಿಂಗ ಸಮಾನತೆಯನ್ನು ಕೂಡ ಒಳಗೊಂಡಿತ್ತು ಎನ್ನುವುದು ಗಮನಾರ್ಹ ಸಂಗತಿ. ಹೀಗಾಗಿಯೇ ಅಕ್ಕಮಹಾದೇವಿ ಸೇರಿ ಅನೇಕರು ಶರಣ ಚಿಂತನೆಗಳಿಂದ ಪ್ರೇರಣೆಗೊಂಡು, ಲಿಂಗದೀಕ್ಷೆ ಪಡೆದು ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಹೆಜ್ಜೆಹಾಕಿದರು. ಹಲವು ಮಹಾನ್ ನಾಯಕರು ಮಹಿಳಾ ಸಮಾನತೆಯ ಹೋರಾಟವನ್ನು ಮುನ್ನಡೆಸಿಕೊಂಡು ಬಂದ ನಿದರ್ಶನಗಳು ಇತಿಹಾಸ ಪುಟಗಳಲ್ಲಿದೆ. ಭಾರತಕ್ಕೆ ಬ್ರಿಟಿಷರ ಆಗಮನದ ತರುವಾಯ ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದಾಗಿ ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಳು ಸುಧಾರಣೆ ಕಂಡರೂ, ಸಮಾಧಾನಕರ ಎನ್ನುವ ಸ್ಥಿತಿ ತಲಪಲು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯ ನಂತರ ಬಾಬಾಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಅನುಷ್ಠಾನದೊಂದಿಗೆ ದೇಶದಲ್ಲಿ ಸ್ತ್ರೀ ಶೋಷಣೆಯ ಕರಾಳತೆ ಕ್ಷೀಣಿಸುತ್ತಾ ಬಂದಿದೆ. ಮಹಿಳೆಯರಿಗೆ ಲಿಂಗ ತಾರತಮ್ಯ, ದೈಹಿಕ ಹಾಗೂ ಮಾನಸಿಕ ಶೋಷಣೆಗಳಿಂದ ಸಂವಿಧಾನವು ರಕ್ಷಣೆ ನೀಡಿ, ಅವಕಾಶಗಳ ಬಾಗಿಲು ತೆರೆಯುವಂತೆ ಮಾಡಿತು ಎಂದಿದ್ದಾರೆ.

ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಸಾಧನೆ ಮಾಡುವ ವಿಚಾರದಲ್ಲಿ ಪುರುಷರಿಗಿಂತ ಮಹಿಳೆಯರೆ ಮುಂದಿದ್ದಾರೆ ಎನ್ನುವ ಅಂಶವನ್ನು ಒಪ್ಪಿಕೊಳ್ಳಲೇಬೇಕು. ಇತ್ತೀಚಿನ ಯುಪಿಎಸ್.ಸಿ ಪರೀಕ್ಷೆಯಲ್ಲಿ 25ಕ್ಕೂ ಹೆಚ್ಚು ಕನ್ನಡಿಗರು ಆಯ್ಕೆಯಾಗಿದ್ದು, ಇವರಲ್ಲಿ ಮಹಿಳೆಯರು ಕೂಡ ಸಾಧನೆ ಮಾಡಿರುವುದು ಹೆಮ್ಮೆಯ ವಿಚಾರ ಎಂದಿದ್ದಾರೆ.

### ಇತರೆಡೆ ಆಚರಣೆಯಷ್ಟೇ ಕರ್ನಾಟಕದಲ್ಲಿ ಸಾರ್ಥಕವಾಗಿಸಿದ್ದೇವೆ

**ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಕೂಡ ಮಹಿಳಾ ಕೇಂದ್ರಿತವಾಗಿವೆ. ಎನ್ನುವುದಕ್ಕೆ ಹೆಮ್ಮೆಯಾಗುತ್ತದೆ. 2026-27ನೇ ಸಾಲಿನ ಬಜೆಟ್ ನಲ್ಲಿ ಮಹಿಳಾ ಉದ್ದೇಶಿತ ಕಾರ್ಯಕ್ರಮಗಳಿಗಾಗಿ ರೂ. 94,663 ಕೋಟಿ ಅನುದಾನ ಘೋಷಣೆ ಮಾಡಿ, ಹೆಣ್ಣುಮಕ್ಕಳನ್ನು ಸಮಾನವಾಗಿ ಪ್ರಗತಿಯ ಹಾದಿಯಲ್ಲಿ ಮುನ್ನಡೆಸುವ ಪ್ರಯತ್ನ ಮಾಡಲಾಗಿದೆ. ಜಗತ್ತಿನೆಲ್ಲೆಡೆ ಇಂದು ಅಂತಾರಾಷ್ಟ್ರೀಯ ಮಹಿಳಾ ದಿನವು ಸಂಭ್ರಮದಿಂದ ಆಚರಿಸಲ್ಪಡುತ್ತಿದ್ದರೆ, ಕರ್ನಾಟಕದಲ್ಲಿ ಈ ದಿನವನ್ನು ಸಾರ್ಥಕವಾಗಿಸಿದ್ದೇವೆ. ಹೆಣ್ಣು ಸಂಸಾರದ ಕಣ್ಣು ಮಾತ್ರವಲ್ಲ, ಪುರುಷರ ಬದುಕಿಗೆ ಪರಿಪೂರ್ಣತೆಯನ್ನು ಕೊಡುವ ಪ್ರಕೃತಿಯ ವಿಶಿಷ್ಟ, ಅನನ್ಯ ಸೃಷ್ಟಿ. ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ ಬದುಕಿನ ಬಂಡಿಯ ನೊಗಹೊತ್ತು, ಪುರುಷರಿಗೆ ಸಮನಾಗಿ ದುಡಿಯುತ್ತಿರುವ ಮಹಿಳೆಯರ ತ್ಯಾಗ, ಸೇವೆ, ಸಮರ್ಪಣೆಯನ್ನು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಇಂದು ಸ್ಮರಿಸಿ, ಗೌರವಿಸಬೇಕಿರುವುದು ನಮ್ಮೆಲ್ಲರ ಕರ್ತವ್ಯ. ಮತ್ತೊಮ್ಮೆ ನಾಡಿನ ಸಮಸ್ತ ಮಹಿಳೆಯರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳನ್ನು ತಿಳಿಸಬಯಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.**

# ಟಿ20 ವಿಶ್ವಕಪ್ ಇತಿಹಾಸ ಬರೆದ ಭಾರತ




**ಅಹ್ಮದಾಬಾದ್, ಮಾ.8:** ಐಸಿಸಿ ಪುರುಷರ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ 96 ರನ್‌ಗಳ ಜಯಗಳಿಸಿದ್ದು ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಅಹ್ಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಗೆಲ್ಲುವ ಮೂಲಕ ಭಾರತ ತಂಡ ಹಲವು ವಿಶ್ವ ದಾಖಲೆಗಳನ್ನು ಬರೆದಿದೆ. 2024ರಲ್ಲಿ ಟಿ20 ವಿಶ್ವಕಪ್ ಗೆದ್ದು ಚಾಂಪಿಯನ್ ಆಗಿದ್ದ ಭಾರತ ಕ್ರಿಕೆಟ್ ತಂಡ ತನ್ನ ಪಟ್ಟವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಟಿ20 ವಿಶ್ವಕಪ್ ಇತಿಹಾಸದಲ್ಲಿ ಯಾವುದೇ ಹಾಲಿ ಚಾಂಪಿಯನ್ ತಂಡ ಸತತ 2ನೇ ಬಾರಿಗೆ ವಿಶ್ವಕಪ್ ಗೆದ್ದ ಇತಿಹಾಸವಿಲ್ಲ. ಆದರೆ ಭಾರತ ಈ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ಸತತ 2ನೇ ಬಾರಿಗೆ ವಿಶ್ವಕಪ್ ಗೆದ್ದಿರುವುದು ಮೊದಲ ದಾಖಲೆಯಾಗಿದೆ.

ಟಿ20 ವಿಶ್ವಕಪ್ ಟೂರ್ನಿ ಆಯೋಜಿಸಿದ್ದ ಯಾವುದೇ ಆತಿಥೇಯ ತಂಡ ಈವರೆಗೂ ವಿಶ್ವಕಪ್ ತನ್ನದಾಗಿಸಿಕೊಂಡ ಇತಿಹಾಸವಿರಲಿಲ್ಲ. ಆದರೆ ಈ ವಿಭಾಗದಲ್ಲೂ ಅತ್ಯದ್ಭುತ ಸಾಧನೆ ಮಾಡಿದ್ದು, ಆತಿಥೇಯ ತಂಡವೊಂದು ಮೊದಲ ಬಾರಿಗೆ ವಿಶ್ವಕಪ್ ಪಟ್ಟ ಪಡೆದ ತಂಡ ಎಂಬ ಹೆಗ್ಗಳಿಕೆಗೆ ಭಾರತ ಕ್ರಿಕೆಟ್ ತಂಡ ಪಾತ್ರವಾಗಿದೆ.

**3ನೇ ಬಾರಿಗೆ ಚಾಂಪಿಯನ್ ಪಟ್ಟ ಪಡೆದ ಮೊದಲ ತಂಡ:** ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗರಿಷ್ಠ ಬಾರಿ ವಿಶ್ವಕಪ್ ಗೆದ್ದ ತಂಡ ಎಂಬ ಹೆಗ್ಗಳಿಕೆಗೂ ಭಾರತ ಕ್ರಿಕೆಟ್ ತಂಡ ಪಾತ್ರವಾಗಿದೆ. 2007ರಲ್ಲಿ ಮೊದಲ ಬಾರಿಗೆ ಎಂಎಸ್ ಧೋನಿ ನೇತೃತ್ವದಲ್ಲಿ ಭಾರತ ಕ್ರಿಕೆಟ್ ತಂಡ ಪಾಕಿಸ್ತಾನವನ್ನು ಮಣಿಸಿ ಟಿ20 ವಿಶ್ವಕಪ್ ಟ್ರೋಫಿ ಪಡೆದಿತ್ತು. ಆ ಬಳಿಕ 2024 ರಲ್ಲಿ ಭಾರತ ದಕ್ಷಿಣ ಆಫ್ರಿಕಾ ವಿರುದ್ಧ ಗೆಲುವು ಸಾಧಿಸಿ 2ನೇ ಬಾರಿಗೆ ಟ್ರೋಫಿಯನ್ನು ತನ್ನದಾಗಿಸಿಕೊಂಡಿತ್ತು. ಈಗ ನ್ಯೂಜಿಲ್ಯಾಂಡ್ ವಿರುದ್ಧ ಗೆಲುವು ಸಾಧಿಸಿ 3ನೇ ಬಾರಿಗೆ ವಿಶ್ವಕಪ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ.

# 2 ವರ್ಷಗಳಲ್ಲಿ ಕಲಬುರಗಿಗೆ 2000 ಕೋಟಿ ಅನುದಾನ



■ ಕೊಳಚೆ ನಿರ್ಮೂಲನಾ ಮಂಡಳಿಯಿಂದ 2000 ಮನೆ ಹಂಚಿಕೆ: ಡಿ.ಕೆ. ಶಿವಕುಮಾರ್

ಬೆಂಗಳೂರು ಮಾ.8: ಕಳೆದ ಎರಡು ವರ್ಷಗಳಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಕಲಬುರಗಿ ಜಿಲ್ಲೆಗೆ ನೀಡಲಾಗಿದೆ. 2000 ಮನೆಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹಂಚಿಕೆ ಮಾಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಕಲಬುರ್ಗಿಯಲ್ಲಿ ಭಾನುವಾರ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 365 ಕೋಟಿ ರೂ.ವೆಚ್ಚದಲ್ಲಿ ಬೆಣ್ಣೆತೊರಾ ಜಲಾಶಯಕ್ಕೆ ಕಾಗಿಣಾ ಮತ್ತು ಭೀಮಾನದಿ ಸಂಗಮದಿಂದ ನೀರು ತುಂಬಿಸಲಾಗುತ್ತಿದೆ. ಐದು ಗ್ಯಾರಂಟಿಗಳ ಜೊತೆಗೆ ಭೂ ಗ್ಯಾರಂಟಿ ನೀಡಿ ಬಡವರ ಮನೆ ಬೆಳಕಾಗಿದ್ದೇವೆ. 400 ಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸುವ ಕೆಲಸ ಮಾಡುತ್ತೇವೆ ಆ ಮೂಲಕ ನೀರಾವರಿ ಗ್ಯಾರಂಟಿ ನೀಡುತ್ತಿದ್ದೇವೆ" ಎಂದರು.

"ಶಿಕ್ಷಣ ಇಲಾಖೆ ಅಡಿಯಲ್ಲಿ ರಾಜ್ಯದಲ್ಲಿ 2000 ಕೆಪಿಎಸ್ ಶಾಲೆಗಳನ್ನು ಸ್ಥಾಪಿಸಲು ತೀರ್ಮಾನ ಮಾಡಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 330 ಶಾಲೆಗಳನ್ನು ಸ್ಥಾಪಿಸಲಾಗುತ್ತದೆ. ಜೊತೆಗೆ 2.50 ಲಕ್ಷ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲಾಗುವುದು. ಸದ್ಯ 56,000 ಕ್ಕೂ ಅಧಿಕ ಖಾಲಿ ಹುದ್ದೆ ತುಂಬಲು ಈಗಾಗಲೇ ಕ್ರಮವಹಿಸಲಾಗಿದೆ. "ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನರಿಗೆ ನೆಮ್ಮದಿ ಜೀವನ ನಡೆಸಲು ಸರ್ಕಾರ ಪ್ರತಿ ವರ್ಷ 52,000 ಕೋಟಿ ರೂ.ಗೂ ಅಧಿಕ ವೆಚ್ಚ ಮಾಡುತ್ತಿದೆ. ಇದು ನಮ್ಮ ಬದ್ಧತೆ" ಎಂದರು.

"ಸಾಧನೆ ತನ್ನ ಪಾಡಿಗೆ ಆಗುವುದಿಲ್ಲ. ಅದರ ಹಿಂದೆ ಶ್ರಮ ಇರಬೇಕು, ಛಲ ಇರಬೇಕು. ಜನರ ಬದುಕನ್ನು ಬದಲಾವಣೆ ಮಾಡುತ್ತೇನೆ ಎನ್ನುವ ಹಠ ಇರಬೇಕು. ಜನರ ಕಣ್ಣೀರನ್ನು ಒರೆಸುವ ಕೆಲಸ ಮಾಡಬೇಕು. ಮಲ್ಲಿಕಾರ್ಜುನ ಖರ್ಗೆ ಅವರ ಋಣವನ್ನು ಕಲ್ಯಾಣ ಕರ್ನಾಟಕದ ಜನತೆ ತೀರಿಸಿದ್ದಾರೆ. 371 ಜೆ ಮೂಲಕ ಈ ಭಾಗದ ಜನರ ಬದುಕನ್ನು ಬದಲಾವಣೆ ಮಾಡಿದ್ದಾರೆ. ಈ ಭಾಗದಲ್ಲಿ ಸಂಸತ್ ಸದಸ್ಯರನ್ನು ಗೆಲ್ಲಿಸುವ ಮೂಲಕ ಅವರಿಗೆ ಋಣ ಸಂದಾಯ ಮಾಡಿದ್ದೀರಿ" "ನಮ್ಮ ರಾಜ್ಯಕ್ಕೆ ಭವಿಷ್ಯದ ನಾಯಕರಾಗಿ ಪ್ರಿಯಾಂಕ್ ಖರ್ಗೆ ಅವರನ್ನು ಈ ಕಲಬುರ್ಗಿ ಜನತೆ ನೀಡಿದ್ದಾರೆ. ಅವರಿಗೆ ನಮ್ಮೆಲ್ಲರ ಪರವಾಗಿ ಕೋಟಿ, ಕೋಟಿ ನಮಸ್ಕಾರಗಳು" ಎಂದರು.

"ಮಲ್ಲಿಕಾರ್ಜುನ ಖರ್ಗೆ ಅವರು ಈ ಹಿಂದೆ ನೀರಾವರಿ ಸಚಿವರಾಗಿದ್ದಾಗ ನೂರಾರು ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಿ ಕೆರೆಗಳನ್ನು ತುಂಬಿಸಿದರು. ಅನೇಕ ಕಡೆ ಅಂತರ್ಜಲ ಸಾವಿರಾರು ಅಡಿ ತಲುಪಿತ್ತು. ಈಗ 300- 400 ಅಡಿಗಳಿಗೆ ನೀರು ದೊರೆಯುತ್ತಿದೆ". ಕಲ್ಯಾಣ ಕರ್ನಾಟಕಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆ ಶತಮಾನಗಳ ಕಾಲ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದರು.

ಬಿಜೆಪಿ ಸರ್ಕಾರ ಗ್ಯಾಸ್ ಸಿಲಿಂಡರ್ ಬೆಲೆಯನ್ನು 60 ರೂಪಾಯಿ ಏರಿಕೆ ಮಾಡಿದೆ. ಇದರ ಬಗ್ಗೆ ಒಬ್ಬನೇ ಒಬ್ಬ ಬಿಜೆಪಿ ನಾಯಕರು ಬಾಯಿ ಬಿಡುತ್ತಿಲ್ಲ. ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ, ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ" ಎಂದು ತಿಳಿಸಿದರು.

# ಯುದ್ಧಪೀಡಿತ ಗಲ್ಫ್ ದೇಶಗಳಿಂದ 52 ಸಾವಿರಕ್ಕೂ ಹೆಚ್ಚು ಭಾರತೀಯರು ವಾಪಸ್



■ ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಮಾಹಿತಿ

**ನವದೆಹಲಿ, ಮಾ.8:** ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿಯನ್ನು ಸರ್ಕಾರ ಮೇಲ್ವಿಚಾರಣೆ ಮಾಡುತ್ತಿರುವುದರಿಂದ ಮಾರ್ಚ್ 1ರಿಂದ 7 ರವರೆಗೆ ಗಲ್ಫ್ ಪ್ರದೇಶದಿಂದ 52,000 ಕ್ಕೂ ಹೆಚ್ಚು ಭಾರತೀಯರು ಸುರಕ್ಷಿತವಾಗಿ ಭಾರತಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಈ ಪ್ರದೇಶದ ಬೆಳವಣಿಗೆಗಳನ್ನು, ವಿಶೇಷವಾಗಿ ಸಾರಿಗೆ ಸಮಯದಲ್ಲಿ ಅಥವಾ ಅಲ್ಪಾವಧಿಯ ಭೇಟಿಗಳಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಪ್ರಜೆಗಳ ಕಲ್ಯಾಣವನ್ನು ಸರ್ಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ಪ್ರದೇಶದಲ್ಲಿ ವಾಯುಪ್ರದೇಶವನ್ನು ಭಾಗಶಃ ಪುನಃ ತೆರೆದ ನಂತರ, ಹಲವಾರು ಭಾರತೀಯ ಮತ್ತು ವಿದೇಶಿ ವಿಮಾನಯಾನ ಸಂಸ್ಥೆಗಳು ವಾಣಿಜ್ಯ ಮತ್ತು ನಿಗದಿತವಲ್ಲದ ವಿಮಾನಗಳನ್ನು ಪುನರ್ ಆರಂಭಿಸಿವೆ, ಇದರಿಂದಾಗಿ ಸಿಕ್ಕಿಬಿದ್ದ ಪ್ರಯಾಣಿಕರು ಮನೆಗೆ ಮರಳಲು ಅನುವು ಮಾಡಿಕೊಡುತ್ತದೆ. ಇದೀಗ, 52,000ಕ್ಕೂ ಹೆಚ್ಚು ಭಾರತೀಯರು ಈ ವಿಮಾನಗಳನ್ನು ಬಳಸಿಕೊಂಡಿದ್ದಾರೆ. ಮತ್ತು ಮಾರ್ಚ್ 1-7, 2026ರ ನಡುವೆ ಗಲ್ಫ್ ಪ್ರದೇಶದಿಂದ ಭಾರತಕ್ಕೆ ಸುರಕ್ಷಿತವಾಗಿ ಪ್ರಯಾಣಿಸಿದ್ದಾರೆ, ಅದರಲ್ಲಿ 32,107 ಪ್ರಯಾಣಿಕರು ಭಾರತೀಯ ವಿಮಾನಗಳಲ್ಲಿ ಪ್ರಯಾಣಿಸಿದ್ದಾರೆ ಎಂದು MEA ತಿಳಿಸಿದೆ, ಮುಂಬರುವ ದಿನಗಳಲ್ಲಿ ಹೆಚ್ಚಿನ ವಿಮಾನಗಳನ್ನು ಯೋಜಿಸಲಾಗಿದೆ ಎಂದು ಹೇಳಿದರು. ಪ್ರಸ್ತುತ ಪರಿಸ್ಥಿತಿಯಿಂದ ತೊಂದರೆಗೊಳಗಾಗಿರುವ ನಾಗರಿಕರಿಗೆ ಸಹಾಯ ಮಾಡಲು 24 ಗಂಟೆಗಳ ಸಹಾಯವಾಣಿ ಸ್ಥಾಪಿಸಿರುವ ಸ್ಥಳೀಯ ಅಧಿಕಾರಿಗಳ ಮಾರ್ಗಸೂಚಿಗಳು ಮತ್ತು ಭಾರತೀಯ ರಾಯಭಾರ ಕಚೇರಿಗಳು ಮತ್ತು ದೂತಾವಾಸಗಳು ನೀಡುವ ಸಲಹೆಗಳನ್ನು ಪಾಲಿಸುವಂತೆ ಸಚಿವಾಲಯವು ಈ ಪ್ರದೇಶದ ಭಾರತೀಯ ಪ್ರಜೆಗಳಿಗೆ ಸಲಹೆ ನೀಡಿದೆ. ಭಾರತೀಯ ಪ್ರಜೆಗಳು ಮತ್ತು ಅವರ ಕುಟುಂಬಗಳ ಪ್ರಶ್ನೆಗಳಿಗೆ ಸ್ಪಂದಿಸಲು ವಿದೇಶಾಂಗ ಸಚಿವಾಲಯವು ಮೀಸಲಾದ ವಿಶೇಷ ನಿಯಂತ್ರಣ ಕೊಠಡಿಯನ್ನು ಸಹ ಸ್ಥಾಪಿಸಿದೆ. ವಿದೇಶದಲ್ಲಿರುವ ಭಾರತೀಯರ ಸುರಕ್ಷತೆ ಮತ್ತು ಕಲ್ಯಾಣವು ತನ್ನ ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ಸರ್ಕಾರ ಹೇಳಿದೆ, ಸಹಾಯದ ಅಗತ್ಯವಿರುವವರಿಗೆ ಸಹಾಯವನ್ನು ಒದಗಿಸಲು ಪ್ರದೇಶದಾದ್ಯಂತದ ಸರ್ಕಾರಗಳೊಂದಿಗೆ ನಿರಂತರವಾಗಿ ತೊಡಗಿಸಿಕೊಂಡಿದೆ ಎಂದು ಹೇಳಿದ್ದಾರೆ.

# ಶೇ.33 ಮಹಿಳಾ ಮೀಸಲಾತಿ: 2032-33ರಲ್ಲಿ ಅನುಷ್ಠಾನಕ್ಕೆ- ಎಚ್.ಡಿ.ಕುಮಾರಸ್ವಾಮಿ

### ಮುಂದಿನ ದಿನಗಳಲ್ಲಿ ಸಂಸದೀಯ ವ್ಯವಸ್ಥೆಯ ಹೆಗ್ಗಳಿಕೆ ಹೆಚ್ಚಿಸಲಿದೆ



**ಬೆಂಗಳೂರು, ಮಾ.8:** ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ನೀಡಿರುವ ಶೇ.33% ಮೀಸಲು ಮುಂದಿನ ದಿನಗಳಲ್ಲಿನ ಸಂಸದೀಯ ವ್ಯವಸ್ಥೆಯ ಹೆಗ್ಗಳಿಕೆಯನ್ನು ಮತ್ತಷ್ಟು ಹೆಚ್ಚಿಸಲಿದೆ. ನನಗೆ ಇರುವ ಮಾಹಿತಿ ಪ್ರಕಾರ 2032-33ರಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರಬಹುದು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಡಾ. ಬಾಬು ಜಗಜೀವನ ರಾಮ್ ಭವನದಲ್ಲಿ ಜೆಡಿಎಸ್ ಮಹಿಳಾ ಘಟಕ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, 33% ಮಹಿಳಾ ಮೀಸಲಾತಿ ಜಾರಿಗೆ ಬಂದರೆ ವಿಧಾನಸಭೆಯಲ್ಲಿ 75 ಮಹಿಳೆಯರೇ ಶಾಸಕಿಯರು ಇರುತ್ತಾರೆ. ಎಲ್ಲ ಪಕ್ಷಗಳ ಮಹಿಳೆಯರು ಮನಸ್ಸು ಮಾಡಿದರೆ ಮಹಿಳೆಯೇ ಮುಖ್ಯಮಂತ್ರಿಯೇ ಆಗಬಹುದು. ಅಂಥ ಅವಕಾಶ ಮೀಸಲಾತಿಯಿಂದ ಸಾಧ್ಯವಾಗುತ್ತದೆ ಎಂದು ಹೇಳಿದರು.

ನರೇಂದ್ರ ಮೋದಿ ಅವರ ಸಂಕಲ್ಪದಿಂದಾಗಿ ಇಂದು ರಾಷ್ಟ್ರದಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರುತ್ತಿದೆ. ಅದರ ಕನಸು ಕಂಡಿದ್ದವರು ದೇವೇಗೌಡರು. ಮಹಿಳೆಯರ ಪರವಾಗಿ ದೇವೇಗೌಡರು ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಈ ರಾಜ್ಯದಲ್ಲಿ ಪ್ರಥಮ ಬಾರಿಗೆ 70% ಮಹಿಳಾ ಶಿಕ್ಷಕರನ್ನು ನೇಮಿಸಿಕೊಂಡಿದ್ದು ದೇವೇಗೌಡರು ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ 50%ರಷ್ಟು ನೀಡಿದ್ದು ದೇವೇಗೌಡರು. 1996ರಲ್ಲಿ ದೇವೇಗೌಡರು ಪ್ರಧಾನಿ ಆಗಿ ಹೋದಮೇಲೆ ರಾಜ್ಯಸಭೆಯಲ್ಲಿ ಮಹಿಳೆಯರಿಗೆ 33% ಮೀಸಲು ನೀಡುವ ವಿಧೇಯಕ ಮಂಡಿಸಿದ್ದರು. ಆದರೆ, ಸಮಾಜವಾದಿ ಪಕ್ಷ, ಆರ್ ಜೆಡಿ ಬೆಂಬಲ ನೀಡದ ಕಾರಣಕ್ಕೆ ಲೋಕಸಭೆಯಲ್ಲಿ ಆ ವಿಧೇಯಕ ಅಂಗೀಕಾರ ಆಗಲಿಲ್ಲ. ಆದರೆ, ದೈವ ಕೃಪೆ ಇತ್ತು. ನಾವು ಇಂದು ಎನ್ಡಿಎ ಮೈತ್ರಿಯಲ್ಲಿ ಇದ್ದೇವೆ. ದೇವೇಗೌಡರ ಕನಸನ್ನು ಮೋದಿಯವರು ಲೋಕಸಭೆಯಲ್ಲಿ ನನಸು ಮಾಡಿದರು ಎಂದು ಕುಮಾರಸ್ವಾಮಿ ಹೇಳಿದರು.

ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಜೆಡಿಎಸ್ ಜಿಬಿಎ ಅಧ್ಯಕ್ಷ ಹೆಚ್.ಎಂ. ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಜವರಾಯಿ ಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಮುಂತಾದವರು ಹಾಜರಿದ್ದರು.

### ಮನೆಯವರೇ ಮಹಿಳೆಯರ ಅಧಿಕಾರ ಕಸಿಯಬಾರದು

ಮಹಿಳೆಯರು ಎತ್ತರಕ್ಕೆ ಬೆಳೆಯುವ ಅವಕಾಶವನ್ನು ಮೋದಿ ಅವರು ನೀಡಿದ್ದಾರೆ. ಆದರೆ, ನಿಮ್ಮ ಅಧಿಕಾರವನ್ನು ನಿಮ್ಮ ಮನೆಯವರು ಕಸಿಯುವ ಪರಿಸ್ಥಿತಿ ಬರಬಾರದು ಎಂದು ಮಹಿಳಾ ಕಾರ್ಯಕರ್ತೆಯರಿಗೆ ಸಚಿವರು ಕಿವಿಮಾತು ಹೇಳಿದರು. ಮಹಿಳೆಯರು ಅಡುಗೆ ಮನೆಗೆ, ದನಕರು ಸಾಕೋದಕ್ಕೆ ಸೀಮಿತ ಅಂತ ಹಿಂದಿನ ದಿನಗಳಲ್ಲಿ ಭಾವಿಸಲಾಗಿತ್ತು. ಆಗ ಮಹಿಳೆಯರ ಹಕ್ಕುಗಳನ್ನು ಮೊಟಕುಗೊಳಿಸಲಾಗಿತ್ತು. ಈಗ ಮಹಿಳೆಯರು ಎಲ್ಲಾ ರಂಗಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ವಿಜ್ಞಾನ ತಂತ್ರಜ್ಞಾನ, ಬಾಹ್ಯಾಕಾಶ, ಸೇನೆ, ಉದ್ಯಮ ಸೇರಿದಂತೆ ಎಲ್ಲ ಕಡೆಯೂ ಮಹಿಳೆಯರು ಇದ್ದಾರೆ ಎಂದು ಎಚ್.ಡಿ. ಕುಮಾರಸ್ವಾಮಿ ಸಂತಸ ವ್ಯಕ್ತಪಡಿಸಿದರು.

### ಜಿಬಿಎ ಚುನಾವಣೆಗೆ ಮಹಿಳಾ ಕಾರ್ಯಕರ್ತರು ಸಜ್ಜಾಗಿ

**ಜಿಬಿಎನಲ್ಲಿ 50% ಮಹಿಳಾ ಮೀಸಲಾತಿ ಘೋಷಣೆ ಆಗಿದೆ. 170-180 ಮಹಿಳೆಯರು ಸ್ಪರ್ಧೆ ಮಾಡಬೇಕಾಗುತ್ತದೆ. ಜೆಡಿಎಸ್‌ನಲ್ಲಿ ಮಹಿಳೆಯರಿಗೆ ಶಕ್ತಿ ತುಂಬುವುದು, ತಿಳಿವಳಿಕೆ ಮೂಡಿಸುವ ಕೆಲಸ ಆಗಬೇಕು. ಈಗಿನಿಂದಲೇ ಚುನಾವಣೆಗೆ ತಯಾರಿ ನಡೆಸಬೇಕು ಎಂದು ಎಚ್‌ಡಿಕೆ ಕರೆ ನೀಡಿದರು. ಜಿಬಿಎ ಚುನಾವಣೆ ಯಾವಾಗ ಬೇಕಾದರೂ ಬರಬಹುದು. ಅದಕ್ಕೆ ಮಹಿಳಾ ಕಾರ್ಯಕರ್ತರು ಸಜ್ಜಾಗಬೇಕು. ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯದ ಕೊರತೆ ಇದೆ. ಇಂಥ ವ್ಯವಸ್ಥೆಗೆ ಯಾರು ಕಾರಣ ಅಂತ ನಗರದ ಜನತೆಗೆ ತಿಳಿಸಬೇಕು. ನಮ್ಮ ಪಕ್ಷದ ಮಹಿಳೆಯರು ಸಕ್ರಿಯರಾಗಿ ಕೆಲಸ ಮಾಡಬೇಕು. ನಮ್ಮಿಂದ, ನಮ್ಮ ಮುಖಂಡರಿಂದ ಎಲ್ಲ ಸಹಕಾರ ಸಿಗಲಿದೆ. ಜೆಡಿಎಸ್‌ನಿಂದ ಹೆಚ್ಚಿನ ಮಹಿಳೆಯರು ಸ್ಪರ್ಧಿಸಬೇಕು, ಹೆಚ್ಚಿನ ಮಹಿಳೆಯರು ಗೆದ್ದು ಬರಬೇಕು ಎಂದು ಕರೆ ನೀಡಿದರು.**

# ಇರಾನ್‌ಗೆ ಅಮೆರಿಕಾ–ಇಸ್ರೇಲ್‌ನಿಂದ ಬಿಗ್ ಶಾಕ್

**ನವದೆಹಲಿ, ಮಾ.8:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷ ಒಂಭತ್ತನೇ ದಿನಕ್ಕೆ ಕಾಲಿಟ್ಟಿದೆ. ದಾಳಿ ಪ್ರತಿದಾಳಿಗಳು ತೀವ್ರಗೊಂಡಿದ್ದು ಸೇನಾ ನೆಲೆಗಳು, ಮೂಲಸೌಕರ್ಯಗಳ ದಾಳಿ ಬಳಿಕ ಈಗ ಇಂಧನ ಸಂಗ್ರಹಣಾ ಸೌಲಭ್ಯಗಳು, ಪರಮಾಣು ಕೇಂದ್ರಗಳ ಮೇಲೆ ದಾಳಿ ಮಾಡುವ ಹಂತವನ್ನು ತಲುಪಿದೆ. ಪ್ರತಿದಾಳಿಯ ಬೇಗೇಯಲ್ಲಿರುವ ಇರಾನ್‌ಗೆ ಅಮೇರಿಕಾ ಬಿಗ್ ಶಾಕ್ ಕೊಟ್ಟಿದೆ. ಇರಾನ್‌ನ ದಕ್ಷಿಣ ಟೆಹ್ರಾನ್‌ನಲ್ಲಿರುವ ತೈಲ ಸಂಗ್ರಹಣಾ ವ್ಯವಸ್ಥೆ ಗುರಿಯಾಗಿಸಿಕೊಂಡು ಅಮೇರಿಕಾ ದಾಳಿ ನಡೆಸಿದೆ, ಸ್ಫೋಟದ ತೀವ್ರತೆಗೆ ಗಗನದೆತ್ತರಕ್ಕೆ ಬೆಂಕಿಯ ಕೆನ್ನಾಲಿಗೆ ಆವರಿಸಿಕೊಂಡಿದೆ. ಮಾಹಿತಿಗಳ ಪ್ರಕಾರ, ತೈಲ ಸಂಗ್ರಹಣಾ ವ್ಯವಸ್ಥೆ ಹತ್ತಿರದ ಸಂಸ್ಕರಣಾಗಾರಕ್ಕೆ ಯಾವುದೇ ಹಾನಿಯಾಗಿಲ್ಲ ಈ ದಾಳಿಗಳು ನಗರದಾದ್ಯಂತ ಬೆಂಕಿ ಮತ್ತು ಹೊಗೆಯನ್ನು ಹರಡಿದೆ ಅಲ್ಬೋರ್ಜ್ ಪ್ರಾಂತ್ಯದ ಕರಾಜ್ ನಗರದಲ್ಲಿಯೂ ಸ್ಫೋಟಗಳ ಶಬ್ದ ಕೇಳಿಬಂದಿದೆ ಎನ್ನಲಾಗಿದೆ.. ಈ ದಾಳಿಯನ್ನು ಇಸ್ರೇಲ್ ಸೇನೆ ಕೂಡಾ ಖಚಿತಪಡಿಸಿದೆ.

**ಇರಾನ್ ಪರಮಾಣು ಮೇಲೆ ಕಣ್ಣು:** ಇರಾನ್‌ನಲ್ಲಿ ಸಮೃದ್ಧವಾಗಿರುವ ಯುರೇನಿಯಂನ ದಾಸ್ತಾನನ್ನು ಭದ್ರಪಡಿಸಿಕೊಳ್ಳಲು ವಿಶೇಷ ಪಡೆಗಳನ್ನು ನಿಯೋಜಿಸುವ ಸಾಧ್ಯತೆಯ ಕುರಿತು ಅಮೆರಿಕ ಮತ್ತು ಇಸ್ರೇಲ್ ಚರ್ಚೆಗಳನ್ನು ನಡೆಸಿವೆ ಎಂದು ವರದಿಯಾಗಿದೆ. ಮೂಲಗಳ ಪ್ರಕಾರ, ನಡೆಯುತ್ತಿರುವ ಯುದ್ಧದ ನಂತರದ ಹಂತದಲ್ಲಿ ಅಂತಹ ಕಾರ್ಯಾಚರಣೆಯನ್ನು ಪರಿಗಣಿಸಲಾಗುವುದು. ಯುದ್ಧಗಳು ಉಲ್ಬಣಗೊಳ್ಳುತ್ತಿರುವುದರಿಂದ ಇರಾನಿನ ಪರಮಾಣು ಸ್ವತ್ತುಗಳ ಮೇಲೆ ನಿರ್ಣಾಯಕ ಗಮನವನ್ನು ಹರಿಸಿದೆ ಎನ್ನಲಾಗುತ್ತಿದೆ.

**ಇಸ್ರೇಲ್ ಪರಮಾಣು ಕೇಂದ್ರದ ಮೇಲೆ ಇರಾನ್ ದಾಳಿ:** ತನ್ನ ಪರಮಾಣು ಕೇಂದ್ರಗಳನ್ನು ಗುರಿಯಾಗಿಸಿದ್ದ ಇಸ್ರೇಲ್ ವಿರುದ್ಧ ಪ್ರತಿಕಾರಕ್ಕೆ ಮುಂದಾಗಿರುವ ಇರಾನ್, ಇಸ್ರೇಲ್ ಪರಮಾಣು ಕೇಂದ್ರವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ.. ಜೆರುಸೆಲಂನಿಂದ 40 ಕಿಮೀ ದೂರವಿರುವ ಪರಮಾಣು ಮೂಲಸೌಕರ್ಯಗಳ ಮೇಲೆ ದಾಳಿ ಮಾಡಿದ್ದು ವ್ಯಾಪಕ ಹಾನಿಯಾಗಿದೆ ಎನ್ನಲಾಗಿದೆ. ಆದರೆ ವಿಕಿರಣ ಸೋರಿಕೆಯ ಬಗ್ಗೆ ಯಾವುದೇ ನಿರ್ದಿಷ್ಟ ಮಾಹಿತಿಗಳಿಲ್ಲ.



ಟೆಹರಾನ್ ಸಮೀಪದ ತೈಲ ಸಂಗ್ರಹಾಗಾರದ ಮೇಲೆ ನಡೆದ ಕ್ಷಿಪಣಿ ದಾಳಿಯಿಂದ ಹೊರಹೊಮ್ಮಿರುವ ಕಪ್ಪು ಹೊಗೆ.

**ಕತಾರ್, ಸೌದಿ ವಿರುದ್ಧ ಮತ್ತೆ ದಾಳಿ ನಡೆಸಿದ ಇರಾನ್:** ನಿನ್ನೆಯಷ್ಟೇ ಇರಾನ್ ಅಧ್ಯಕ್ಷರು ಗಲ್ಫ್ ದೇಶಗಳ ಮೇಲೆ ಯಾವುದೇ ಕಾರಣಕ್ಕೂ ದಾಳಿ ನಡೆಸಲ್ಲ ಎಂದಿದ್ದರು. ಇದರ ಬೆನ್ನಲೆ ಇರಾನ್ ಮತ್ತೆ ಕತಾರ್ ಮತ್ತು ಸೌದಿಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ.

**ಪರಿಸ್ಥಿತಿ ನಿಯಂತ್ರಣಕ್ಕೆ ಮುಂದಾದ ಒಮಾನ್:** ಮಧ್ಯಪ್ರಾಚ್ಯದಲ್ಲಿ ಯುದ್ಧೋನ್ಮಾದ ಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆ ಪರಿಸ್ಥಿತಿ ನಿಯಂತ್ರಣಕ್ಕೆ ಒಮಾನ್ ಮುಂದಾಗಿದೆ. ಯುರೋಪಿಯನ್ ಒಕ್ಕೂಟದ ಹೊರಗಿನ ಮತ್ತು ಯುರೋಪಿಯನ್ ರಾಷ್ಟ್ರಗಳ ರಾಯಭಾರಿಗಳ ಗುಂಪು, ಅಮೆರಿಕ, ಬ್ರೆಜಿಲ್ ಹಾಗೂ ಟರ್ಕಿ ದೇಶಗಳ ರಾಯಭಾರಿಗಳನ್ನು ಭೇಟಿ ಮಾಡಿರುವ ಒಮಾನ್ ರಾಯಭಾರಿಗಳು ಪ್ರಸ್ತುತ ಪರಿಸ್ಥಿತಿ ಮತ್ತು ಯುದ್ಧ ಅಂತ್ಯಗೊಳಿಸುವ ಮಾರ್ಗಗಳ ಕುರಿತು ಚರ್ಚೆ ಮಾಡಿದ್ದಾರೆ ಎಂದು ಒಮಾನ್ ವಿದೇಶಾಂಗ ಸಚಿವಾಲಯ ತಿಳಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತವು ಇರಾನ್‌ನ ತೈಲ ನಿಕ್ಷೇಪಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲು ಬಯಸುತ್ತಿದೆ ಎಂದು ಶ್ವೇತಭವನದ ರಾಷ್ಟ್ರೀಯ ಇಂಧನ ಪ್ರಾಬಲ್ಯ ಮಂಡಳಿಯ (ಎನ್‌ಇಡಿಸಿ) ಕಾರ್ಯನಿರ್ವಾಹಕ ನಿರ್ದೇಶಕ ಜ್ಯಾರೋಡ್ ಅಗೆನ್ ಹೇಳಿದ್ದಾರೆ.

## ಪಶ್ಚಿಮ ಏಷ್ಯಾದಲ್ಲಿ ಬ್ರಿಟನ್ ಸಹಾಯ ಬೇಕಿಲ್ಲ

ಮಧ್ಯಪ್ರಾಚ್ಯಕ್ಕೆ ವಿಮಾನವಾಹಕ ನೌಕೆಗಳನ್ನು ಕಳುಹಿಸುವ ತಮ್ಮ ಬೇಡಿಕೆಯನ್ನು ಒಪ್ಪದ ಯು.ಕೆ. ವಿರುದ್ಧ



ಅಸಮಾಧಾನಗೊಂಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕಕ್ಕೆ ಅವುಗಳ ಅಗತ್ಯವಿಲ್ಲ. ಆದರೆ, ಇದನ್ನು ನೆನಪಿನಲ್ಲಿಟ್ಟುಕೊಳ್ಳುತ್ತೇವೆ ಎಂದು ಭಾನುವಾರ ಹೇಳಿದ್ದಾರೆ. ಒಂದು ಕಾಲದಲ್ಲಿ ಬ್ರಿಟನ್ ನಮ್ಮ ಮಹಾನ್ ಮಿತ್ರ. ಬಹುಶಃ ಮಿತ್ರರೆಲ್ಲರ ಪೈಕಿ ಶ್ರೇಷ್ಠ ಎಂದು ಬಣ್ಣಿಸಿದ್ದಾರೆ. ಅಮೆರಿಕ ಈಗಾಗಲೇ ಯುದ್ಧ ಗೆಲ್ಲುವ ಹಾದಿಯಲ್ಲಿದ್ದು ಇದಕ್ಕೆ ಬೇರೆಯವರ ಅಗತ್ಯವಿಲ್ಲ ಎಂದು ಯುಕೆ ಪ್ರಧಾನಿ ಸ್ಟಾರ್ಮರ್ ಅವರನ್ನು ಉಲ್ಲೇಖಿಸಿ ನೇರವಾಗಿ ಹೇಳಿದ್ದಾರೆ. ತಮ್ಮ ಬೇಡಿಕೆಯಂತೆ ಮಧ್ಯಪ್ರಾಚ್ಯಕ್ಕೆ ಎರಡು ವಿಮಾನವಾಹಕ ನೌಕೆಗಳನ್ನು ಕಳುಹಿಸುವ ಸಂಬಂಧ ಯು. ಕೆ. ಗಂಭೀರ ಚಿಂತನೆ ನಡೆಸುತ್ತಿದೆ. ತಮ್ಮ ಬೇಡಿಕೆಗೆ ಯುಕೆ ಅಂತಿಮವಾಗಿ ಗಂಭೀರ ಚಿಂತನೆ ನಡೆಸುತ್ತಿದೆ. ಆದರೆ, ಇನ್ನು ಮುಂದೆ ಅವುಗಳ ಅಗತ್ಯವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

# ಪ್ರಧಾನಿ ದೇಶದ ಮರ್ಯಾದೆ ಹಾಳು ಮಾಡುತ್ತಿದ್ದಾರೆ

■ ಮೂರನೇ ಪುಟದಿಂದ...

ಒಂದು ದೇಶದ ಮುಖ್ಯಸ್ಥನನ್ನು ಹತ್ಯೆ ಮಾಡಿದರೆ ಆ ದೇಶ ಶಾಂತಿಯಿಂದ ಇರುತ್ತದಯೇ. ಇದು ವಿಶ್ವ ಶಾಂತಿಯಿಂದ ಇರಲು ಸಾಧ್ಯವಾಗುತ್ತದೆಯಾ ಎಂದು ಖರ್ಗೆ ಪ್ರಶ್ನಿಸಿದರು.

**371ಜೆಯಿಂದ ಅನುಕೂಲ:** ಆರ್ಟಿಕಲ್ 371ಜೆ ಜಾರಿಗೆ ತಂದಿದ್ದು ನಾವು. ನಮ್ಮ ಬೇಡಿಕೆಗೆ ಅಂದಿನ ಗೃಹ ಸಚಿವ ಅಡ್ವಾಣಿ ಸ್ಪಂದಿಸಲಿಲ್ಲ ಎಂದು ಅಂದಿನ ಬಿಜೆಪಿಯ ಪ್ರತಿರೋಧವನ್ನು ನೆನಪಿಸಿಕೊಂಡ ಖರ್ಗೆ, ನಾನು ಅಂದಿನ ಸಂದರ್ಭದಲ್ಲಿ ನಮ್ಮ ಪರವಾಗಿರಲು 130 ಜನ ಎಂ.ಪಿಗಳಿಗೆ ಹೇಗೆ ಮನವೊಲಿಸಿದ್ದೇನೆ ಅದು ನನಗೆ ಮಾತ್ರ ಗೊತ್ತು. ಆರ್ಟಿಕಲ್ 371 ಜೆ ನನಗೆ, ನನ್ನ ಮಕ್ಕಳಿಗೆ ಹಾಗೂ ಮೊಮ್ಮಕ್ಕಳಿಗೆ ಅನುಕೂಲವಾಗಲ್ಲ. ಅದು ಅನುಕೂಲವಾಗುವುದು ಜನಸಾಮಾನ್ಯರಿಗೆ. ಇಂದು ಮೆಡಿಕಲ್, ಇಂಜಿನಿಯರಿಂಗ್ ಸೀಟು ಪಡೆದುಕೊಳ್ಳಲು ಅನುಕೂಲವಾಗಿದೆ ಎಂದು ಖರ್ಗೆ ಹೇಳಿದರು.

ಕಲಬುರಗಿಗೆ ವಿಮಾನ ನಿಲ್ದಾಣ ಮಾಡಲು ಶ್ರೀನಿವಾಸ ಸರಡಗಿ ಗ್ರಾಮದ ಜನರು 1,000 ಎಕರೆ ಜಮೀನು ಕೊಟ್ಟಿದ್ದಾರೆ. ಅವರಿಗೆ ಇಲ್ಲಿಂದಲೆ ನಮಸ್ಕಾರ ಮಾಡುತ್ತೇನೆ. ಖರ್ಗೆ ಜಾಸ್ತಿ ಓಡಾಡುತ್ತಾರೆ ಎಂದು ವಿಮಾನ ನಿಲ್ದಾಣವನ್ನು ಬಂದ್‌ಮಾಡಲಾಗಿದೆ. ನಾನು ಪ್ರತಿದಿನ ಬರುತ್ತೇನೆಯೇ ಎಂದು ಪ್ರಶ್ನಿಸಿದರು.

**ಪುತ್ರನ ಬಗ್ಗೆ ಖರ್ಗೆ ಶ್ಲಾಘನೆ:** ಚಿತ್ತಾಪುರದ ಒಬ್ಬ ಶಾಸಕ ಇಡೀ ದೇಶದ ಜನರ ಸಮಸ್ಯೆ ಬಗ್ಗೆ ಧ್ವನಿ ಎತ್ತಿ ಮಾತನಾಡುತ್ತಿರುವುದು ನೋಡಿದರೆ ಹೆಮ್ಮೆ ಎನಿಸುತ್ತದೆ ಎಂದು ಪುತ್ರ ಪ್ರಿಯಾಂಕ್ ಖರ್ಗೆ ಬಗ್ಗೆ ಕೊಂಡಾಡಿದರು. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಶಿವಕುಮಾರ್ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೀವು ಸದಾ ಬೆಂಬಲ ನೀಡಬೇಕು ಎಂದು ಮನವಿ ಮಾಡಿದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಗೆ ಇನ್ನು ಇಪ್ಪತ್ತು ಸೀಟ್ ಬಂದಿದ್ದರೆ ಮೋದಿ ಅಧಿಕಾರಕ್ಕೆ ಬರುತ್ತಿರಲಿಲ್ಲ. ನಮ್ಮ ನಿರೀಕ್ಷೆಯಂತೆ ಸೀಟು ಬರಲಿಲ್ಲ ಅದು ನಮ್ಮ ದುರ್ದೈವ. ನಮ್ಮ ಸೋಲನ್ನು ಬಿಜೆಪಿಯವರು ಟೀಕಿಸುತ್ತಾರೆ. ಆದರೆ, ನಾವು ಜನರ ಪ್ರೀತಿ ವಿಶ್ವಾಸದಿಂದ ಮುಂದುವರೆಯುತ್ತೇವೆ ಎಂದರು.

# ಸ್ತ್ರೀಯರ ಕ್ರಿಯಾಶಕ್ತಿ ಅಸಾಮಾನ್ಯ: ರಘುನಾಥ ಎನ್.ಶೆಟ್ಟಿ ಬಣ್ಣನೆ

(ಚಿತ್ರ / ವರದಿ : ರೋನ್ಸ್ ಬಂಟ್ವಾಳ್)

**ಮುಂಬಯಿ, ಮಾ.08:** ನೊಂದ ಸ್ತ್ರೀಯರ ಪರವಾದ ಜನಪಯೋಗಿ ವಿಚಾರ ಸಂಕಿರಣದಿಂದ ಸ್ತ್ರೀಯರ ಕ್ರಿಯಾಶಕ್ತಿಯನ್ನು ತಿಳಿಯಲು ಅವಕಾಶವಾಗುತ್ತದೆ. ಪುರಾಣ ಹಾಗೂ ಇತಿಹಾಸ ಕಾಲದಲ್ಲಿ ಹಲವು ಪ್ರತೀಕೂಲ ಪರಿಸ್ಥಿತಿಯಲ್ಲಿ ನಮ್ಮ ತಾಯಂದಿರು ತೋರಿಸಿದ ವೀರತನ ನಮಗೆ ಸದಾ ಪ್ರೇರಣೆಯಾಗಿದೆ. ಕದಂಬರ ರಾಜವಂಶ ಹಾಗೆ ಇತಿಹಾಸದಲ್ಲಿ ದುಡಿದ ಅದೆಷ್ಟೊ ವೀರ ವನಿತೆಯರ ಕುರಿತು ತಿಳಿಯುವ ಅವಕಾಶ ಇದಾಗಿದೆ. ಇಂಥ ವಿಚಾರ ಸಂಕಿರಣಗಳು ಮಹಿಳೆಯರಲ್ಲಿ ನಾಯಕತ್ವ ರೂಪಿಸುತ್ತದೆ. ಎಂದು ಅಪ್ಪಾಜಿಬೀಡು ವರ್ಲಿ (ಮುಂಬಯಿ) ಇದರ ಟ್ರಸ್ಟಿ ರಘುನಾಥ ಎನ್.ಶೆಟ್ಟಿ ತಿಳಿಸಿದರು.

ಶನಿವಾರ ಸಂಜೆ ಮಾಟುಂಗಾ ಪೂರ್ವದಲ್ಲಿನ ಮೈಸೂರು ಅಸೋಸಿಯೇಶನ್‌ನ ಸಭಾಗೃಹದಲ್ಲಿ – ಇತಿಹಾಸದಲ್ಲಿ ಮಹಿಳೆ – ವಿಷಯದಲ್ಲಿ ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನವು ಆಯೋಜಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ರಘುನಾಥ ಶೆಟ್ಟಿ ಮಾತನಾಡಿದರು.

ಪ್ರತಿಷ್ಠಾನದ ಅಧ್ಯಕ್ಷ ಟಿ.ಆರ್ ಮಧುಸೂದನ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟ ಕಾರ್ಯಕ್ರಮದಲ್ಲಿ ಚಂದ್ರಶೇಖರ ರಾವ್ ಮೆಮೋರಿಯಲ್ ಟ್ರಸ್ಟ್‌ನ ಅಧ್ಯಕ್ಷೆ ಶ್ರೀದೇವಿ ಸಿ.ರಾವ್, ದೇವಾಡಿಗ ಸಂಘ ಮುಂಬಯಿ ಇದರ ಮಹಿಳಾ ವಿಭಾಗದ ಮಾಜಿ ಅಧ್ಯಕ್ಷೆ ಜಯಂತಿ ಎಂ.ದೇವಾಡಿಗ ಅಭ್ಯಾಗತರಾಗಿ ಉಪಸ್ಥಿತರಿದ್ದರು. ಚೆನ್ನಭೈರಾದೇವಿ, ಕಿತ್ತೂರ ರಾಣಿ ಚೆನ್ನಮ್ಮ, ಓನಕೆ ಒಬ್ಬವ್ವ, ರಾಣಿ ಅಬ್ಬಕ್ಕ, ಕೆಳದಿಯ ಚೆನ್ನಮ್ಮ ಹೀಗೆ ಹೆಜ್ಜೆಹೆಜ್ಜೆಗೂ ವೀರವನಿತೆಯರನ್ನು ಕಾಣಬಹುದು. ಪತಿ ಯುದ್ಧದಲ್ಲಿ ಸೋತಾಗ ಇಲ್ಲವೇ ಮಡಿದಾಗ ಎದೆಗುಂದದೆ ತಾನೇ ಯುದ್ಧ ಮಾಡಿ ಶತ್ರುಸೈನ್ಯ ಎದುರಿಸಿ ರಾಜ್ಯ ರಕ್ಷಿಸಿದ ನಮ್ಮ ವೀರ ವನಿತೆಯರನ್ನು ಸ್ಮರಿಸಿ ಇತಿಹಾಸದಲ್ಲಿ ಸಮಾಜಕ್ಕೆ ವಿಶೇಷ ಕೊಡುಗೆ ನೀಡಿದ ಮಹಿಳೆಯರ ನೆನಪಿನೊಂದಿಗೆ ವಿಶ್ವ ಮಹಿಳಾ ದಿನದ ಶುಭವಸರದಲ್ಲಿ ವಿಶೇಷ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು ರಮಾಬಾಯಿ ಅಂಬೇಡ್ಕರ್ ಮತ್ತು ಸವಿತಾ ಅಂಬೇಡ್ಕರ್ ಬಗ್ಗೆ ರಶ್ಮಿ ಭಟ್, ಜಯದೇವಿತಾಯಿ ಲಿಗಾಡೆ ಕುರಿತು ಸವಿತಾ ಅರುಣ್ ಶೆಟ್ಟಿ, ಅಹಲ್ಯಾಬಾಯಿ ಹೋಳ್ಕರ ಕುರಿತು ಕುಮುದಾ ಶೆಟ್ಟಿ, ಸಂಚಿ ಹೊನ್ನಮ್ಮ ಬಗ್ಗೆ ಲಲಿತಾ ಪ್ರಭು ಅಂಗಡಿ ಮಾತನಾಡಿದರು.



ಇತಿಹಾಸದಲ್ಲಿ ಅಪಾರ ಸೇವೆ ಸಲ್ಲಿಸಿ ಮರೆಯಾದ ಅದೆಷ್ಟೊ ಸಾಹಸಿ ಮಹಿಳೆಯರ ಕುರಿತು ಬೆಳಕು ಚೆಲ್ಲುವ ಇಂತಹ ಸಂಕಿರಣ ಮಾದರಿ ಕಾರ್ಯವಾಗಿದೆ. ಇಲ್ಲಿ ಕೇಳಿತಿಳಿದ ಮಾಹಿತಿಯಿಂದ ಧೈರ್ಯ ತುಂಬಿದೆ. ನಮಗೆ ಅಂಬೇಡ್ಕರ್ ಗೊತ್ತು ಆದರೆ ಅವರ ಬಾಳಸಂಗಾತಿ ಬಗ್ಗೆ ಮತ್ತು ಹದಿನಾರನೇ ಶತಮಾನದ ವೀರಧೀರ ಸ್ತ್ರೀಯರ ಬಗ್ಗೆ ತಿಳಿದಿರಲಿಲ್ಲ. ಅವರ ವಿವಿಧ ಜನೋಪಯೋಗಿ ಕಾಯಕವನ್ನು ಅಧ್ಯಯನ ಮಾಡಿದ ಇಂದಿನ ಸಂಪನ್ಮೂಲವ್ಯಕ್ತಿಗಳ ಪ್ರಯತ್ನ ಪ್ರಶಂಸನೀಯ. ಶಾಲೆಯಲ್ಲಿ ಎಲ್ಲವನ್ನು ಕಲಿಸಲಾಗುವುದಿಲ್ಲ ಆದರೆ ಇಂತಹ ವಿಚಾರ ಸಂಕಿರಣಗಳು ಜ್ಞಾನಾರ್ಜನೆಯನ್ನು ಹೆಚ್ಚಿಸುವ ಜವಾಬ್ದಾರಿ ಹೊತ್ತಿವೆ ಎಂದು ಟಿ.ಆರ್ ಮಧುಸೂದನ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು.

ಪ್ರತಿಷ್ಠಾನದ ಸಂಸ್ಥಾಪಕ ಮತ್ತು ಪ್ರಧಾನ ರೂವಾರಿ ವಿಶ್ವನಾಥ ದೊಡ್ಮನೆ, ಉಪಾಧ್ಯಕ್ಷ ಕೆ.ಎಲ್ ಶಾಂತಾರಾಂ, ಗೌ| ಪ್ರ| ಕಾರ್ಯದರ್ಶಿ ಸವಿತಾ ಆರ್.ಶೆಟ್ಟಿ, ಕೋಶಾಧಿಕಾರಿ ರಾಜ್‌ವರ್ಮ ಜೈನ್, ಸುದುಘ ದೊಡ್ಮನೆ ಸೇರಿದಂತೆ ಸದಸ್ಯರು, ಗಣ್ಯರನೇಕರು ಹಾಜರಿದ್ದರು. ಜ್ಯೋತಿ ಯಾಜಿ ಭಟ್ ಪ್ರಾರ್ಥನೆಯನ್ನಾಡಿದರು. ತಾರಾ ಜಿ.ಬಂಗೇರ ಸ್ವಾಗತಿಸಿದರು. ವಿಶ್ವನಾಥ ದೊಡ್ಮನೆ ಪ್ರಸ್ತಾವನೆಗೈದರು. ಅಂಬಿಕಾ ದೇವಾಡಿಗ, ಅನಘ ದೊಡ್ಮನೆ ಅತಿಥಿಗಳನ್ನು ಪರಿಚಯಿಸಿದರು. ಪದಾಧಿಕಾರಿಗಳು ಅತಿಥಿಗಳಿಗೆ ಸ್ಮರಣಿಕೆ, ಪುಷ್ಪಗುಚ್ಛವನ್ನೀಡಿ ಗೌರವಿಸಿದರು. ದೀಪಾ ಹರೀಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸವಿತಾ ಆರ್.ಶೆಟ್ಟಿ ವಂದನಾರ್ಪಣೆಗೈದರು.

# ಲೇಖಕಿಯರ ಸಂಘದ ದತ್ತಿ ಪ್ರಶಸ್ತಿಗೆ ಅನಿತಾ ಪಿ.ತಾಕೊಡೆ ಮೇಣಕ್ಕಂಟದ ಬತ್ತಿ ಕೃತಿ ಆಯ್ಕೆ

**ಮುಂಬಯಿ, ಮಾ.08:** ಕರ್ನಾಟಕ ಲೇಖಕಿಯರ ಸಂಘವು (ಕಲೇಸಂ) ಬೆಂಗಳೂರು 2025ನೇ ಸಾಲಿನ ವಾರ್ಷಿಕ ವಿವಿಧ ದತ್ತಿ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಶ್ರೀಮತಿ ಸಂಕಮ್ಮ ಸಂಕಣ್ಣನವರ್ ಕಾವ್ಯ ಪ್ರಶಸ್ತಿಗೆ ಮುಂಬಯಿಯಲ್ಲಿನ ಕವಯತ್ರಿ ಅನಿತಾ ಪಿ.ತಾಕೊಡೆ ಅವರ ಮೇಣಕ್ಕಂಟದ ಬತ್ತಿ ಕೃತಿಯನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ಅಧ್ಯಕ್ಷೆ ಆರ್.ಸುನಂದಮ್ಮ ತಿಳಿಸಿದ್ದಾರೆ. ಕಳೆದ ಶನಿವಾರ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿ ಪ್ರಕಟಿಸಿ ಶ್ರೀಮತಿ ಕೆ.ಟಿ.ಬನಶಂಕರಮ್ಮ ಪ್ರಶಸ್ತಿಗೆ (ಶಿಕ್ಷಕಿ ಹಾಗೂ ಲೇಖಕಿ) ದಾವಣಗೆರೆಯ ಬಿ.ಟಿ ಗೀತಾ ಮಂಜು, ಶ್ರೀಮತಿ ಶ್ರೀಲೇಖಾ ಪ್ರಶಸ್ತಿಗೆ (ಅನುವಾದ) ಭೂಮಿಕಾ ಆರ್.ಅವರ ಜೊರಾಮಿ ಕೃತಿ, ಶ್ರೀಮತಿ ಭಾಗ್ಯ ನಂಜಪ್ಪ ಪ್ರಶಸ್ತಿಗೆ (ವಿಜ್ಞಾನ ಸಾಹಿತ್ಯ) ಸುಕನ್ಯಾ ಸೂನಗಹಳ್ಳಿ ಅವರ ಕಬ್ಬಿನ ಸಿಹಿ ವರ್ಧಿಸಿದ ಅಮ್ಮ– ಡಾ| ಜಾನಕಿ ಅಮ್ಮಾಳ್, ಶ್ರೀಮತಿ ಜಿ.ವಿ ನಿರ್ಮಲ ಪ್ರಶಸ್ತಿಗೆ (ಅನುವಾದ ಸಾಹಿತ್ಯ) ವೀಣಾ ಮುರುಳೀಧರ್ ಅವರ ಚನ್ನೆ ಮಣೆಯ ಜಗತ್ತು ಕೃತಿ ಭಾಜನವಾಗಿವೆ ಎಂದರು.



ಶ್ರೀಮತಿ ಉಷಾ ಪಿ.ರೈ ಪ್ರಶಸ್ತಿಗೆ (ಕಾವ್ಯ) ಪ್ರಜ್ಞಾ ಮತ್ತಿಹಳ್ಳಿ ಅವರ ಬೆಳದಿಂಗಳ ಸೋನೆಮಳೆ ಕೃತಿ, ಶ್ರೀಮತಿ ನಾಗರತ್ನ ಚಂದ್ರಶೇಖರ್ ಪ್ರಶಸ್ತಿಗೆ (ಲಲಿತ ಪ್ರಬಂಧ) ಸುಚಿತ್ರಾ ಹೆಗಡೆ ಅವರ ಮಿಂಚುಹುಳದ ದಾರಿ ಕೃತಿ, ಡಾ| ಬಿ.ಸಿ ಶೈಲಾ ನಾಗರಾಜ್ ಕಾವ್ಯ ಪ್ರಶಸ್ತಿಗೆ ಮಮತಾ ಅರಸೀಕೆರೆ ಅವರ ಗಾಯರಗಿದೆ. ವಿದಾಯ ಹೇಳಬೇಕು ಕೃತಿ ಆಯ್ಕೆಗೊಂಡಿವೆ ಎಂದರು. ಇನ್ನೂ ಅನೇಕ ದತ್ತಿನಿಧಿ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಪ್ರಶಸ್ತಿ ಪ್ರದಾನ ಸಮಾರಂಭವು ಏಪ್ರಿಲ್ 09ನೇ ಗುರುವಾರ ಬೆಂಗಳೂರಿನ ಕನ್ನಡ ಭವನದಲ್ಲಿರುವ ನಯನ ಸಭಾಂಗಣದಲ್ಲಿ ನಡೆಯಲಿದೆ ಎಂದರು.

# ಉದ್ದೇಶಪೂರಿತ ನಾಯಕತ್ವದೊಂದಿಗೆ ಮುಂದೆ ಸಾಗೋಣ: ಡಾ. ಮೇಡಂ ಗ್ರೇಸ್ ಪಿಂಟೋ ಸಂದೇಶ



**ಮುಂಬಯಿ, ಮಾ.07:** ಮಹಿಳಾ ದಿನವು ಮಹಿಳೆಯರ ಅದ್ಭುತ ಆತ್ಮಶಕ್ತಿಯ ಸಂಭ್ರಮವಾಗಿದೆ. ನಾರಿಶಕ್ತಿಯ ಧೈರ್ಯ, ಕರುಣೆ, ಜ್ಞಾನ ಮತ್ತು ಉತ್ತಮ ಜಗತ್ತನ್ನು ರೂಪಿಸಲು ಇರುವ ಅಚಲವಾದ ಬದ್ಧತೆಯ ಆಚರಣೆ ಇದಾಗಿದೆ. ಇದು ಕೇವಲ ಪ್ರಸಿದ್ಧ ಸಾಧಕಿಯರನ್ನು ಗೌರವಿಸುವ ದಿನವಷ್ಟೇ ಅಲ್ಲ, ಪರಿವಾರ, ಸಂಸ್ಥೆಗಳು ಮತ್ತು ರಾಷ್ಟ್ರಗಳನ್ನು ಬಲಪಡಿಸಲು ತಮ್ಮ ನಿಶ್ಶಬ್ದ ತ್ಯಾಗ ಮತ್ತು ದೃಢ ಪ್ರಯತ್ನಗಳ ಮೂಲಕ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಅನೇಕ ಗುರುತಿಸದ ಸಾಹಸಿ ಸ್ತ್ರೀಯರನ್ನು ಸ್ಮರಿಸುವ ದಿನವೂ ಆಗಿದೆ ಎಂದು ರಾಯನ್ ಅಂತರರಾಷ್ಟ್ರೀಯ ಶೈಕ್ಷಣಿಕ ಸಮೂಹದ ಪ್ರವರ್ತಕಿ ಡಾ| ಮೇಡಂ ಗ್ರೇಸ್ ಪಿಂಟೋ ತಿಳಿಸಿದರು.

ವಿಶ್ವ ಮಹಿಳಾ ದಿನಾಚರಣೆ ನಿಮಿತ್ತ ಉದ್ದೇಶಿಸಿದ ಡಾ| ಮೇಡಂ ಗ್ರೇಸ್ ಪಿಂಟೋ, ನಾವು ಅಂತರಾಷ್ಟ್ರೀಯ ಮಹಿಳಾದಿನ ಆಚರಿರಿಸಿದ ಈ ಸಂದರ್ಭದಲ್ಲಿ, 'ದಯಪಾಲಿಸಲು ನೀಡಿರಿ' ಎಂಬ ವಿಷಯವು ಮಹತ್ವದ ಸತ್ಯವನ್ನು ನಮಗೆ ನೆನಪಿಸುತ್ತದೆ. ಮಹಿಳೆಯರು ತಮ್ಮ ಜ್ಞಾನ, ಸಮಯ, ಪ್ರೋತ್ಸಾಹ ಮತ್ತು ಪ್ರೀತಿಯನ್ನು ಹಂಚಿಕೊಳ್ಳುವಾಗ, ಪ್ರತಿಯಾಗಿ ಅವರಿಗೆ ಶಕ್ತಿ, ಬೆಳವಣಿಗೆ ಮತ್ತು ಸಮೂಹ ಪ್ರಗತಿ ದೊರೆಯುತ್ತದೆ.

ಪ್ರತಿಯೊಂದು ಮಾರ್ಗದರ್ಶನವು ಒಬ್ಬ ನಾಯಕಿಯನ್ನು ರೂಪಿಸುತ್ತದೆ. ಪ್ರತಿಯೊಂದು ಪ್ರೋತ್ಸಾಹದ ಮಾತು ಆತ್ಮವಿಶ್ವಾಸವನ್ನು ನಿರ್ಮಿಸುತ್ತದೆ. ಪ್ರತಿಯೊಂದು ಹಂಚಿದ ಅವಕಾಶವು ಹೊಸ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. 'ಕೊಡಲು ನೀಡಿರಿ; ಎಂಬ ಆತ್ಮವು ನಮ್ಮ ಕನಸುಗಳನ್ನು 'ನಮ್ಮದೇ ಆಗಲಿ ಅಥವಾ ಇತರರದ್ದಾಗಲಿ; ಧೈರ್ಯ ಮತ್ತು ನಂಬಿಕೆಯಿಂದ ಬೆಂಬಲಿಸುವಂತೆ ಕರೆ ನೀಡುತ್ತದೆ ಹಾಗೂ ಪ್ರತಿಯೊಬ್ಬ ಮಹಿಳೆಯ ಸಾಧನೆಯನ್ನು ನಮ್ಮೆಲ್ಲರ ಜಯವೆಂದು ಆಚರಿಸಲು ಪ್ರೇರೇಪಿಸುತ್ತದೆ ಎಂದರು.

ಕಳೆದ ಐದು ದಶಕಗಳಿಂದ ರಾಯಾನ್ ಸಂಸ್ಥೆ ಮತ್ತು ಜೇವಿಯರ್ಸ್ ಸಮೂಹ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪರಿವರ್ತನಾತ್ಮಕ ಪ್ರಭಾವವನ್ನು ಅನುಭವಿಸುವ ಸೌಭಾಗ್ಯವನ್ನು ಹೊಂದಿದೆ. ಸಮರ್ಪಣೆ ಮತ್ತು ಗೌರವದೊಂದಿಗೆ ಮಹಿಳಾ ಶಿಕ್ಷಕಿಯರು ಮತ್ತು ನಾಯಕಿಯರು ಯುವ ಮನಸ್ಸುಗಳನ್ನು ಬೆಳೆಸಿದ್ದಾರೆ. ಮೌಲ್ಯಗಳನ್ನು ರೂಢಿಸಿದ್ದಾರೆ ಹಾಗೂ ಕುಟುಂಬಗಳನ್ನು ಬಲಪಡಿಸಿದ್ದಾರೆ ಮತ್ತು ಚೈತನ್ಯಭರಿತ ಸಮುದಾಯಗಳನ್ನು ನಿರ್ಮಿಸಿದ್ದಾರೆ. ಅವರ ಕೊಡುಗೆ ತರಗತಿಗಳ ಗಡಿಯನ್ನು ಮೀರಿ ಪೀಳಿಗೆಯ ಭವಿಷ್ಯವನ್ನು ರೂಪಿಸುತ್ತದೆ ಎಂದೂ ತಿಳಿಸಿದರು.

ಒಬ್ಬ ಮಹಿಳೆ ಎದ್ದೇಳಿದಾಗ, ಅವಳು ತನ್ನೊಂದಿಗೆ ಇನ್ನೂ ಅನೇಕರನ್ನು ಎತ್ತಿ ಹಿಡಿಯುತ್ತಾಳೆ. ನಿಜವಾದ ಸಬಲೀಕರಣವು ಕೇವಲ ವೈಯಕ್ತಿಕ ಸಾಧನೆಯಲ್ಲಿ ಮಾತ್ರವಲ್ಲ, ಇತರರು ಯಶಸ್ವಿಯಾಗಲು ದಾರಿಗಳನ್ನು ನಿರ್ಮಿಸುವುದಲ್ಲಿಯೂ ಇದೆ. ಶಿಕ್ಷಣವು ಪರಿವರ್ತನೆಯ ಅತ್ಯಂತ ಶಕ್ತಿಯುತ ಸಾಧನಗಳಲ್ಲಿ ಒಂದಾಗಿದೆ. ವಿದ್ಯಾವಂತ ಮಹಿಳೆ ತನ್ನ ಕುಟುಂಬವನ್ನು ರೂಪಿಸುತ್ತಾಳೆ, ಸಮಾಜವನ್ನು ಬಲಪಡಿಸುತ್ತಾಳೆ ಮತ್ತು ಮುಂದಿನ ಪೀಳಿಗೆಗಳನ್ನು ಪ್ರಭಾವಿಸುತ್ತದೆ. ಕೈಯಲ್ಲಿ ಶಿಕ್ಷಣ ಮತ್ತು ಹೃದಯದಲ್ಲಿ ಆತ್ಮವಿಶ್ವಾಸ ಹೊಂದಿದ ಮಹಿಳೆಯರು ಬದಲಾವಣೆಯ ಶಿಲ್ಪಿಗಳು ಮತ್ತು ಪ್ರಗತಿಯ ದೀಪಸ್ತಂಭವಾಗುತ್ತಾರೆ. ಮಹಿಳೆಯರೆಲ್ಲರ ಬದುಕು ಸದಾ ಪ್ರಕಾಶಿಸುತ್ತಿರಲಿ. ಪ್ರೇರೇಪಿಸುತ್ತಿರಲಿ. ಮುಂದಕ್ಕೆ ಸಾಗುತ್ತಿರಲಿ...ಏಕೆಂದರೆ ಭವಿಷ್ಯವು ಮಹಿಳಾ ದೃಷ್ಟಿ ಮತ್ತು ಧೈರ್ಯದಿಂದ ರೂಪುಗೊಳ್ಳುತ್ತದೆ. ಆದ್ದರಿಂದ ಸಂತೋಷಕರ ಮತ್ತು ಸಬಲಗೊಳಿಸುವ ಮಹಿಳಾದಿನಕ್ಕೆ ಹಾರ್ದಿಕ ಶುಭಾಶಯಗಳನ್ನು ಹಾರೈಸುವೆ ಎಂದು ರಾಯನ್ ಇಂಟರ್‌ನೇಷನಲ್ ಗ್ರೂಫ್ ಆಫ್ ಸ್ಕೂಲ್ಸ್‌ನ ಪ್ರವರ್ತಕಿ ಡಾ| ಮೇಡಂ ಗ್ರೇಸ್ ಪಿಂಟೋ ಹಾರೈಸಿದರು.

# ಬಾಲ್ಯವಸ್ಥೆಯಲ್ಲಿನ ಪೋಕ್ರಿ ಮಕ್ಕಳೇ, ಸಾಧಕರೆನಿಸುವುದು : ಡಾ.ಪದ್ಮನಾಭ ವಿ.ಶೆಟ್ಟಿ

## ವಿಜಯ ಕಾಲೇಜು ಮೂಲ್ಕಿ ಗ್ಲೋಬಲ್ ಅಲ್ಯೂಮಿನಿ ಅಸೋಸಿಯೇಶನ್‌ನ ವಾರ್ಷಿಕ ಸಂಭ್ರಮ

**ಮುಂಬಯಿ, ಮಾ.07:** ವಿಶ್ವ ಪ್ರಸಿದ್ಧ ಬಂಟರ ಸಂಘ ಮುಂಬಯಿ ಆಳಿದ ನಾಲ್ವರು ಅಧ್ಯಕ್ಷರು ವಿಜಯ ಕಾಲೇಜು ಮೂಲ್ಕಿ ಇದರ ಅಳೆ ವಿದ್ಯಾರ್ಥಿಗಳು ಅನ್ನುವುದು ಅಭಿಮಾನವೆನಿಸುತ್ತಿದೆ. ಈ ಕಾಲೇಜ್‌ನ ವಿದ್ಯಾರ್ಥಿಗಳು ಸಭ್ಯ ಮತ್ತು ಶಿಸ್ತುಬದ್ಧರು ಹೇಳುವುದೇ ಅಭಿಮಾನ್ದ ಸಂಗತಿ. ಆವಾಗಿನ ಪೋಕ್ರಿ ಮಕ್ಕಳೇ ಇಂದು ಒಳ್ಳೆಯವರೆಣಿಸಿ ಸಾಧಕರಾಗಿರುವುದು ಪ್ರಶಂಸನೀಯ. ನನ್ನ ಹುಟ್ಟು ಮೂಲ್ಕಿಯಲ್ಲದಾರೂ ಬಾಲ್ಯವಸ್ಥೆ ಮುಂಬಯಿಯಲ್ಲಿ ಕಳೆದ ಕಾರಣ ನಾನು ವಿಜಯ ಕಾಲೇಜ್‌ನಲ್ಲಿ ಕಲಿಯಲು ಅಸಾಧ್ಯವಾಯಿತು. ವಿಜಯ ಕಾಲೇಜ್‌ನ ಶೈಕ್ಷಣಿಕ ಕೊಡುಗೆ ಗಣನೀಯವಾದುದು ಎಂದು ಪಯ್ಯಡೆ ಹೊಟೇಲ್ಸ್ ಪ್ರೈವೇಟ್ ಲಿಮಿಟೆಡ್ ಇದರ ನಿರ್ದೇಶಕ, ಮುಂಬಯಿ ಕ್ರಿಕೆಟ್ ಸೋಶಿಯೇಶನ್‌ನ ಮಾಜಿ ಜೊತೆ ಕಾರ್ಯದರ್ಶಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾ| ಪದ್ಮನಾಭ ವಿ.ಶೆಟ್ಟಿ ತಿಳಿಸಿದರು. ವಿಜಯ ಕಾಲೇಜು ಮೂಲ್ಕಿ ಗ್ಲೋಬಲ್ ಅಲ್ಯೂಮಿನಿ ಅಸೋಶಿಯೇಶನ್ ಇಂದಿಲ್ಲಿ ಶನಿವಾರ ಸಂಜೆ ಅಂಧೇರಿ ಪೂರ್ವದ ಸಾಕಿನಾಕ ಇಲ್ಲಿನ ಪೆನಿನ್ಸುಲಾ ಗ್ರಾ್ಯಂಡ್ ಹೋಟೆಲ್ ಸಭಾಗೃಹದಲ್ಲಿ ಆಯೋಜಿಸಿದ್ದ ವಿಶೇಷ ಮಹಾಸಭೆ, ವಾರ್ಷಿಕ ಸಂಭ್ರಮ, ಗುರುವಂದನೆ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದು ಡಾ| ಪದ್ಮನಾಭ ಶೆಟ್ಟಿ ಮಾತನಾಡಿದರು.

ವಿಜಯ ಕಾಲೇಜ್ ಮೂಲ್ಕಿ ಗ್ಲೋಬಲ್ ಅಲುಮ್ನಿ ಅಸೋಶಿಯೇಶನ್ ಮುಂಬಯಿ (ವಿಸಿಎಂಜಿಎಎಂ) ಅಧ್ಯಕ್ಷ ವಾಸುದೇವ ಎಂ.ಸಾಲ್ಯಾನ್ ಅಧ್ಯಕ್ಷತೆಯಲ್ಲಿ ನೇರವೇರಲ್ಪಟ್ಟ ವಾರ್ಷಿಕ ಸಂಭ್ರಮಕ್ಕೆ ವಿಸಿಎಂಜಿಎಎಂ ಗೌರವ ಅಧ್ಯಕ್ಷ ಆನಂದ್ ಶೆಟ್ಟಿ ಉದ್ಘಾಟಿಸಿದರು. ಗೌರವ ಅತಿಥಿಗಳಾಗಿ ವಿಸಿಎಂಜಿಎಎ ಎಂ ಸ್ಥಾಪಕ ಅಧ್ಯಕ್ಷ ಸಿಎ| ಶಂಕರ್ ಬಿ.ಶೆಟ್ಟಿ, ವಿಜಯ ಕಾಲೇಜು ಮೂಲ್ಕಿ ಪ್ರಾಂಶುಪಾಲ ಪ್ರೊ| ವೆಂಕಟೇಶ ಭಟ್, ವಿಸಿಎಂಜಿಎಎಂ ಉಪಾಧ್ಯಕ್ಷ ಅಡ್ವಕೇಟ್ ಶೇಖರ್ ಎಸ್.ಭಂಡಾರಿ, ಗೌ| ಪ್ರ| ಕಾಯದರ್ಶಿ ಭಾಸ್ಕರ್ ಬಿ.ಶೆಟ್ಟಿ, ಗೌರವ ಕೋಶಾಧಿಕಾರಿ ಸಿಎ| ರೋಹಿತಾಕ್ಷ ದೇವಾಡಿಗ, ಬಂಟರ ಸಂಘ ಮುಂಬಯಿ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಕಾಲೇಜ್‌ನ ನಿವೃತ್ತ ಪ್ರಾಚಾರ್ಯೆ (ಇಂಗ್ಲೀಷ್ ಬೋಧಕಿ) ಪ್ರೊ| ಪಾರ್ವತಿ ಅಮ್ಮಾ, ವಿಶ್ರಾಂತ ಪ್ರಾಚಾರ್ಯ (ಅಕೌಂಟ್ಸ್ ಮತ್ತು ಆಡಿಟ್ ವಿಭಾಗ) ಪ್ರೊ| ಜಿ.ಎಸ್ ಹೆಗ್ಡೆ (ಪತ್ನಿ ಗೌರಿ ಹೆಗ್ಡೆ ಜೊತೆಗೂಡಿ) ಅವರಿಗೆ ಗುರುವಂದನೆ ಸಲ್ಲಿಸಲಾಯಿತು. ಅಂತೆಯೇ ಕಾಲೇಜ್‌ನ ಸಾಧಕ ಹಳೇ ವಿದಾರ್ಥಿಗಳಾದ ಹೆಸರಾಂತ ಚಾರ್ಟರ್ಡ್ ಅಕೌಂಟೆಂಟ್ ಸಿಎ| ಸದಾಶಿವ ಶೆಟ್ಟಿ ಕಬೇತಿತ್ತು ಮೂಲ್ಕಿ (ಪತ್ನಿ ಸುನಂದ ಸದಾಶಿವ ಶೆಟ್ಟಿ ಜೊತೆಗೂಡಿ) ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ರಾಜ್‌ಕುಮಾರ್ ಕಾರ್ನಾಡ್ ಹಾಗೂ ಬರಹಗಾರ ಮತ್ತು ಪತ್ರಿಕಾ ವರದಿಗಾರ ವೈ.ಟಿ ಶೆಟ್ಟಿ (ಪತ್ನಿ ಮೀರಾ ಯೋಗೇಶ್ ಶೆಟ್ಟಿ ಜೊತೆಗೂಡಿ) ಅವರಿಗೆ ಅಭಿನಂದನಾ ಗೌರವವನ್ನಿತ್ತು ಸನ್ಮಾನಿಸಲಾಯಿತು.

ಸನ್ಮಾನಿತರು ಸಂದರ್ಭೋಚಿತವಾಗಿ ಮಾತನಾಡಿ ಸನ್ಮಾನಕ್ಕೆ ಅಭಿವಂದಿಸಿದರು. ಗಣ್ಯರು ಸತೀಶ್ ಆರ್.ಶೆಟ್ಟಿ (ಪೆನಿನ್ಸೂಲಾ), ರಮೇಶ್ ಶೆಟ್ಟಿ, ರಾಮ್‌ಪ್ರಸಾದ್ ದಾಸ್, ಅಣ್ಣಪ್ಪ ಶೆಟ್ಟಿ, ಪೇಟೆಮನೆ ಪ್ರಕಾಶ್ ಶೆಟ್ಟಿ, ಸುನೀಲ್‌ಕುಮಾರ್ ಶೆಟ್ಟಿ, ರವೀಂದ್ರ ಶೆಟ್ಟಿ ಕೊಟ್ರಪಾಡಿಗುತ್ತು, ಎ.ಕೆ ಹರೀಶ್, ಕಿಶೋರ್ ಚೌಟ, ಸಿಎ| ಅಶ್ವಜಿತ್ ಹೆಜ್ಮಾಡಿ, ಭಾಸ್ಕರ್ ಎಂ.ಸಾಲ್ಯಾನ್, ರತ್ನಾಕರ್ ಶೆಟ್ಟಿ ದೆಪ್ಪಣಿಗುತ್ತು, ಶ್ಯಾಮ್‌ಸುಂದರ್ ಶೆಣೈ ಮತ್ತಿತರರನ್ನು ಗೌರವಿಸಿ ಹಳೆ ವಿದ್ಯಾರ್ಥಿಗಳ ಮಕ್ಕಳಿಗೆ ಶೈಕ್ಷಣಿಕ ಸಾಧನೆ ಪರಿಗಣಿಸಿ ಸತ್ಕರಿಸಿದರು.



ಪ್ರೊ| ಪಾರ್ವತಿ ಮಾತನಾಡಿ ವಿಜಯ ಕಾಲೇಜ್‌ನ ಈ ಹಳೆ ವಿದ್ಯಾರ್ಥಿ ಸಂಘದ ಜಾಗತಿಕ ಸಾಂಘಿಕತೆ ಆವಿಷ್ಕಾರಿತ ಮತ್ತು ಅದ್ಭುತವಾಗಿದೆ. ಸಮಾಜಕ್ಕೆ ಇದರ ನಿಸ್ವಾರ್ಥ ಸೇವೆಯು ನಿಜವಾಗಿಯೂ ಸ್ವಾರ್ಥರಹಿತವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಗಾಗಿ ಮತ್ತು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಮತ್ತು ಕಾಲೇಜ್‌ಗೆ ಸಹಾಯ ಮಾಡಿದ್ದಕ್ಕಾಗಿ ಅಭಿನಂದನೆಗಳು. ಬೆಳೆದ ವಿದ್ಯಾರ್ಥಿಗಳಿಗೆ ಭಾಷೆಯನ್ನು ಕಲಿಸುವುದು ಸುಲಭವಲ್ಲ ಎಂದು ನನ್ನ ಹಿರಿಯ ಬೋಧಕರು ಹೇಳುತ್ತಿದ್ದು, ನನ್ನನ್ನು ಗಾಬರಿ ಪಡಿಸಿತ್ತು. ಏಕೆಂದರೆ ವಿದ್ಯಾರ್ಥಿಗಳು ಭಾಷಾ ವಿಷಯಗಳಿಗೆ ಹಾಜರಾಗುವಾಗ ದೇಹ ಮತ್ತು ಮನಸ್ಸನ್ನು ಬಿಗಿಯಾಗಿ ಹಿಡಿದಿಟ್ಟು ತರಗತಿಗಳನ್ನು ವಿಶ್ರಾಂತಿಗಾಗಿ ಪರಿಗಣಿಸುತ್ತಾರೆ. ಅಂದು ಅದೇ ಸರಿಯಾಗಿದ್ದರೂ ಇಂದು ಅದೇ ವಿದ್ಯಾರ್ಥಿಗಳೇ ಭಾಷಾತಜ್ಞರಾಗಿ ಜಾಗತಿಕವಾಗಿ ಸಾಧಕರೆಣಿಸಿರುವುದು ಹೆಮ್ಮೆದಾಯಕವಾಗಿದೆ. ಇದೇ ಪ್ರತಿಯೊಬ್ಬ ಅಧ್ಯಾಪಕರಿಗೆ ಸಲ್ಲುವ ನಿಜಾರ್ಥದ ಗೌರವವಾಗಿದೆ ಎಂದರು.

ರಾಷ್ಟ್ರದ ಆರ್ಥಿಕ ರಾಜಧಾನಿ ಅಂತಾರಾಷ್ಟ್ರೀಯ ಮಹಾನಗರಿಯಲ್ಲಿ ನಮ್ಮ ವಿದ್ಯಾರ್ಥಿಗಳು ನಡೆಸುವ ಈ ಕಾರ್ಯಕ್ರಮ ಪ್ರಮುಖ ಮತ್ತು ವಿಶಿಷ್ಟವಾಗಿದೆ. ನಿವೃತ್ತ ಅಧ್ಯಾಪಕರನ್ನು ಸನ್ಮಾನಿಸುವ ನಿಷ್ಠೆ ಅರ್ಥಗರ್ಭಿತವಾದುದು. ಇದು ಸಾಧಕರ ಅಭಿಮಾನ ಪಾತ್ರವಾದ ಸಾಧನಾಶೀಲ ಸಂಭ್ರಮವಾಗಿದೆ. ಎಂಬತ್ತರ ದಶಕದತ್ತ ಮತ್ತೆ ಅಧ್ಯಾಪನಾ ದಿನಗಳನ್ನು ಮೆಲುಕು ಹಾಕುತ್ತಾ ಸಂತಸ ಪಡುವ ಕ್ಷಣಗಳಿಕ್ಕಿಂತ ಸನ್ಮಾನ ಬೇರೊಂದಿಲ್ಲ. ಆದ್ದರಿಂದ ಇದು ನಮ್ಮ ವೃತ್ತಿಗೆ ಸಂತುಷ್ಟಿ ತಂದಿದ್ದು ಸಮಾಧಾನಕರ ಬದುಕಿಗೆ ಪ್ರೇರಣೆಯಾಗಿದೆ ಎಂದು ಪ್ರೊ| ಜಿ.ಎಸ್ ಹೆಗ್ಡೆ ನುಡಿದರು.

ವೆಂಕಟೇಶ್ ಭಟ್ ಮಾತನಾಡಿ ನಿಮ್ಮ ಈ ಮಟ್ಟದ ಸಾಧನೆಗೆ ಕಾಲೇಜ್‌ನ ಪ್ರಾಂಶುಪಾಲರು, ಪ್ರಾಧ್ಯಾಪಕರು ಸಹಾಯ ಮಾಡಿದ್ದು, ಅದನ್ನು ನೆನಪಿಟ್ಟುಕೊಂಡು ಕಾಲೇಜ್‌ಗೆ ಸಹಾಯ ಮಾಡುತ್ತಿರುವುದು ವಿದ್ಯಾಋಣ ಪೂರೈಕೆಯಾಗಿದೆ. ನಿಮ್ಮ ಕೃಪೆಯಿಂದ ಪ್ರಸಕ್ತ ವಿದ್ಯಾರ್ಥಿಗಳು ನಿರಾಳವಾಗಿ ಓದಿ ರ್‍ಯಾಂಕ್‌ಗಳನ್ನು ಪಡೆಯಿತ್ತಿದ್ದು ನಿಮ್ಮ ಕೊಡುಗೆಯ ಸದುಪಯೋಗ ಪಡೆಯುತ್ತಿದ್ದಾರೆ ಎಂದರು. ಒಂದು ಸಂಘಟನೆಯು ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಅದಕ್ಕೆ ಸದಸ್ಯರ ಸಹಭಾಗಿತ್ವ ಮುಖ್ಯವಾದುದು. ಸದ್ಯದ ಪದಾಧಿಕಾರಿಗಳ ಅವಿರತ ಪರಿಶ್ರಮ ಯಶಸ್ಸುವಾಗಿರುವುದಕ್ಕೆ ಈ ಕಾರ್ಯಕ್ರಮವು ಸಾಕ್ಷಿಯಾಗಿದೆ. ನಾವು ಇಂದು ಏನಾಗಿದ್ದರೂ ಅದು ವಿಜಯ ಕಾಲೇಜ್‌ನ ಪ್ರಾಧ್ಯಾಪಕರ ಬೋಧನಾಶ್ರಮದ ಫಲವಾಗಿದೆ. ಮುಂದಿನ ದಿನಗಳಲ್ಲಿ ಶಿಕ್ಷಣಕ್ಕಾಗಿ ಹೆಚ್ಚುವರಿ ದೇಣಿಗೆಯನ್ನು ಕೊಡಮಾಡಿ ಸಾಕ್ಷರತಾ ಸೇವೆಗೆ ಪ್ರೋತ್ಸಾಹಕರಾಗೋಣ ಎಂದು ಸಿಎ| ಶಂಕರ್ ಶೆಟ್ಟಿ ನುಡಿದರು. ಹಳೆ ವಿದ್ಯಾರ್ಥಿಗಳ ಸಹಕಾರ ಅವಿಸ್ಮರಣೀಯವಾಗಿದೆ. ನಮ್ಮ ಉಪದ್ರವು ಕಾಲೇಜ್‌ಗೆ ಉಪಕಾರವಾಗಿ ಪರಿಣಮಿಸಿರುವುದೇ ನಮ್ಮ ಅಭಿಮಾನವಾಗಿದೆ. ಉದಾರತೆಯಿಂದ ಮಾತ್ರ ಸಂಸ್ಥೆಗಳ ಮುನ್ನಡೆ ಸಾಧವಾಗಿದ್ದು, ಭವಿಷ್ಯದಲ್ಲಿ ನಿಮ್ಮೆಲ್ಲರ ಸಹಕಾರ ಇನ್ನಷ್ಟು ದ್ವಿಗುಣಗೊಳ್ಳಲಿ. ಈ ಮೂಲಕ ವಿದ್ಯಾರ್ಥಿಗಳ ದತ್ತು ಸ್ವೀಕಾರ ಮತ್ತಷ್ಟು ಅಧಿಕಗೊಳಿಸೋಣ ಎಂದು ಅಧ್ಯಕ್ಷೀಯ ಭಾಷಣವನ್ನುದ್ದೇಶಿಸಿ ವಾಸುದೇವ ಸಾಲಿಯಾನ್ ತಿಳಿಸಿದರು.

ಸಿಎ| ಸೋಮನಾಥ್ ಕುಂದರ್, ಮೋಹನ್‌ದಾಸ್ ಹೆಜ್ಮಾಡಿ ಸೇರಿದಂತೆ ಸದಸ್ಯರನೇಕರು ಹಾಜರಿದ್ದು ಗುರುವಂದನೆ ಸಲ್ಲಿಸಿ ಶುಭಾರೈಸಿದರು. ಸಾಂಸ್ಕೃತಿಕ ಕಾರ್ಯಕ್ರಮವಾಗಿಸಿ ಸದಸ್ಯರ ಮಕ್ಕಳು ನೃತ್ಯವೈಭವ ಪ್ರದರ್ಶಿಸಿದ್ದು ರಾಜ್‌ಕುಮಾರ್ ಕಾರ್ನಾಡ್ ಸಂಗೀತ ರಸಮಂಜರಿ ಸಾದರಪಡಿಸಿದರು. ಶಶಿಧರ್ ಬಂಗೇರಾ ಮಟ್ಟು ಸಾಂಸ್ಕೃತಿಕ ಕಾರ್ಯಕ್ರಮ ನಿರೂಪಿಸಿದರು. ಗತ ಸಾಲಿನಲ್ಲಿ ನಿಧನರಾದ ಗಣ್ಯರಿಗೆ ಆರಂಭದಲ್ಲಿ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆನಂದ್ ಶೆಟ್ಟಿ ಸ್ವಾಗತಿಸಿ ಪ್ರಸ್ತಾವನೆಗೈದರು. ಚಿತ್ರಾ ಗಣೇಶ್ ಶೆಟ್ಟಿ ಪ್ರಾರ್ಥನೆಗೈದರು. ಭಾಸ್ಕರ್ ಬಿ.ಶೆಟ್ಟಿ ವಾರ್ಷಿಕ ವರದಿ ವಾಚಿಸಿದರು. ಸಿಎ| ರೋಹಿತಾಕ್ಷ ದೇವಾಡಿಗ ಗತ ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ವಿದ್ಯಾ ಶೆಣೈ ಮತ್ತು ಸರಿತಾ ರಾವ್ ಗುರುವಂದನಾ ಸ್ವೀಕೃತರನ್ನು ಪರಿಚಯಿಸಿದರು. ಲಕ್ಷ್ಮೀಶ್‌ರಾವ್, ಶಶಿಧರ್ ಬಂಗೇರಾ ಸನ್ಮಾನಿತರನ್ನು ಪರಿಚಯಿಸಿದರು. ಹರೀಶ್ ಹೆಜ್ಮಾಡಿ ನಿರೂಪಿಸಿದರು. ಶೇಖರ್ ಭಂಡಾರಿ ವಂದಿಸಿದರು.

### ಕಾಂಗ್ರೆಸ್‌ನೊಳಗೆ ಎಸ್‌ಸಿ ಎಡ-ಬಲ ಗುಂಪುಗಳ ನಡುವೆ ಭಿನ್ನಾಭಿಪ್ರಾಯ

# ಒಳಮೀಸಲಾತಿ ಅನುಷ್ಠಾನದಲ್ಲಿ ಸಿಎಂ–ಡಿಸಿಎಂಗೆ ರಾಜಕೀಯ, ಕಾನೂನು ಸವಾಲು

**ಬೆಂಗಳೂರು, ಮಾ.8:** ರಾಜ್ಯ ಸರ್ಕಾರಕ್ಕೆ ಒಳ ಮೀಸಲಾತಿ ಚಿಂತೆ ಶುರುವಾಗಿದೆ. ಒಳ ಮೀಸಲಾತಿ ಅನುಷ್ಠಾನ ವಿಷಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದೊಳಗೆ ಎಸ್ಸಿ (ಬಲ) ಮತ್ತು ಎಸ್ಸಿ (ಎಡ) ಗುಂಪುಗಳ ನಡುವಿನ ಭಿನ್ನಾಭಿಪ್ರಾಯ ತೀವ್ರಗೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಒಳಮೀಸಲಾತಿ ವಿಷಯದಲ್ಲಿ ರಾಜಕೀಯ ಹಾಗೂ ಕಾನೂನು ಸವಾಲುಗಳು ಎದುರಾಗಿವೆ. ಮೀಸಲಾತಿ ವಿಚಾರ ಸಂಬಂಧ ಸ್ವಪಕ್ಷದಲ್ಲೇ ಭಿನ್ನಾಭಿಪ್ರಾಯಗಳು ಮೂಡಿವೆ. ಜೊತೆಗೆ ನ್ಯಾಯಾಲಯದಲ್ಲೂ ಪ್ರಕರಣಗಳು ಬಾಕಿಯಿರುವುದರಿಂದ ಸರ್ಕಾರಕ್ಕೆ ನಿರ್ಧಾರ ಕೈಗೊಳ್ಳುವುದು ಸುಲಭವಿಲ್ಲದ ಪರಿಸ್ಥಿತಿ ಉಂಟಾಗಿದೆ.

ಎಸ್ಸಿ (ಎಡ) ಹಿರಿಯ ನಾಯಕರ ಪ್ರತಿನಿಧಿ ಮಂಡಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿತ್ತು. ಈ ಪ್ರತಿನಿಧಿ ಮಂಡಳಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ ಹಾಗೂ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ಒಳಗೊಂಡಿದ್ದಾರೆ.

ದಶಕಗಳಿಂದ ಒಳ ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವ ಎಸ್ಸಿ (ಎಡ)/ಮಾದಿಗ ಸಮುದಾಯವು, ಒಳ ಮೀಸಲಾತಿ ನೀಡದೇ 56,432 ಹುದ್ದೆಗಳ ನೇಮಕಾತಿ ಮಾಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿದೆ.ಸಚಿವ ಸಂಪುಟದಲ್ಲಿ ಡಿಕೆ ಶಿವಕುಮಾರ್ ಒಳಮೀಸಲಾತಿಗೆ ಬೆಂಬಲ ವ್ಯಕ್ತಪಡಿಸಿದ್ದರಂತೆ. ಈ ಮಧ್ಯೆ ಎಸ್ಸಿ ಎಡಗೈ ನಾಯಕ, ಸಚಿವರಾದ ಕೆ ಹೆಚ್ ಮುನಿಯಪ್ಪ ಹಾಗೂ ಆರ್ ಬಿ ತಿಮ್ಮಾಪುರ ಅವರು ಡಿ ಕೆ ಶಿವಕುಮಾರ್‌ರನ್ನು ಭೇಟಿಯಾಗಿ, ಒಳ ಮೀಸಲಾತಿ ಜಾರಿಗೆ ತಂದು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಮನವಿ ಮಾಡಿದ್ದಾರೆ.

ಬೋವಿ ಮತ್ತು ಲಂಬಾಣಿ ಸೇರಿದಂತೆ ಕಾಂಗ್ರೆಸ್‌ನೊಳಗಿನ ಎಸ್ಸಿ ಬಲಗೈ ಸಮುದಾಯದ ನಾಯಕರು, ಕಾನೂನು ಸವಾಲುಗಳಿಗೆ ಹೆದರಿ ಸರ್ಕಾರವು ಶೇ.50 ಮೀಸಲಾತಿಗೆ ಮರಳುತ್ತಿರುವುದರಿಂದ ಶೇ.15 ಮೀಸಲಾತಿಯೊಳಗೆ ಒಳ ಮೀಸಲಾತಿಯನ್ನು ಜಾರಿಗೆ ತರಲು ಸಾಧ್ಯವಿಲ್ಲ ಎನ್ನುತ್ತಿದೆ.

ಎಸ್ ಸಿ ಒಳಮೀಸಲಾತಿ ಆಯೋಗದ ಅಧ್ಯಕ್ಷ ನಾಗಮೋಹನ್ ದಾಸ್, ಎಸ್ಸಿ ಸಮುದಾಯಕ್ಕೆ ಒಟ್ಟು ಶೇ.17ರಷ್ಟು ಒಳ ಮೀಸಲಾತಿ ನೀಡುವಂತೆ ಶಿಫಾರಸು ಮಾಡಿದ್ದರು.

ಶನಿವಾರ ಡಿಕೆ ಶಿವಕುಮಾರ್‌ರನ್ನು ಭೇಟಿ ಮಾಡಿದ್ದು, ಭೇಟಿ ವೇಳೆ ಸರ್ಕಾರಿ ಇಲಾಖೆಗಳಲ್ಲಿನ 56,432 ಖಾಲಿ ಹುದ್ದೆಗಳನ್ನು ಈ ಮೀಸಲಾತಿ ಅನ್ವಯ ಭರ್ತಿ ಮಾಡುವ ಬಗ್ಗೆ ಚರ್ಚೆ ನಡೆದಿರಬಹುದು ಎಂಬ ಊಹಾಪೋಹಗಳು ವ್ಯಕ್ತವಾಗಿದ್ದವು. ಆದರೆ, ಇದನ್ನು ನಾಗಮೋಹನ್ ದಾಸ್ ನಿರಾಕರಿಸಿದ್ದಾರೆ.ಕರ್ನಾಟಕದಲ್ಲಿ ಎಸ್ಸಿ ಮೀಸಲಾತಿಯನ್ನು ಶೇಕಡಾ 15 ರಿಂದ ಶೇಕಡಾ 17ಕ್ಕೆ ಹಾಗೂ ಎಸ್ಟಿ ಮೀಸಲಾತಿಯನ್ನು ಶೇಕಡಾ 3 ರಿಂದ 7ಕ್ಕೆ ಹೆಚ್ಚಿಸಲಾಗಿದ್ದು, ಇತರ ಹಿಂದುಳಿದ ವರ್ಗಗಳಿಗೆ ಶೇಕಡಾ 32ರಷ್ಟು ಮೀಸಲಾತಿ ಇರುವುದರಿಂದ, ಒಟ್ಟು ಮೀಸಲಾತಿ ಪ್ರಮಾಣ ಶೇಕಡಾ 56ಕ್ಕೆ ತಲುಪಿದೆ. ಇದು ಸಂವಿಧಾನದಲ್ಲಿ ನಿಗದಿಪಡಿಸಿರುವ ಶೇ.50 ಮಿತಿಯನ್ನು ಮೀರುವ ಕಾರಣ ಕಾನೂನು ಸವಾಲು ಎದುರಾಗಿದೆ.




ಅಂತರರಾಷ್ಟ್ರೀಯ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಭಾನುವಾರ ಬೆಂಗಳೂರಿನಲ್ಲಿ ಎಐಎಂಎಸ್‌ಎಸ್ ಸದಸ್ಯರು ರ್‍ಯಾಲಿ ನಡೆಸಿದರು.

### ಮಹಿಳಾ ಸಬಲೀಕರಣಕ್ಕೆ ಹೊಸ ಸ್ಫೂರ್ತಿ ನೀಡಿದ ಅಭಿಯಾನ

# ಬೆಂಗಳೂರು ರಸ್ತೆಗಳಲ್ಲಿ ಮಹಿಳಾ ಶಕ್ತಿಯ ಘೋಷ 'ನಾರಿಶಕ್ತಿ ರೈಡ್' ಭವ್ಯ ಯಶಸ್ಸು

**ಬೆಂಗಳೂರು, ಮಾ, 8:** ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ She For Society (R) ಸಂಸ್ಥೆ, ಮದರ್‌ಹುಡ್ ಆಸ್ಪತ್ರೆ, ಹೆಬ್ಬಾಳ ಮತ್ತು ವಾಕ್ಸಿ ಬೆಂಗಳೂರು ಏರ್ಪೋರ್ಟ್ (Prestige Tech Cloud) ಸಹಯೋಗದಲ್ಲಿ ಆಯೋಜಿ ಸಿದ್ದ 'ನಾರಿಶಕ್ತಿ ರೈಡ್ 2026' ಕಾರ್ಯಕ್ರಮ ಭಾನುವಾರ ಭರ್ಜರಿ ಯಶಸ್ಸಿನೊಂದಿಗೆ ನಡೆಯಿತು. ಬೆಂಗಳೂರು ನಗರದ ರಸ್ತೆಗಳಲ್ಲಿ ಮಹಿಳಾ ಶಕ್ತಿಯ ಘೋಷ ಮೂಡಿಸಿದ ಈ ವಿಶೇಷ ಬೈಕ್ ರೈಡ್ ಮಹಿಳಾ ಸಬಲೀಕರಣಕ್ಕೆ ಹೊಸ ಸ್ಫೂರ್ತಿ ನೀಡಿತು.



ಬೆಳಗ್ಗೆ ಹೆಬ್ಬಾಳ ಫ್ಲೈಓವರ್ ಕೆಳಭಾಗದಲ್ಲಿರುವ ಮದರ್‌ಹುಡ್ ಆಸ್ಪತ್ರೆ, ಸಹಕಾರನಗರದಿಂದ ಆರಂಭ ವಾದ ಈ ನಾರಿ ಶಕ್ತಿ ರೈಡ್‌ನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ಅದ್ದೂರಿಯಾಗಿ ಆರಂಭಿಸಿದರು. ಬಳಿಕ ಈ ರ್‍ಯಾಲಿ ನಗರ ರಸ್ತೆಗಳ ಮೂಲಕ ಸಾಗುತ್ತಾ ವಾಕ್ಸಿ ಬೆಂಗಳೂರು ಏರ್ಪೋರ್ಟ್, Prestige Tech Cloud, ನವರತ್ನ ಅಗ್ರಹಾರದಲ್ಲಿ ಸಮಾರೋಪಗೊಂಡಿತು.

ಈ ರೈಡ್‌ನಲ್ಲಿ 50 ಮಹಿಳಾ ಬೈಕರ್ಸ್, ತಾಲಿರು ಫೌಂಡೇಶನ್‌ನ 20 ಮಹಿಳಾ ಆಟೋ ಚಾಲಕರು, 20 ಮಹಿಳಾ ಕಾರ್ ಚಾಲಕರು, ವೈದ್ಯರು, ವೃತ್ತಿಪರರು ಹಾಗೂ ಸೈಬರ್ ಸುರಕ್ಷತಾ ತಜ್ಞರು ಉತ್ಸಾಹದಿಂದ ಭಾಗವಹಿಸಿದರು. ವಿಶೇಷವಾಗಿ ಭಾರತೀಯ ವಾಯುಪಡೆಯ ನಿವೃತ್ತ ವಿಂಗ್ ಕಮಾಂಡರ್ ಜೂಲಿ ರೋಸಿ ಅವರ ಉಪಸ್ಥಿತಿ ಕಾರ್ಯ ಕ್ರಮಕ್ಕೆ ಮತ್ತಷ್ಟು ಗೌರವ ತಂದಿತು.

ನಗರದ ರಸ್ತೆಗಳಲ್ಲಿ ಮಹಿಳೆಯರು ಒಂದಾಗಿ ಸಾಗಿದ ಈ ಬೈಕ್ ರ್‍ಯಾಲಿ ಮಹಿಳೆಯರ ಧೈರ್ಯ, ಏಕತೆ ಮತ್ತು ಆತ್ಮವಿಶ್ವಾಸದ ಪ್ರತೀಕ ವಾಗಿ ಮೂಡಿಬಂದಿತು. ರೈಡ್‌ನ ನಂತರ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳೆಯರಿಗೆ ಉಪಹಾರ ವ್ಯವಸ್ಥೆಯೊಂದಿಗೆ 'ಮಹಿಳೆಯರ ಶಕ್ತಿಯ ಕೇಂದ್ರ' ವಿಷಯದ ಮೇಲೆ ವಿಶೇಷ ಉಪನ್ಯಾಸ ನಡೆಯಿತು. ಜೊತೆಗೆ Djembe Drum Circle ಮತ್ತು Sound Healing ಕಾರ್ಯಕ್ರಮಗಳು ಮಹಿಳೆಯರಿಗೆ ಮನೋಲ್ಲಾಸವನ್ನು ನೀಡಿದವು.

ಕಾರ್ಯಕ್ರಮದ ವೇಳೆ ಮಾತನಾಡಿದ ಸಂಘಟಕರು, ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿರುವುದು ಸಮಾಜದ ಪ್ರಗತಿಯ ಸಂಕೇತವಾಗಿದ್ದು, ಇಂತಹ ಕಾರ್ಯಕ್ರಮಗಳು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ ಎಂದು ಹೇಳಿದರು.

ಒಟ್ಟಾರೆ 'ನಾರಿಶಕ್ತಿ ರೈಡ್ 2026' ಬೆಂಗಳೂರು ನಗರದಲ್ಲಿ ಮಹಿಳಾ ಶಕ್ತಿಯ ಅದ್ಭುತ ಪ್ರದರ್ಶನವಾಗಿ ಮೂಡಿ, ಮಹಿಳಾ ಸಮಾನತೆ, ಗೌರವ ಮತ್ತು ಸಬಲೀ ಕರಣದ ಸಂದೇಶವನ್ನು ಸಮಾಜಕ್ಕೆ ಸಾರಿದ ಮಹತ್ವದ ಕಾರ್ಯಕ್ರಮವಾಗಿ ಗುರುತಿಸಲ್ಪಟ್ಟಿತು.

# 1ನೇ ತರಗತಿ ಪ್ರವೇಶಕ್ಕೆ ವಯೋಮಿತಿ ಸಡಿಲಿಸಿ ಮುಖ್ಯಮಂತ್ರಿ ಮೇಲೆ ಪೋಷಕರ ನಿಯೋಗ ಒತ್ತಡ

**6 ವರ್ಷ ಕಡ್ಡಾಯವಾಗಿರುವುದರಿಂದ ಪ್ರವೇಶ ವಂಚಿತರಾಗುತ್ತಿರುವ ಲಕ್ಷಾಂತರ ಮಕ್ಕಳು**

**ಬೆಂಗಳೂರು, ಮಾ.8:** ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಯ ಪ್ರವೇಶಕ್ಕೆ ವಯೋಮಿತಿ ಸಡಿಲಿಕೆ ಮಾಡುವಂತೆ ಪೋಷಕರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹೇರಿದೆ.

2026–27ನೇ ಸಾಲಿನ ಶೈಕ್ಷಣಿಕ ಸಾಲಿಗೆ ಒಂದನೇ ತರಗತಿಗೆ ಪ್ರವೇಶ ಪಡೆಯಬೇಕಾದರೆ ಜೂನ್ 1ಕ್ಕೆ ಕಡ್ಡಾಯವಾಗಿ 6 ವರ್ಷ ತುಂಬಿರಬೇಕು ಎಂಬ ನಿಯಮವಿದೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಎಲ್‌ಕೆಜಿಗೆ 4 ವರ್ಷ, ಯುಕೆಜಿಗೆ 5 ವರ್ಷ, ಒಂದನೇ ತರಗತಿಗೆ 6 ವರ್ಷ ವಯೋಮಿತಿ ನಿಗದಿಯಾಗಿದೆ. ಆದರೆ ಸುಮಾರು 2.30 ಲಕ್ಷ ಮಕ್ಕಳು ಕೆಲವೇ ದಿನಗಳ ಅಂತರದಲ್ಲಿ 6 ವರ್ಷದ ವಯೋಮಿತಿಯನ್ನು ತಲುಪಲು ಸಾಧ್ಯವಾಗದೆ ಪ್ರವೇಶ ವಂಚಿತರಾಗುತ್ತಿದ್ದಾರೆ.

ಕಸ್ತೂರಿ ನಗರದ ಅಮೋಘವರ್ಷ ಎಂಬ ವಿದ್ಯಾರ್ಥಿ ಕೇವಲ 15 ದಿನಗಳ ಕಡಿಮೆ ಅಂತರದಲ್ಲಿ ವಯೋಮಿತಿ ಸಾಲದೆ ಅವಕಾಶ ವಂಚಿತನಾಗುತ್ತಿದ್ದಾನೆ. ಈಗಾಗಲೇ ಯುಕೆಜಿ ಪೂರ್ಣಗೊಳಿಸಿರುವ ಆತ ತಮ ಸ್ನೇಹಿತರ ಜೊತೆಯಲ್ಲೇ ಒಂದನೇ ತರಗತಿಗೆ ದಾಖಲಾಗಲು ಬಯಸುತ್ತಿದ್ದಾನೆ. ಆದರೆ ನಿಯಮದ ಪ್ರಕಾರ ಆತನಿಗೆ ಪ್ರವೇಶ ಸಿಗುತ್ತಿಲ್ಲ. ಹೀಗಾಗಿ ಮನೆಯಲ್ಲಿ ಅಳುತ್ತಾ ಕುಳಿತಿದ್ದಾನೆ. ಸ್ನೇಹಿತರ ಜೊತೆ ಒಂದನೇ ತರಗತಿಗೆ ಶಾಲೆ ಸೇರಿಕೊಳ್ಳಬೇಕು ಎಂಬ ಆತನ ಬಯಕೆ. ಅವಕಾಶ ಸಿಗದೇ ಇದ್ದರೆ ಮಾನಸಿಕವಾಗಿ ಕುಗ್ಗುವ ಸಾಧ್ಯತೆ ಇದೆ. ಸರ್ಕಾರ ಮಾನವೀಯತೆ ದೃಷ್ಟಿಯಿಂದ ವಯೋಮಿತಿ ಸಡಿಲಿಕೆ ಮಾಡಬೇಕೆಂದು ಆತನ ತಾಯಿ ಮನವಿ ಮಾಡಿಕೊಂಡಿದ್ದಾರೆ.

ಇದೇ ರೀತಿ ರಾಜ್ಯದಲ್ಲಿ ಸುಮಾರು ಲಕ್ಷಾಂತರ ಮಕ್ಕಳು ಅತಂತ್ರ ಸ್ಥಿತಿಯಲ್ಲಿದ್ದಾರೆ. ಅವರ ಪೋಷಕರು ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಲಾ ಶಿಕ್ಷಣ ಸಚಿವ ಮಧುಬಂಗಾರಪ್ಪ ಮತ್ತು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಕಳೆದ ವರ್ಷ ಇದೇ ರೀತಿಯ ಸಮಸ್ಯೆ ಎದುರಾದಾಗ ಸರ್ಕಾರ ಮಧ್ಯ ಪ್ರವೇಶ ಮಾಡಿ ವಯೋಮಿತಿಯನ್ನು 5 ವರ್ಷ 5 ತಿಂಗಳಿಗೆ ಇಳಿಕೆ ಮಾಡಿತ್ತು. ಈ ನಿರ್ಧಾರ 2025–26ನೇ ಸಾಲಿಗೆ ಮಾತ್ರ ಸೀಮಿತವಾಗಿರಲಿದೆ. ಮುಂದಿನ ವರ್ಷದಿಂದ ಯಾವುದೇ ರೀತಿಯಲ್ಲೂ ವಯೋಮಿತಿ ಸಡಿಲಿಕೆ ನೀಡುವುದಿಲ್ಲ ಎಂದು ಮಧುಬಂಗಾರಪ್ಪ ಆಗಲೇ ಸ್ಪಷ್ಟವಾಗಿ ಹೇಳಿದ್ದರು. ಆದರೆ ಈಗ ಅದೇ ಬೇಡಿಕೆ ಮತ್ತೆ ಉದ್ಭವಗೊಂಡಿದೆ. ಪೋಷಕರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಕನಿಷ್ಠ ಮೂರು ತಿಂಗಳ ವಯೋಮಿತಿ ಸಡಿಲಿಕೆ ನೀಡುವಂತೆ ಮನವಿ ಮಾಡಿದೆ.

**ಸರ್ಕಾರ ಹಿಂದೇಟು:** ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ವಯೋಮಿತಿ ಪಾಲನೆ ಕಡ್ಡಾಯವಾಗಿದೆ. ಈ ನಿಯಮ ಮೀರಿದರೆ ಬೇರೆ ಬೇರೆ ಕಾರಣಗಳಿಗೆ ವಿದ್ಯಾರ್ಥಿಗಳು ಭವಿಷ್ಯದಲ್ಲಿ ತೊಂದರೆ ಅನುಭವಿಸಬೇಕಾಗಬಹುದು ಎಂಬ ಆತಂಕ ಇದೆ. ಈ ನಿಟ್ಟಿನಲ್ಲಿ ಸರ್ಕಾರ ವಯೋಮಿತಿ ಸಡಿಲಿಕೆಗೆ ಹಿಂದೇಟು ಹಾಕುತ್ತಿದೆ, ಆದರೆ ಪೋಷಕರು ಮಕ್ಕಳ ಹಿತದೃಷ್ಟಿಯಿಂದ ನಿಯಮ ಸಡಿಲಗೊಳಿಸುವಂತೆ ಒತ್ತಡ ಹೇರುತ್ತಿದ್ದಾರೆ. ಸರ್ಕಾರ ಯಾವ ರೀತಿಯ ನಿರ್ಣಯ ಕೈಗೊಳ್ಳಲಿದೆ ಎಂದು ಕಾದು ನೋಡಬೇಕಿದೆ.

### ಬ್ಯಾಂಕ್ ದರೋಡೆ ಮತ್ತು ಗ್ರಾಹಕನ ಕೊಲೆ ಪ್ರಕರಣ

# 14 ವರ್ಷದ ಹಿಂದಿನ ಪ್ರಕರಣದಲ್ಲಿ ನಾಲ್ವರಿಗೆ ಜೀವಾವಧಿ ಶಿಕ್ಷೆ: ಹೈಕೋರ್ಟ್ ಆದೇಶ

**ಬೆಂಗಳೂರು, ಮಾ.8:** ಕಳೆದ 14 ವರ್ಷದ ಹಿಂದೆ ನಗರವನ್ನು ಬೆಚ್ಚಿಬೀಳಿಸಿದ್ದ ಕಾರ್ಪೊರೇಷನ್ ಬ್ಯಾಂಕ್‌ನ ಚಿಕ್ಕಬಾಣಾವರ ಶಾಖೆಯಲ್ಲಿ ನಡೆದಿದ್ದ ಗ್ರಾಹಕನ ಕೊಲೆ ಮತ್ತು 15 ಲಕ್ಷ ದರೋಡೆ ಪ್ರಕರಣ ಸಂಬಂಧ ಬಿಹಾರ ರಾಜ್ಯದ ಮೂವರು ಮತ್ತು ಛತ್ತೀಸಗಢದ ಒಬ್ಬನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಈಚೆಗೆ ಹೈಕೋರ್ಟ್ ಆದೇಶಿಸಿದೆ.

ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಎಚ್ ಪಿ ಸಂದೇಶ್ ಮತ್ತು ಟಿ ವೆಂಕಟೇಶ್ ನಾಯಕ್ ಅವರ ವಿಭಾಗೀಯ ಪೀಠ ಭಾಗಶಃ ಪುರಸ್ಕರಿಸಿದೆ. ಬಿಹಾರ ಮೂಲದ ದೇವೇಶ್ ಕುಮಾರ್ ಸಿಂಗ್, ವಿಕಾಸ್ ಕುಮಾರ್ ಗುಪ್ತಾ, ಇಮ್ರಾನ್ ಮತ್ತು ಛತ್ತೀಸ್‌ಗಢದ ಪ್ರೇಮ ಕುಮಾರ್ ಸಾಹು ಜೀವಾವಧಿ ಶಿಕ್ಷೆಗೆ ಒಳಗಾದವರು. ನಾಲ್ವರೂ ಅಪರಾಧಿಗಳು ಎರಡು ವಾರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏಳನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮುಂದೆ ಹಾಜರಾಗಬೇಕು. ವಿಚಾರಣಾಧೀನ ನ್ಯಾಯಾಲಯವು ಅಪರಾಧಿಗಳಿಗೆ ಶಿಕ್ಷೆ ಅನುಭವಿಸಲು ಜೈಲಿಗೆ ಕಳುಹಿಸಬೇಕು. ಅಪರಾಧಿಗಳಿಗೆ ವಿಧಿಸಲಾದ ತಲಾ 90 ಸಾವಿರ ಪೈಕಿ ಶೇ.80ರಷ್ಟು ಹಣವನ್ನು ಘಟನೆಯಲ್ಲಿ ಕೊಲೆಗೀಡಾದ ಮುರಳೀಧರ ಪತ್ನಿಗೆ ಪರಿಹಾರವಾಗಿ ನೀಡಬೇಕು ಎಂದು ಪೀಠ ನಿರ್ದೇಶಿಸಿದೆ.




2012ರ ನವೆಂಬರ್ 19ರಂದು ಸಂಜೆ 4 ಗಂಟೆಗೆ ತಲೆಗೆ ಟೋಪಿ ತೊಟ್ಟು ಕೈಯಲ್ಲಿ ಪಿಸ್ತೂಲ್ ಹಿಡಿದು ಕಾರ್ಪೊರೇಷನ್ ಬ್ಯಾಂಕಿನ ಚಿಕ್ಕಬಾಣಾವರ ಶಾಖೆಯ ಒಳನುಗ್ಗಿದ ದೇವೇಶ್ ಕುಮಾರ್ ಸಿಂಗ್, ಮ್ಯಾನೇಜರ್ ಅನ್ನು ಹೊರಗೆ ಕರೆದು ಹಣ ನೀಡಲು ಬೇಡಿಕೆಯಿಟ್ಟಿದ್ದ. ಅಲ್ಲದೆ, ಗ್ರಾಹಕರಿಗೆ ಪಿಸ್ತೂಲ್ ತೋರಿಸಿ ಕದಲದಂತೆ ಎಚ್ಚರಿಕೆ ನೀಡಿದ್ದ. ಆದರೆ, ಆ ಎಚ್ಚರಿಕೆಯನ್ನು ಪಾಲಿಸದ್ದಕ್ಕೆ ಮುರಳೀಧರ್‌ಗೆ ದೇವೇಶ್ ಗುಂಡಿಟ್ಟಿದ್ದ. ನಂತರ ಕ್ಯಾಷಿಯರ್‌ನಿಂದ 15.23 ಲಕ್ಷ ದರೋಡೆ ಮಾಡಿ ಪರಾರಿಯಾಗಿದ್ದನು.

ಈ ಕುರಿತು ಶಾಖೆಯ ಮ್ಯಾನೇಜರ್ ನೀಡಿದ ದೂರು ಆಧರಿಸಿ ತನಿಖೆ ನಡೆಸಿದ್ದ ಸೋಲದೇವನಹಳ್ಳಿ ಠಾಣಾ ಪೊಲೀಸರು, ಅದೇ ದಿನ ಬೆಂಗಳೂರಿನ ಸನ್ಮಾನ್ ಲಾಡ್ಜ್‌ನಲ್ಲಿ ತಂಗಿದ್ದ ದೇವೇಶ್‌ನನ್ನು ಬಂಧಿಸಿದ್ದರು. ಆತನಿಂದ 7 ಲಕ್ಷ ಜಪ್ತಿ ಮಾಡಿದ್ದರು. ಆತನನ್ನು ವಿಚಾರಣೆಗೆ ಒಳಪಡಿಸಿದಾಗ ದರೋಡೆಗೆ ಒಳಸಂಚು ರೂಪಿಸಿದ್ದ ಇತರೆ ಮೂವರ ಬಗ್ಗೆ ಬಾಯಿಬಿಟ್ಟಿದ್ದನು. ಆ ಮೂವರನ್ನು ಬಂಧಿಸಿ ಹಣ ಜಪ್ತಿ ಮಾಡಲಾಗಿತ್ತು. ಆನಂತರ ಪೊಲೀಸರು ಎಲ್ಲಾ ಆರೋಪಿಗಳ ವಿರುದ್ಧ ಪೊಲೀಸರು ಆರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ವಿಕಾಸ್ ಕುಮಾರ್ ಗುಪ್ತಾ, ಇಮ್ರಾನ್ ಮತ್ತು ಪ್ರೇಮ ಕುಮಾರ್ ಸಾಹು ಅವರನ್ನು ಖುಲಾಸೆಗೊಳಿಸಿ 2016ರ ಏಪ್ರಿಲ್‌ನಲ್ಲಿ ಆದೇಶಿಸಿತ್ತು. ಮೊದಲನೆ ಆರೋಪಿ ದೇವೇಶ್ ಕುಮಾರ್ ಸಿಂಗ್ ಅನ್ನು ಅತಿಕ್ರಮ ಪ್ರವೇಶ ಮತ್ತು ದರೋಡೆ ಮತ್ತು ಅಕ್ರಮವಾಗಿ ಶಸ್ತ್ರಾಸ್ತ್ರ ಹೊಂದಿದದ ಅಪರಾಧದಡಿ ಜೈಲಿಗೆ ಕಳುಹಿಸಿತ್ತು. ಈ ಆದೇಶ ಪ್ರಶ್ನಿಸಿ ದೇವೇಶ್ ಕುಮಾರ್ ಸಿಂಗ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದನು.

### ಒಟ್ಟು ವಾರ್ಡ್ 369, ಮಹಿಳೆಯರಿಗೆ ಒಟ್ಟು 185 ವಾರ್ಡ್ ಮೀಸಲು

# ಜಿಬಿಎ ಚುನಾವಣೆ: 5 ಪಾಲಿಕೆಗಳ ಅಂತಿಮ ಮೀಸಲಾತಿ ಪಟ್ಟಿ ಪ್ರಕಟ

**ಬೆಂಗಳೂರು, ಮಾ.8:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಗೆ ಅಂತಿಮ ಮೀಸಲಾತಿ ಪಟ್ಟಿ ಪ್ರಕಟಗೊಂಡಿದೆ. ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ವಾರ್ಡ್‌ಗಳ ಅಂತಿಮ ಮೀಸಲಾತಿ ಪಟ್ಟಿಯನ್ನು ನಗರಾಭಿವೃದ್ಧಿ ಇಲಾಖೆ ಪ್ರಕಟಿಸಿದೆ. ಒಟ್ಟು 369 ವಾರ್ಡ್‌ಗಳ ಪೈಕಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸಲಾಗಿದ್ದು, 185 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ.

ಈ ಹಿಂದೆ ಪ್ರಕಟಿಸಲಾಗಿದ್ದ ಕರಡು ಮೀಸಲಾತಿ ಪಟ್ಟಿಗೆ ವಿವಿಧ ಸಂಘಟನೆಗಳು, ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರಿಂದ ನೂರಾರು ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. ಈ ಆಕ್ಷೇಪಣೆಗಳನ್ನು ಪರಿಶೀಲಿಸಿದ ಅಧಿಕಾರಿಗಳು ಕೆಲವು ಲೋಪದೋಷಗಳನ್ನು ಸರಿಪಡಿಸಿ ಅಂತಿಮ ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. ಕರಡು ಪಟ್ಟಿಯಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸುವಲ್ಲಿ ಕೆಲವು ಅಸಮತೋಲನ ಉಂಟಾಗಿದ್ದ ಹಿನ್ನೆಲೆಯಲ್ಲಿ ಆಕ್ಷೇಪಣೆಗಳು ವ್ಯಕ್ತವಾಗಿದ್ದವು. ಅಂತಿಮ ಪಟ್ಟಿಯಲ್ಲಿ ಆ ಸಮಸ್ಯೆಗಳನ್ನು ನಿವಾರಿಸಿ ಮಹಿಳೆಯ ರಿಗೆ ಸಮರ್ಪಕ ಮೀಸಲಾತಿ ನೀಡಲಾಗಿದೆ.

ಇದಲ್ಲದೆ, ಕೆಲ ಪ್ರದೇಶಗಳಲ್ಲಿ ಮೊದಲು ನಿಗದಿಪಡಿಸಲಾಗಿದ್ದ ಮೀಸಲಾತಿಯಲ್ಲಿ ಬದಲಾವಣೆ ಮಾಡಲಾಗಿದೆ. ಕೆಲ ವಾರ್ಡ್‌ಗಳಲ್ಲಿ ಟಿಕೆಟ್ ಕೈತಪ್ಪುವ ಸಾಧ್ಯತೆ ಇದೆ ಎಂದು ಕೆಲ ಯುವ ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ಕೆಲವು ವಾರ್ಡ್‌ಗಳ ಮೀಸಲಾತಿ ಯನ್ನು ಬದಲಾಯಿಸಲಾಗಿದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ. ಒಟ್ಟು 369 ವಾರ್ಡಗಳು. ಮೀಸಲಾತಿ ಪಟ್ಟಿಯಲ್ಲಿ ಮಹಿಳೆಯರಿಗೆ 185 ವಾರ್ಡ್ ಮೀಸಲು. ಒಟ್ಟು 43 ವಾರ್ಡ್‌ಗಳು ಎಸ್‌ಸಿ ಗೆ ಮೀಸಲು, ಎಸ್‌ಟಿ ವರ್ಗಕ್ಕೆ ಒಟ್ಟು 7 ವಾರ್ಡ್ ಮೀಸಲು, ಬಿಸಿಎ ವರ್ಗಕ್ಕೆ 97 ವಾರ್ಡ್ ಮೀಸಲು, ಬಿಸಿಬಿ ವರ್ಗಕ್ಕೆ 24 ವಾರ್ಡ್‌ಗಳು ಹಾಗೂ ಸಾಮಾನ್ಯ ವರ್ಗಕ್ಕೆ 192 ವಾರ್ಡ್‌ಗಳನ್ನು ಮೀಸಲಿಡಲಾಗಿದೆ.



**ಬೆಂಗಳೂರು ನಗರ ಪಾಲಿಕೆ:** ಒಟ್ಟು ವಾರ್ಡ್‌ಗಳು 72, ಎಸ್‌ಸಿಗೆ 7 ವಾರ್ಡ್‌ಗಳು, ಎಸ್‌ಟಿಗೆ 1 ವಾರ್ಡ್, ಬಿಸಿಎಗೆ–19, ಬಿಸಿಬಿಗೆ 5 ಹಾಗೂ ಸಾಮಾನ್ಯ ವರ್ಗಕ್ಕೆ 40 ವಾರ್ಡ್.

**ಬೆಂಗಳೂರು ಉತ್ತರ ನಗರ ಪಾಲಿಕೆ:** ಒಟ್ಟು ವಾರ್ಡ್ ಗಳು 72 ಎಸ್‌ಸಿಗೆ 9, ಎಸ್ಟಿಗೆ 2 , ಬಿಸಿಎಗೆ 19, ಬಿಸಿಬಿಎ 5 ಹಾಗೂ ಸಾಮಾನ್ಯ ವರ್ಗಕ್ಕೆ 37 ವಾರ್ಡ್‌ಗಳನ್ನು ನೀಡಲಾಗಿದೆ.

**ಬೆಂಗಳೂರು ಪಶ್ಚಿಮ ನಗರ ಪಾಲಿಕೆ:** ಒಟ್ಟು ವಾರ್ಡ್‌ಗಳು 112 ಇದರಲ್ಲಿ ಎಸ್‌ಸಿಗೆ 9, ಎಸ್‌ಟಿಗೆ 2, ಬಿಸಿಎಗೆ 30, ಬಿಸಿಬಿ ಗೆ 7 ಹಾಗೂ ಸಾಮಾನ್ಯ ವರ್ಗಕ್ಕೆ 64 ವಾರ್ಡ್‌ಗಳು.

**ಬೆಂಗಳೂರು ಪೂರ್ವ ನಗರ ಪಾಲಿಕೆ:** ಒಟ್ಟು ವಾರ್ಡ್ ಗಳು 50 ಇದರಲ್ಲಿ ಎಸ್‌ಸಿಗೆ7 , ಎಸ್ಟಿಗೆ ಒಂದು, ಬಿಸಿಎಗೆ 14, ಬಿಸಿಬಿಗೆ ಮೂರು ಹಾಗೂ ಸಾಮಾನ್ಯ ವರ್ಗಕ್ಕೆ 25 ವಾರ್ಡ್‌ಗಳನ್ನು ನಿಗದಿಗೊಳಿಸ ಲಾಗಿದೆ.

**ಬೆಂಗಳೂರು ಕೇಂದ್ರ ನಗರ ಪಾಲಿಕೆ:** ಒಟ್ಟು ವಾರ್ಡ್‌ಗಳು 63 ಇದರಲ್ಲಿ ಎಸ್‌ಸಿಗೆ–11, ಎಸ್ಟಿಗೆ ಒಂದು, ಬಿಸಿಎಗೆ 15, ಬಿಸಿಬಿ ನಾಲ್ಕು ಹಾಗೂ ಸಾಮಾನ್ಯ ವರ್ಗಕ್ಕೆ 32 ಸ್ಥಾನಗಳನ್ನು ಕಲ್ಪಿಸಿಕೊಡಲಾಗಿದೆ.

## ತಿಂಗಳಾಂತ್ಯಕ್ಕೆ ಪಂಚ ಪಾಲಿಕೆಗಳ ಬಜೆಟ್ ಮಂಡನೆಗೆ ಸಿದ್ಧತೆ

**ಈ ತಿಂಗಳಾಂತ್ಯಕ್ಕೆ ಜಿಬಿಎಯ ಪಂಚ ಪಾಲಿಕೆಗಳ ಬಜೆಟ್ ಮಂಡಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಸೋಮವಾರದಿಂದ ಬಜೆಟ್ ಸಿದ್ಧತಾ ಸಭೆಗಳಿಗೆ ಚಾಲನೆ ಸಿಗಲಿದೆ. ಬಿಬಿಎಂಪಿಯಿಂದ ಐದು ಕಾರ್ಪೋರೇಷನ್‌ಗಳಾಗಿ ಪುನಾರಚನೆಯಾದ ಬಳಿಕ ಇದೇ ಮೊದಲ ಬಾರಿಗೆ ಪಂಚ ನಗರ ಪಾಲಿಕೆಗಳು ತಮ್ಮ ಚೊಚ್ಚಲ ಆಯವ್ಯಯವನ್ನು ಮಂಡಿಸುವ ಉತ್ಸಾಹದಲ್ಲಿವೆ. ಇದಕ್ಕಾಗಿ ಈಗಾಗಲೇ ಅಧಿಕಾರಿಗಳ ಹಂತದಲ್ಲಿ ಸಿದ್ಧತೆ ಆರಂಭವಾಗಿದೆ. ಸಾರ್ವಜನಿಕರಿಂದಲೂ ಸಲಹೆ/ಸೂಚನೆ ಆಹ್ವಾನಿಸಿದ್ದು, ಅವುಗಳಲ್ಲಿ ಅನುಷ್ಠಾನ ಯೋಗ್ಯವಾದವುಗಳನ್ನು ಅಳವಡಿಸಿಕೊಳ್ಳುವ ಭರವಸೆ ನೀಡಲಾಗಿದೆ.**

### 5 ಪಾಲಿಕೆಗಳಲ್ಲಿ 33.89 ಕೋಟಿ ರೂ. ಆಸ್ತಿ ತೆರಿಗೆ ಬಾಕಿ

# ಜಿಬಿಎಯಿಂದ ಕಾನೂನು ಕ್ರಮ: ವಿಶೇಷ ಆಯುಕ್ತ ಮೌನಿಶ್ ಮೌದ್ಗಿಲ್ ಎಚ್ಚರಿಕೆ

**ಬೆಂಗಳೂರು, ಮಾ.8:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 5 ನಗರ ಪಾಲಿಕೆಗಳಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 510 ಸುಸ್ತಿದಾರರಿಂದ 14,26,65,515 ರೂ. ಹಾಗೂ 500 ಆಸ್ತಿ ತೆರಿಗೆ ಬಾಕಿ ಪರಿಷ್ಕರಣೆ ಪ್ರಕರಣಗಳಿಂದ 19,62,81,400 ರೂ. ಸೇರಿ ಒಟ್ಟು 3,38,94,6915 ರೂ. (33.89 ಕೋಟಿ ರೂ.) ಬಾಕಿ ಉಳಿದಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಂದಾಯ ವಿಭಾಗದ ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಬಾಕಿ ಹೆಚ್ಚು ಉಳಿಸಿಕೊಂಡಿರುವ ಸುಸ್ತಿದಾರರು ಹಾಗೂ ಬೇಬಾಕಿ ಪರಿಷ್ಕರಣೆ ಪ್ರಕರಣಗಳ ಮೇಲೆ ನಗರ ಪಾಲಿಕೆಗಳು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದ್ದು, ಪಾಲಿಕೆಗಳಿಗೆ ಬರಬೇಕಿರುವ ಆಸ್ತಿ ತೆರಿಗೆಯನ್ನು ತೆರಿಗೆದಾರರಿಂದ ಸಂಗ್ರಹಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಹೆಚ್ಚು ಬಾಕಿ ಹೊಂದಿರುವ ಸುಸ್ತಿದಾರರು ಹಾಗೂ ಪರಿಷ್ಕರಣೆ ಪ್ರಕರಣಗಳಿಂದ ಬಾಕಿ ತೆರಿಗೆಯನ್ನು ತ್ವರಿತಗತಿಯಲ್ಲಿ ಸಂಗ್ರಹಿಸಲು ಸಂಬಂಧಿತ ನಗರ ಪಾಲಿಕೆಗಳ ವಲಯಗಳ ಜಂಟಿ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಆಯಾ ನಗರ ಪಾಲಿಕೆಗಳಲ್ಲಿ 50 ಪ್ರಮುಖ ಸುಸ್ತಿದಾರರು, ಪರಿಷ್ಕರಣೆ ಪ್ರಕರಣಗಳ ಪಟ್ಟಿಯನ್ನು ಜಿಬಿಎ ಬಾಕಿ ಉಳಿಸಿಕೊಂಡಿರುವ ಆಸ್ತಿ ಮಾಲೀಕರು ಕೂಡಲೇ ಪಾಲಿಕೆಗಳಿಗೆ ಬಾಕಿ ತೆರಿಗೆಯನ್ನು ಪಾವತಿಸಿ, ಮುಂದಾಗುವ ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳುವಂತೆ ಅವರು ಅಂತಿಮ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಇದೇ ಸಂದರ್ಭ ದಲ್ಲಿ ಆಸ್ತಿಗಳ ಹರಾಜು ಪ್ರಕ್ರಿಯೆ ಸಹ ಚುರುಕು ಪಡೆದುಕೊಂಡಿದೆ. ಹರಾಜು ಪ್ರಕ್ರಿಯೆಲ್ಲಿ 6 ಸ್ವತ್ತುಗಳ ಪೈಕಿ 2 ಆಸ್ತಿಗಳು ಹರಾಜು ಮಾಡಲಾಗಿದೆ. ಬೆಂಗಳೂರು ಪೂರ್ವನಗರ ಪಾಲಿಕೆ ಕೃಷ್ಣರಾಜಪುರ ವಲಯ ವ್ಯಾಪ್ತಿಯಲ್ಲಿ 6 ಸ್ವತ್ತುಗಳ ಪೈಕಿ 2 ಆಸ್ತಿಗಳನ್ನು ಹರಾಜು ಮಾಡಲಾಗಿದೆ ಎಂದು ವಲಯದ ಜಂಟಿ ಆಯುಕ್ತರಾದ ಡಾ.ಸುಧಾ ಅವರು ತಿಳಿಸಿದ್ದಾರೆ.



ನಗರ ಪಾಲಿಕೆಗೆ ಒಂದಕ್ಕಿಂತಲೂ ಹೆಚ್ಚಿನ ವರ್ಷಗಳ ಆಸ್ತಿ ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ಸ್ವತ್ತುಗಳ ಹರಾಜಿನ ಮೂಲಕ ಬಾಕಿ ಆಸ್ತಿ ತೆರಿಗೆ ವಸೂಲಾತಿಗೆ ಕಠಿಣ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2025ರ ಅಡಿಯಲ್ಲಿ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ತರಹದ ಸ್ವತ್ತುಗಳ ಮಾಲೀಕರು ಅಥವಾ ಅಧಿಭೋಗದಾರರ ಪ್ರತಿವರ್ಷ ಆಸ್ತಿ ತೆರಿಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಒಂದಕ್ಕಿಂತಲೂ ಹೆಚ್ಚಿನ ಸಾಲಿನ ಆಸ್ತಿ ತೆರಿಗೆ ಪಾವತಿಸದೇ ಇರುವ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ವಸೂಲಿ ಮಾಡುವ ಕಾರ್ಯವಿಧಾನವನ್ನು ಆಸ್ತಿ ತೆರಿಗೆ ನಿರ್ಧರಣೆ, ವಸೂಲಾತಿ ಮತ್ತು ನಿರ್ವಹಣೆ ನಿಯಮಗಳು 2024ರ ಅಡಿಯಲ್ಲಿ ರೂಪಿಸಲಾಗಿರುತ್ತದೆ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಹಾಗೂ ನಿಯಮಗಳಲ್ಲಿ ತಿಳಿಸಿರುವಂತೆ ಆಸ್ತಿ ತೆರಿಗೆ ಸುಸ್ಥಿದಾರರಿಗೆ ಕಾರಣ ಕೇಳಿ ಪತ್ರ, ಆಸ್ತಿ ತೆರಿಗೆ ಬೇಡಿಕೆ ಪತ್ರ ಜಾರಿ ಮಾಡಲಾಗಿದ್ದು, ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುತ್ತಾರೆ. ಅಂತಹ ಪ್ರಕರಣಗಳ ಮಾಲೀಕರಿಗೆ ನಿಯತಕಾಲಿಕವಾಗಿ ಮೊಬೈಲ್ ಸಂದೇಶಗಳ ಮೂಲಕ ಸ್ವತ್ತಿನ ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸುವಂತೆ ಹಲವು ಬಾರಿ ತಿಳಿಸಲಾಗಿತ್ತು. ಮುಂದು ವರಿದು ಸಾಕಷ್ಟು ಅವಕಾಶಗಳನ್ನು ನೀಡಿದ ನಂತರವು ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸದ ಕೆ.ಆರ್ ಪುರ ವಲಯ ವ್ಯಾಪ್ತಿಯಲ್ಲಿನ 6 ಸ್ವತ್ತುಗಳನ್ನು ಕಾಯ್ದೆ ಹಾಗೂ ನಿಯಮಗಳನ್ವಯ ಹರಾಜು ಪ್ರಕ್ರಿಯೆಗೆ ಒಳಪಡಿಸಲು ತೀರ್ಮಾನಿಸಲಾದೆ.

# ಜಿ.ಸಿ.ಯು ವಿದ್ಯಾರ್ಥಿ ಜ್ಯೂರಿಯಿಂದ 35 ಮಹಿಳಾ ಸಾಧಕರಿಗೆ ಗೌರವ

**ಬೆಂಗಳೂರು, ಮಾ.8–** ಗಾರ್ಡನ್‌ಸಿಟಿ ವಿಶ್ವವಿದ್ಯಾಲಯವು ತನ್ನ 17ನೇ ಆವೃತ್ತಿಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ 35 ಮಹಿಳಾ ಸಾಧಕರನ್ನು ಗೌರವಿಸಿದೆ.

ಸಮಾಜದ ವಿವಿಧ ವೃತ್ತಿಗಳು ಮತ್ತು ಜೀವನ ಕ್ಷೇತ್ರಗಳನ್ನು ಪ್ರತಿನಿಧಿಸುವ 158 ಮಹಿಳಾ ಸಾಧಕರಲ್ಲಿ 35 ಮಹಿಳಾ ಸಾಧಕರನ್ನು ವಿಶ್ವವಿದ್ಯಾಲಯ ವಿದ್ಯಾರ್ಥಿ ಜ್ಯೂರಿಯು ಆಯ್ಕೆ ಮಾಡಿರುವುದು ಕಾರ್ಯಕ್ರಮದ ವಿಶೇಷ. ನಾಯಕತ್ವ, ನವೀನತೆ, ಸಾಮಾಜಿಕ ಪ್ರಭಾವ ಮತ್ತು ವೃತ್ತಿಪರಸಾಧನೆಗಳಲ್ಲಿ ಅವರ ವಿಶೇಷ ಕೊಡುಗೆಯನ್ನು ಗುರುತಿಸಿ, ವಿಶ್ವವಿದ್ಯಾಲಯದ OMR ಕ್ಯಾಂಪಸ್‌ನಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಶ್ವವಿದ್ಯಾಲಯದ ಒಂಬತ್ತು ಶಾಲೆಗಳ ವಿದ್ಯಾರ್ಥಿಗಳು ಜ್ಯೂರಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು, ಅಧ್ಯಾಪಕರ ಸಲಹಾ ಸಮಿತಿ ಅವರಿಗೆ ಮಾರ್ಗದರ್ಶನ ನೀಡಿತು. ಈ ಗೌರವ ಸಮಾರಂಭವು ವಿಶ್ವವಿದ್ಯಾಲಯದ 'ಕೋರಲ್ಸಂಭ್ರಮಾಚರಣೆ' ಭಾಗವಾಗಿದ್ದು, ಸಂಸ್ಥೆಯ 35 ವರ್ಷದ ಶೈಕ್ಷಣಿಕ ಸಾಧನೆ ಮತ್ತು ಸಮಾಜ ಮುಖಿ ಕೊಡುಗೆಯನ್ನು ಸ್ಮರಿಸುತ್ತದೆ.



ಈ ಸಂದರ್ಭದಲ್ಲಿ ಮಾತನಾಡಿದ ಕುಲಾಧಿಪತಿ ಡಾ. ಜೋಸೆಫ್ ವಿ.ಜಿ, ಎಲ್ಲ ಸಾಧಕರಿಗೆ ಅಭಿನಂದಿಸಿ,ಈ ಗೌರವವನ್ನು ಅಂತಿಮ ಸಾಧನೆ ಎಂದು ಪರಿಗಣಿಸದೆ, ಉತ್ತಮ ಭವಿಷ್ಯದ ಆರಂಭವಾಗಿ ಪರಿಗಣಿಸುವಂತೆ ಕರೆ ನೀಡಿದರು. ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ನೀಡಿರುವ ಈ ಪ್ರಶಸ್ತಿಯು ಯಾವುದೇ ಸರ್ಕಾರ ನೀಡುವ ಪ್ರತಿಷ್ಠಿತ ಪ್ರಶಸ್ತಿಗಳ ಅಷ್ಟೇ ಮಹತ್ವ ಹೊಂದಿದ್ದು, ಇದನ್ನು ಅತ್ಯುನ್ನತ ಗೌರವವೆಂದು ಪರಿಗಣಿಸಲು ಸಲಹೆ ನೀಡಿದರು.

# ಹುಬ್ಬಳ್ಳಿಯಲ್ಲಿ ಮತ್ತೆ ಲವ್ ಜಿಹಾದ್: ಬಲೆಯಿಂದ ಪಾರಾಗಿ ಅಸಲಿ ಕಹಾನಿ ಬಿಚ್ಚಿಟ್ಟ ಸಂತ್ರಸ್ತೆಯರು

**ಹುಬ್ಬಳ್ಳಿ, ಮಾ.8:** ಲವ್ ಜಿಹಾದ್ ಕಥೆಯುಳ್ಳ ಕೇರಳ ಲವ್ ಜಿಹಾದ್ ಸಿನಿಮಾವೊಂದು ಇತ್ತೀಚೆಗೆ ಹೆಚ್ಚು ಸದ್ದುಮಾಡುತ್ತಿದೆ. ರಾಜ್ಯದಲ್ಲಿ ಕೂಡ ಇದೇ ರೀತಿ ಲವ್ ಜಿಹಾದ್ ಹತ್ತಾರು ಪ್ರಕರಣಗಳು ನಡೆಯುತ್ತಿರುವ ಆರೋಪಗಳು ಮೇಲಿಂದ ಮೇಲೆ ಕೇಳಿ ಬರುತ್ತಿವೆ. ಹುಬ್ಬಳ್ಳಿಯಲ್ಲಿ ಅನೇಕ ಸಂತ್ರಸ್ತೆಯರು ತಾವು ಹೇಗೆ ಲವ್ ಜಿಹಾದ್ ಬಲೆಯಲ್ಲಿ ಬಿದ್ದೆವು, ಅದರಿಂದ ಪಾರಾಗಿ ಬಂದಿದ್ದು ಹೇಗೆ ಎಂದು ತಮ್ಮ ನೋವು ತೋಡಿಕೊಂಡರು. ಇನ್ನೊಂದೆಡೆ ಲವ್ ಜಿಹಾದ್ ವಿರುದ್ಧ ಕಠಿಣ ಕ್ರಮಕ್ಕೆ ಹಿಂದೂಪರ ಸಂಘಟನೆಗಳು ಆಗ್ರಹಿಸಿವೆ.

ಹುಬ್ಬಳ್ಳಿಯಲ್ಲಿ ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ನೇತೃತ್ವದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗಿಯಾಗಿದ್ದ ಅನೇಕ ಸಂತ್ರಸ್ತೆಯರು, ಲವ್ ಜಿಹಾದ್ ಬಗ್ಗೆ ಹೇಳಿಕೊಂಡರು. ತಮಗೆ ಪರಿಚಯವಾದ ಅನ್ಯ ಧರ್ಮೀಯರು, ನನ್ನನ್ನು ಮದುವೆಯಾದರೆ ನೀನು ಮತಾಂತರವಾಗೋ ಅವಶ್ಯಕತೆಯಿಲ್ಲ. ಬುರ್ಖಾ ಹಾಕೋದು ಕೂಡ ಇಲ್ಲ. ನೀನು ರಾಣಿಯಂತೆ ಚೆನ್ನಾಗಿರ್ತಿಯಾ ಅಂತ ಹೇಳಿ ಮನಸು ಕೆಡಿಸುತ್ತಿದ್ದರು. ನಮ್ಮ ಹೆತ್ತವರನ್ನು, ನಮ್ಮ ಮನೆಯವರನ್ನು ನಾವೇ ದ್ವೇಷಿಸುವಂತೆ ಬಣ್ಣದ ಮಾತುಗಳನ್ನು ಹೇಳ್ತಿದ್ದರು. ಆದರೆ ನಂತರ ಗೊತ್ತಾಗಿದ್ದು, ಹೇಳಿದ್ದೆಲ್ಲಾ ಬಣ್ಣದ ಮಾತುಗಳು ಅಂತ. ಹೀಗಾಗಿ ಲವ್ ಜಿಹಾದ್ ಬಲೆಯಿಂದ ಪಾರಾಗಿ ಬಂದರು ಅಂತ ತಮ್ಮ ನೋವನ್ನು ಹೇಳಿಕೊಂಡರು.



ಇನ್ನು ಹುಬ್ಬಳ್ಳಿಯಲ್ಲಿ ಈ ಹಿಂದೆ ಕಾಲೇಜು ಕ್ಯಾಂಪಸ್‌ನಲ್ಲಿ ಹತ್ಯೆಯಾದ ನೇಹಾ ಹಿರೇಮಠ ತಂದೆ ನಿರಂಜನ ಹಿರೇಮಠ ಕೂಡ ಈ ಪತ್ರಿಕಾಗೋಷ್ಠಿಯಲ್ಲಿ ಭಾಗಿಯಾಗಿದ್ದರು. ಲವ್ ಜಿಹಾದ್ ವ್ಯವಸ್ಥಿತವಾಗಿ ನಡೆಯುತ್ತಿದೆ. ತಮ್ಮ ಮಗಳನ್ನು ಕೊಂದವರಿಗೆ ಇಂದು ಜೈಲಿನಲ್ಲಿ ವಿವಿಐಪಿ ಆತಿಥ್ಯ ಸಿಗ್ತಿದೆ. ಅವರಿಗೆ ಬಿರಿಯಾನಿ ಕೊಡ್ತಿದ್ದಾರೆ. ನೇಹಾ ಹಿರೇಮಠ ಹತ್ಯೆಯಾದಾಗ ಮನೆಗೆ ಅನೇಕ ರಾಜಕಾರಣಿಗಳು ಬಂದು ನೂರು ದಿನದಲ್ಲಿ ನ್ಯಾಯ ಕೊಡಿಸ್ತೇವೆ ಅಂತ ಹೇಳಿದ್ರು. ಆದರೆ ಎರಡು ವರ್ಷವಾದರೂ ಕೂಡ ನ್ಯಾಯ ಸಿಕ್ಕಿಲ್ಲ. ಆರೋಪಿ ಬೆನ್ನಿಗೆ ಸರ್ಕಾರದ ಅನೇಕ ಪ್ರಭಾವಿಗಳು ನಿಂತಿದ್ದಾರೆ. ಹೀಗಾಗಿ ತಮ್ಮ ಮಗಳ ಹತ್ಯೆ ಪ್ರಕರಣವನ್ನು ಎನ್‌ಐಎ ಇಲ್ಲವೇ ಸಿಬಿಐಗೆ ನೀಡಬೇಕು ಎಂದು ಹಿರೇಮಠ ಆಗ್ರಹಿಸಿದರು.

ಇನ್ನು ದೇಶದಲ್ಲಿ ಮತ್ತು ರಾಜ್ಯದಲ್ಲಿ ಅನೇಕ ಮಕ್ಕಳು ಮತ್ತು ಯುವತಿಯರು ಕಾಣೆಯಾಗ್ತಿದ್ದಾರೆ. ಕಾಣೆಯಾಗ್ತಿರೋರಲ್ಲಿ ಕೆಲವರು ಪತ್ತೆಯಾಗಿಲ್ಲ. ಹಾಗಾದರೆ ಅವರು ಎಲ್ಲಿ ಹೋಗ್ತಿದ್ದಾರೆ ಅಂತ ಪ್ರಶ್ನೆ ಮಾಡಿದ ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್, ರಾಜ್ಯ ಮತ್ತು ದೇಶದಲ್ಲಿ ಲವ್ ಜಿಹಾದ್ ಪ್ರಕರಣಗಳು ಹೆಚ್ಚಾಗುತ್ತಿವೆ. ಕಾಣೆಯಾಗ್ತಿರೋರನ್ನು ಲವ್ ಜಿಹಾದ್‌ಗೆ ಬಳಸಿಕೊಳ್ಳಲಾಗುತ್ತಿದೆ. ಹೀಗಾಗಿ ದೇಶದಲ್ಲಿ ಕಠಿಣ ಕಾನೂನು ಜಾರಿಗೆ ತರಬೇಕು ಅಂತ ಆಗ್ರಹಿಸಿದರು. ಅನೇಕ ಮುಸ್ಲಿಂರು ತಮ್ಮ ಹೆಸರನ್ನು ಹೇಳದೆ, ಹಿಂದೂಗಳ ಹೆಸರನ್ನು ಹೇಳಿಕೊಂಡು ಲವ್ ಜಿಹಾದ್ ಮಾಡ್ತಿದ್ದಾರೆ. ಲವ್ ಜಿಹಾದ್ ಹಿಂದೆ ಕೇವಲ ಪ್ರೀತಿ, ಪ್ರೇಮ ಮಾತ್ರವಿಲ್ಲ, ಬದಲಾಗಿ ಭಾರತವನ್ನು ಇಸ್ಲಾಂ ರಾಷ್ಟ್ರ ಮಾಡುವ ಹುನ್ನಾರವಿದೆ ಎಂದು ಆರೋಪಿಸಿದರು.

ಲವ್ ಜಿಹಾದ್ ಪ್ರಕರಣಗಳು ಆಗಾಗ ರಾಜ್ಯದಲ್ಲಿ ಹೆಚ್ಚು ಸದ್ದು ಮಾಡ್ತಿವೆ. ಆದರೆ ಪ್ರೀತಿಸಿ ಮದುವೆಯಾಗಿರೋ ಅಂತರ ಧರ್ಮೀಯ ಅನೇಕ ಜೋಡಿಗಳು ಅನ್ಯೋನ್ಯವಾಗಿವೆ. ಅನೇಕರ ಸಂಸಾರ ಹಾಳಾಗಿವೆ. ಇದರ ಹಿಂದೆ ನಿಜವಾಗಿಯೂ ಲವ್ ಜಿಹಾದ್ ಇದೆಯಾ, ಅಥವಾ ಅವು ಪ್ರೀತಿನಾ ಅನ್ನೋದು ಮಾತ್ರ ತನಿಖೆಯಿಂದ ಗೊತ್ತಾಗಬೇಕಿದೆ.



ಬೇಸಿಗೆಯ ಉಷ್ಣತೆ ಹೆಚ್ಚುತ್ತಿದ್ದಂತೆ, ಮೈಸೂರಿನಲ್ಲಿ ಭಾನುವಾರ ಚಾಮರಾಜೇಂದ್ರ ಮೃಗಾಲಯ (ಮೈಸೂರು ಮೃಗಾಲಯ)ದ ಅಧಿಕಾರಿಗಳು ಪ್ರಾಣಿಗಳನ್ನು ಶಾಖದ ಒತ್ತಡದಿಂದ ರಕ್ಷಿಸಲು ವಿಶೇಷ "ಬೇಸಿಗೆ ನಿರ್ವಹಣಾ ಯೋಜನೆ"ಯನ್ನು ಜಾರಿಗೆ ತಂದಿದ್ದಾರೆ.

# ಕಲಬುರಗಿಗೆ ಸಿರಿಧಾನ್ಯ ಕೇಂದ್ರ ಮಂಜೂರಿಗೆ ಪ್ರಯತ್ನ: ಪ್ರಿಯಾಂಕ್ ಖರ್ಗೆ

**ಕಲಬುರಗಿ, ಮಾ. 8:** ರಾಜ್ಯದಲ್ಲಿ ಸಿರಿಧಾನ್ಯ ಕೇಂದ್ರ ಸ್ಥಾಪಿಸಲಾಗುವುದು ದೆಂದು ಸಿಎಂ ತಮ್ಮ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದು, 3–4 ಜಿಲ್ಲೆಗಳ ಬೇಡಿಕೆ ಇರುವ ಕಾರಣ ಎಲ್ಲಿ ಅಂತ ಸ್ಪಷ್ಟಪಡಿಸಿಲ್ಲ. ಹೀಗಾಗಿ ಕಲಬುರಗಿ ಜಿಲ್ಲೆಯಿಂದ ಕೃಷಿ ಇಲಾಖೆಯವರು ಬೇಗ ಡಿ.ಪಿ.ಆರ್ ಮಾಡಿ ನೀಲನಕ್ಷೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಜಿಲ್ಲೆಗೆ ಮಂಜೂರು ಮಾಡಿಸಲು ಸರ್ವ ಪ್ರಯತ್ನ ಮಾಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ನಗರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ಇವುಗಳ ಸಂ–ಮುಕ್ತಾಶ್ರಯದಲ್ಲಿ ಇಲ್ಲಿನ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಆಯೋಜಿಸಿದ "ಜಿಲ್ಲಾ ಮಟ್ಟದ ಸಿರಿ ಧಾನ್ಯ ಮೇಳ–2026 ಹಾಗೂ ಜಿಲ್ಲೆಯ 2.90 ಲಕ್ಷ ರೈತರಿಗೆ ಬೆಳೆ ವಿಮೆ ಯೋಜನೆಯಡಿ ಮಧ್ಯಂತರ ಪರಿಹಾರ ಹಣ ಡಿ.ಬಿ.ಟಿ ಮೂಲಕ ಬಿಡುಗಡೆಗೆ ಚಾಲನೆ ನೀಡಿ, ಸಿರಿಧಾನ್ಯ ಶಕ್ತಿ ಪರಿಚಯಿಸುವ ನಿಟ್ಟಿನಲ್ಲಿ ಇಲ್ಲಿನ ಕೃಷಿ ಉತ್ಪನ್ನಗಳ ಪ್ರಚಾರ, ಸಂಶೋಧನೆ, ಸಂಸ್ಕರಣೆ ಮತ್ತು ವಿತರಣೆಗೆ ಮೀಸಲಾದ ಕೇಂದ್ರ ಸ್ಥಾಪಿಸುವುದು. ಕಲಬುರಗಿ ರೊಟ್ಟಿಗೆ ಬ್ರ್ಯಾಂಡ್ ನೀಡುವಂತೆ ಮಾರುಕಟ್ಟೆಗೆ ಡಿಜಿಟಲ್ ವೇದಿಕೆ ಕಲ್ಪಿಸಿ ರೈತರು ನೇರವಾಗಿ ಗ್ರಾಹಕರೊಂದಿಗೆ ಸಂಪರ್ಕಿಸಿ ಸುಸ್ಥಿರ ಸಿರಿಧಾನ್ಯಗಳ ಬಳಕೆಯನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಲಾಗಿದೆ ಎಂದರು.

ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ 4.45 ಕೋಟಿ ರೂ. ವೆಚ್ಚದಲ್ಲಿ 9 ಕೃಷಿ ಯಂತ್ರೋಪಕರಣಗಳನ್ನು ಕಡಿಮೆ ಬೆಲೆಯಲ್ಲಿ ಬಾಡಿಗೆ ಪಡೆಯುವ ಕಸ್ಟೋಮರ್ ಹೈರ್ ಸರ್ವಿಸ್ ಸೆಂಟರ್ ತೆರೆಯಲಾಗಿದೆ.

197 ಲಕ್ಷ ರೂ. ದಲ್ಲಿ 4 ಡ್ರೋನ್ ಸಿಂಪಡನೆ ಕೇಂದ್ರ ತೆರೆಯಲಾಗಿದೆ. 10 ಕೋಟಿ ರೂ. ವೆಚ್ಚದಲ್ಲಿ ಚಿತ್ತಾಪುರದಲ್ಲಿ ಶೀಥಲೀಕರಣ ಘಟಕ ಅನುಷ್ಠಾನ ಮಾಡಲಾಗುತ್ತಿದೆ. ರೈತರ ಬೇಡಿಕೆ ಹೆಚ್ಚಿರುವ ಕಾರಣ ಇದೇ ವರ್ಷ ಕಲಬುರಗಿಯಲ್ಲಿಯೂ ಇದೆ ಮಾದರಿಯಲ್ಲಿ ತರಕಾರಿ, ಟೊಮಾಟೋಗಳ ಶೇಖರಣೆಗೆ ಕಲಬುರಗಿಯಲ್ಲಿ ಕೋಲ್ಡ್ ಸ್ಟೋರೇಜ್ ಯೂನಿಟ್ ಸ್ಥಾಪಿಸಲಾಗುವುದು. ಇದಲ್ಲದೆ 7.58 ಕೋಟಿ ರೂ. ವೆಚ್ಚದಲ್ಲಿ 7 ಜಲಾನಯನ ಸಂಸ್ಕರಣ ಘಟಕ ಸ್ಥಾಪಿಸಲಾಗುತ್ತಿದೆ.

ಒಟ್ಟಾರೆಯಾಗಿ ಜಿಲ್ಲೆಯನ್ನು ಕೃಷಿ ಹಬ್ ಆಗಿ ಪರಿವರ್ತಿಸಲು ಪೈಲಟ್ ರೂಪದಲ್ಲಿ ಇವೆಲ್ಲ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

**3 ವರ್ಷದಲ್ಲಿ 2,590 ಕೋಟಿ ರೂ. ರೈತರಿಗೆ ಪರಿಹಾರ:** ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ 3.01 ಲಕ್ಷ ರೈತರು ಬೆಳೆವಿಮೆ ನೋಂದಣಿ ಮಾಡಿಕೊಂಡಿದ್ದಾರೆ. ಕಳೆದ ವರ್ಷ ಅಪಾರ ಮಳೆಯಿಂದ 3.24 ಲಕ್ಷ ಹೆಕ್ಟೇರ್ ಪ್ರದೇಶ ಹಾನಿಯಾಗಿದ್ದು ತಮಗೆ ತಿಳಿದ ವಿಷಯ.

ಬೆಳೆ ವಿಮೆ ಮಾಡಿಸಿಕೊಂಡವರ ಪೈಕಿ 2.90 ಲಕ್ಷ ರೈತರಿಗೆ ಇಂದಿಲ್ಲಿ 243.52 ಕೋಟಿ ರೂ. ಬೆಳೆ ವಿಮೆ ಮಧ್ಯಂತರ ಪರಿಹಾರ ನೀಡಲು ಚಾಲನೆ ನೀಡಿದೆ.

ಕಳೆದ ಮೂರು ವರ್ಷದಲ್ಲಿ ನಮ್ಮ ಸರ್ಕಾರ ಬಂದ ಮೇಲೆ ತೊಗರಿ ನೆಡೆ ರೋಗ ಪರಿಹಾರ, ಬೆಳೆ ಪರಿಹಾರ, ಕನ್ಪುಟ್ ಸಬ್ಸಿಡಿ, ಬರಗಾಲ ಪರಿಹಾರ, ಕಬ್ಬಿಗೆ ಪರಿಹಾರ ಧನ ಹೀಗೆ 15.47 ಲಕ್ಷ ರೈತಯರಿಗೆ 2,590 ಕೋಟಿ ರೂ. ಪರಿಹಾರ ನೀಡಿದ್ದು, ಹಿಂದೆ ಯಾವ ಸರ್ಕಾರವು ಇಷ್ಟೊಂದು ಪರಿಹಾರ ಅನ್ನದಾತರಿಗೆ ನೀಡಿಲ್ಲ. ರೈತರ ಏಳಿಗೆಗೆ ನಮ್ಮ ಸರ್ಕಾರ ಬದ್ಧವಾಗಿದೆ. ಅದಕ್ಕಾಗಿ ಇವೆಲ್ಲ ಜಾಯಿರಿಗೊಳಿಸಿದೆ. ಇದು ರೈತಪರ ಸರ್ಕಾರ. ನುಡಿದಂತೆ ನಡೆಯುವ ಸರ್ಕಾರ ಎಂದರು.

# ಆಳಂದ ಅಂತರ್ಜಲ ಜಲಸಮೃದ್ಧಿಗೆ ಸರ್ಕಾರ ಬದ್ಧ: ಸಚಿವ ಬೋಸರಾಜು

**ಕಲಬುರಗಿ, ಮಾ. 8:** ರಾಜ್ಯದ ಕೃಷಿ ವಲಯದ ಏಳ್ಗೆಗಗಿ ಅಂತರ್ಜಲ ಮರುಪೂರಣ ಮತ್ತು ನೀರಾವರಿ ಯೋಜನೆಗಳಿಗೆ ಸರ್ಕಾರ ಆದ್ಯತೆ ನೀಡುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ತಿಳಿಸಿದರು.



ಜಿಲ್ಲೆಯ ಆಳಂದ ತಾಲೂಕಿನ ಖಂಡಾಳದಿಂದ ಮಟಕಿ, ನಿರಗುಡಿದಿಂದ ಪಡಸಾವಳಿ, ಬಸವಂತವಾಡಿದಿಂದ ನಿಂಬರ್ಗಾ, ಹಳ್ಳಿಸಲಗರದಿಂದ ಕೊಡಲಹಂಗರಗಾ, ಮತ್ತು ಬಂಗರಗಾ–ಚಿತಲಿ–ಸಾಲೆಗಾಂವದಿಂದ ಹೆಬಳಿ ನಾಲಾಕ್ಕೆ ಅಡ್ಡಲಾಗಿ ಅಣೆಕಟ್ಟು/ಬಿಸಿಬಿಗಳ ನಿರ್ಮಾಣ ಮತ್ತು ನಾಲಾ ಅಗೆತ ಕಾಮಗಾರಿಗಳ (ಅಂದಾಜು ಮೊತ್ತ; 47.50 ಕೋಟಿ ರೂ) ಕಾಮಗಾಯಿರಿಗಳಿಗೆ ಚಾಲನೆ ನೀಡಿ ಆಳಂದ ಕ್ಷೇತ್ರದ ವಿವಿಧ ನದಿ ಹಾಗೂ ನಾಲೆಗಳಿಗೆ ಅಣೆಕಟ್ಟು ಮತ್ತು ಬ್ರಿಜ್ ಕಮ್ ಬ್ಯಾರೇಜ್‌ಗಳನ್ನು ನಿರ್ಮಿಸಲು ಸುಮಾರು 50 ಕೋಟಿ ರೂಪಾಯಿ ಅನುದಾನ ವಿನಿಯೋಗಿಸಲಾಗುತ್ತಿದೆ. ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಆಳಂದ ಶಾಸಕ ಬಿ.ಆರ್. ಪಾಟೀಲ್ ಅವರ ನಿರಂತರ ಪರಿಶ್ರಮ ಹಾಗೂ ಸಾಮಾಜಿಕ ನ್ಯಾಯದ ಪರವಾದ ನಿಲುವಿನಿಂದಾಗಿ ಈ ಭಾಗಕ್ಕೆ ಹೆಚ್ಚಿನ ಅನುದಾನ ತರಲು ಸಾಧ್ಯವಾಗಿದೆ ಎಂದು ಸಚಿವರು ಶ್ಲಾಘಿಸಿದರು.

ಕೃಷ್ಣಾ, ಕಾವೇರಿ ಸೇರಿದಂತೆ ಪ್ರಮುಖ ನದಿಗಳ ಮೂಲಗಳಿಂದ ಕೆರೆಗಳನ್ನು ತುಂಬಿಸಿ, ಕೃಷಿ ನಂಬಿದ ಶೇ. 75 ರಷ್ಟು ಜನರಿಗೆ ಶಾಶ್ವತ ನೀರಾವರಿ ಒದಗಿಸುವುದು ಸರ್ಕಾರದ ಅಂತಿಮ ಗುರಿಯಾಗಿದೆ ಎಂದು ಸಚಿವರು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಆಳಂದ ಶಾಸಕ ಬಿ.ಆರ್. ಪಾಟೀಲ್ ಅವರು ಮಾತನಾಡಿ, ತಾಲೂಕಿನ ಒಟ್ಟು 500 ಕಿ.ಮೀ ಉದ್ದದ ಹಳ್ಳಗಳ ಅಭಿವೃದ್ಧಿಗೆ ಕನಿಷ್ಠ 100 ಕೋಟಿ ರೂಪಾಯಿಗಳ ಅವಶ್ಯಕತೆಯಿದ್ದು, ಇದನ್ನು ಹಂತ ಹಂತವಾಗಿ ಪೂರೈಸುವಂತೆ ಸಚಿವರಿಗೆ ಮನವಿ ಮಾಡಿದರು.

ಈ ಯೋಜನೆಯು ಯಶಸ್ವಿಯಾದಲ್ಲಿ ಆಳಂದ ತಾಲೂಕಿನ ಆರ್ಥಿಕ ಸ್ಥಿತಿ ಸುಧಾಯಿರಿಸುವುದಲ್ಲದೆ, ಉದ್ಯೋಗಕ್ಕಾಗಿ ಹೊರಹೋದ ಜನರು ಪುನಃ ತಮ್ಮ ಗ್ರಾಮಗಳಿಗೆ ಮರಳಿ ಸ್ವಾಭಿಮಾನದ ಬದುಕು ನಡೆಸಲು ಸಾಧ್ಯವಾಗುತ್ತದೆ. ಈ ವಿಶಿಷ್ಟ ಜಲ ಸಂರಕ್ಷಣಾ ಮಾದಯಿರಿಯನ್ನು 'ಆಳಂದ ಮಾದರಿ ನೀರು ಉಳಿಸುವ ಯೋಜನೆ' ಎಂದು ಹೆಸರಿಸಿ, ರಾಜ್ಯದಾದ್ಯಂತ ವಿಸ್ತರಿಸಬೇಕು ಎಂಬ ಬೇಡಿಕೆ ಈಗ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ ಎಂದರು.

ಈ ಹಿಂದೆ ಸಿದ್ದರಾಮಯ್ಯನವರ ಸರ್ಕಾರವು 21 ಕೋಟಿ 89 ಲಕ್ಷ ರೂಪಾಯಿ ವೆಚ್ಚದಲ್ಲಿ ಸುಮಾರು 56 ಕಿ.ಮೀ ವ್ಯಾಪ್ತಿಯಲ್ಲಿ ನಿರ್ಮಿಸಿದ 50 ಚೆಕ್ ಡ್ಯಾಂಗಳ ಯಶಸ್ಸಿನಿಂದ ಈ ಭಾಗದ ಅಂತರ್ಜಲ ಮಟ್ಟ ಸುಧಾರಿಸಿದೆ. ಇದರ ಫಲವಾಗಿ ಮಾದನ ಹಿಪ್ಪರಗಾ ಭಾಗದ ರೈತರು ಬೆಳೆದ ಕಬ್ಬು, ಹಣ್ಣು ಮತ್ತು ತರಕಾರಿಗಳು ಮುಂಬೈ, ಹೈದರಾಬಾದ್‌ನಂತಹ ಮಹಾನಗರಗಳಿಗೆ ರಫ್ತಾಗುತ್ತಿವೆ ಎಂದು ತಿಳಿಸಿದರು.

ಪ್ರಸಕ್ತ ಬಜೆಟ್‌ನಲ್ಲಿ ಜೆಡ್ಡಾ ಕೆರೆ ಅಭಿವೃದ್ಧಿಗೆ 25 ಕೋಟಿ ರೂಪಾಯಿ ಘೋಷಣೆಯಾಗಿದ್ದು, ತಾಲೂಕಿನ ಒಟ್ಟು 500 ಕಿ.ಮೀ ಉದ್ದದ ಹಳ್ಳಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ರೈತರಿಗೆ ಸಮರ್ಪಕ ನೀರಾವರಿ ಸೌಲಭ್ಯ ಒದಗಿಸಿದರೆ ಅವರು ಸ್ವಾಭಿಮಾನದಿಂದ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯ ಎಂದು ಕಾರ್ಯಕ್ರಮದಲ್ಲಿ ಒತ್ತಿ ಹೇಳಲಾಯಿತು.

ಓರ್ವ ಸಾವು, ವಾರ್ಡನ್ ಸೇರಿ ಇತರ 7 ವಿದ್ಯಾರ್ಥಿಗಳಿಗೆ ಗಾಯ

# ಕ್ಷುಲ್ಲಕ ಕಾರಣಕ್ಕೆ ವಸತಿಶಾಲೆ ವಿದ್ಯಾರ್ಥಿಗಳ ನಡುವೆ ಗಲಾಟೆ

## ದಾಳಿ ನಡೆಸಿದ ವಿದ್ಯಾರ್ಥಿ ಪರಾರಿ

**ಬಳ್ಳಾರಿ, ಮಾ.8:** ಬಳ್ಳಾರಿಯ ಗುರುಕುಲ ವಸತಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬ ಸಹಪಾಠಿಗಳ ಮೇಲೆ ಕಬ್ಬಿಣದ ಸರಳು, ಸ್ಕ್ರೂಡ್ರೈವರ್, ಚಾಕುವಿನಿಂದ ಮನ ಬಂದಂತೆ ದಾಳಿ ಮಾಡಿದ್ದು, ಘಟನೆಯಲ್ಲಿ ಒಬ್ಬ ವಿದ್ಯಾರ್ಥಿ ಮೃತಪಟ್ಟು, ವಾರ್ಡನ್ ಸೇರಿ 7 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಗಾಯಾಳುಗಳ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ದಾಳಿ ನಡೆಸಿದ ವಿದ್ಯಾರ್ಥಿ ಪರಾರಿಯಾಗಿದ್ದಾನೆ. ದಾಳಿ ನಡೆಸಿದ ಹಾಗೂ ಒಳಗಾದವರು ಎಲ್ಲರೂ 9ನೇ ತರಗತಿ ವಿದ್ಯಾರ್ಥಿಗಳಾಗಿದ್ದಾರೆ.

ಮೃತಪಟ್ಟ ಬಾಲಕನನ್ನು ಆಂಧ್ರಪ್ರದೇಶದ ಆದೋನಿಯ ಹೇಮಂತ್ ಎಂದು ಗುರುತಿಸಲಾಗಿದೆ. ಮೃತದೇಹವನ್ನು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ.

ಶನಿವಾರ ರಾತ್ರಿ ಊಟ ಮುಗಿದ ಬಳಿಕ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಮಲಗಿದ್ದರು. ಈ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕೆ ಆರೋಪಿ ವಿದ್ಯಾರ್ಥಿ ಹಾಗೂ ಇತರರ ನಡುವೆ ಜಗಳ ನಡೆದಿದ್ದು, ಈ ಸಂದರ್ಭದಲ್ಲಿ ಆರೋಪಿತ ವಿದ್ಯಾರ್ಥಿ ಮಂಚದ ರಾಡ್, ಸ್ಕ್ರೂಡ್ರೈವರ್ ಹಾಗೂ ರೇಡಿಯಂ ಕಟರ್ ಚಾಕುವಿನಿಂದ ಸಹಪಾಠಿಗಳ ಮೇಲೆ ದಾಳಿ ನಡೆಸಿದ್ದಾನೆ ಎನ್ನಲಾಗಿದೆ.

ಹೇಮಂತ್ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಕೊಂಡೊಯ್ಯುವಷ್ಟರಲ್ಲೇ ಮೃತಪಟ್ಟಿದ್ದಾನೆ. ವಿದ್ಯಾರ್ಥಿಗಳ ಗಲಾಟೆ ನೋಡಿ ಸ್ಥಳಕ್ಕೆ ಧಾವಿಸಿದ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಮೇಲೂ ವಿದ್ಯಾರ್ಥಿ ದಾಳಿ ಮಾಡಿದ್ದಾನೆ ಎನ್ನಲಾಗಿದೆ.

ಗಾಯಗೊಂಡಿರುವ ವಿದ್ಯಾರ್ಥಿಗಳು ಹಾಗೂ ವಾರ್ಡನ್ ಅವರನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಬಳ್ಳಾರಿಯ ಬ್ರೂಸ್‌ಪೇಟೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದಾರೆ.

ಘಟನೆಯ ಬಗ್ಗೆ ಮೃತ ಬಾಲಕ ಹೇಮಂತನ ತಂದೆ ಲಕ್ಷ್ಮೀಕಾಂತ್ ಅವರು ವಿಮ್ಸ್ ಆಸ್ಪತ್ರೆಯ ಬಳಿ ಮಾಧ್ಯಮದವರೊಂದಿಗೆ ಮಾತನಾಡಿ, ತಡರಾತ್ರಿ ಹಾಸ್ಟೆಲ್‌ನಿಂದ ಕರೆ ಬಂತು. ನಿಮ್ಮ ಮಗ ಗಂಭೀರ ಗಾಯಗೊಂಡಿದ್ದಾನೆ ಎಂದು ತಿಳಿಸಲಾಯಿತು.

ನಾವು ತಕ್ಷಣವೇ ಆದೋನಿಯಿಂದ ಬಳ್ಳಾರಿಗೆ ಬಂದೆವು. ಬಂದು ನೋಡಿದರೆ ಮಗ ಮೃತಪಟ್ಟಿದ್ದಾನೆ ಎಂದು ಕಣ್ಣೀರಿಡುತ್ತಾ ಹೇಳಿದರು. ಯಾವ ಕಾರಣಕ್ಕೆ ಆರೋಪಿತ ವಿದ್ಯಾರ್ಥಿ ಸಹಪಾಠಿಗಳ ಮೇಲೆ ಹಲ್ಲೆ ನಡೆಸಿದ್ದಾನೆ ಎಂಬ ಬಗ್ಗೆ ಪೊಲೀಸ್ ತನಿಖೆ ನಡೆದಿದೆ.

## ಬಜೆಟ್‌ನಲ್ಲಿ ಕನ್ನಡ ಕಡೆಗಣನೆ: ಮಾ.12ರಂದು ಕನ್ನಡ ಶಾಲೆಗಳ ಬಂದ್‌ಗೆ ವಾಟಾಳ್ ನಾಗರಾಜ್ ಕರೆ



**ಮೈಸೂರು, ಮಾ.8:** ಬಜೆಟ್‌ನಲ್ಲಿ ಕನ್ನಡ ಶಾಲೆಗಳ ಕಡೆಗಣನೆ ಖಂಡಿಸಿ ಮಾ.12ರಂದು ಕನ್ನಡ ಶಾಲೆಗಳ ಬಂದ್‌ಗೆ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಕರೆ ನೀಡಿದ್ದಾರೆ. ಮೈಸೂರಿನಲ್ಲಿ ಈ ವಿಚಾರವಾಗಿ ಮಾತನಾಡಿದ ವಾಟಾಳ್ ನಾಗರಾಜ್, ರಾಜ್ಯಾದ್ಯಂತ ಇರುವ ಕನ್ನಡ ಶಾಲೆಗಳನ್ನು ಬಂದ್ ಮಾಡುತ್ತೇವೆ. ಮೈಸೂರಿನ ಜಯ ಚಾಮರಾಜೇಂದ್ರ ವೃತ್ತದಲ್ಲಿ ಪ್ರತಿಭಟನೆ ಮಾಡುತ್ತೇವೆ. ಬಜೆಟ್ ನಲ್ಲಿ ಇಂಗ್ಲಿಷ್ ಶಾಲೆಗಳಿಗೆ 3900 ಕೋಟಿ ರೂ ಕೊಟ್ಟಿದ್ದೀರಿ. ಕನ್ನಡ ಶಾಲೆಗಳ ಅಭಿವೃದ್ಧಿಗೆ ನಯಾಪೈಸೆ ಘೋಷಣೆ ಮಾಡಿಲ್ಲ ಏಕೆ ಎಂದು ಪ್ರಶ್ನಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡವನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಖಾಸಗಿ ಶಾಲೆಗಳಲ್ಲಿ ಕನ್ನಡ ಮಾಧ್ಯಮವೇ ಇಲ್ಲ. ಕನ್ನಡ ಮಾಧ್ಯಮ ಇರುವುದು ಸರ್ಕಾರಿ ಶಾಲೆಗಳಲ್ಲಿ. ಸರ್ಕಾರಿ ಶಾಲೆ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ಕೊಡಬೇಕಿತ್ತು. ಸರ್ಕಾರದ ಧೋರಣೆಯನ್ನು ನಾನು ಖಂಡಿಸುತ್ತೇನೆ ಎಂದು ಕಿಡಿಕಾರಿಷ್ದರು.ಈ ವಿಚಾರವನ್ನು ಮುಂದಿಟ್ಟುಕೊಂಡು ಮಾ.12 ರಂದು ಎಲ್ಲಾ ಕನ್ನಡ ಶಾಲೆಗಳ ಬಂದ್ ಮಾಡಲು ವಿವಿಧ ಕನ್ನಡ ಪರ ಸಂಘಟನೆಗಳು ಕೈಜೋಡಿಸಬೇಕು ಎಂದು ಕರೆ ನೀಡಿದರು.

**ಮಕ್ಕಳಿಗೆ ಮೊಬೈಲ್ ನಿಷೇಧ ಸರಿಯಲ್ಲ:** ಇದೇ ವೇಳೆ 16 ವರ್ಷದೊಳಗಿನ ಮಕ್ಕಳಿಗೆ ಮೊಬೈಲ್ ನಿಷೇಧ ನಿರ್ಧಾರ ಸರಿಯಲ್ಲ. ಸರ್ಕಾರದ ನಡೆಯನ್ನು ನಾನು ಖಂಡಿಸುತ್ತೇನೆ ಎಂದು ಹೇಳಿದ್ದಾರೆ. ಮನೆಯಲ್ಲಿ ಮಕ್ಕಳು ಅವರ ಅಪ್ಪ, ಅಮ್ಮನ ಮೊಬೈಲ್ ಎತ್ತಿಕೊಂಡು ನೋಡುತ್ತಾರೆ. ಅವರನ್ನು ಏನು ಮಾಡಲು ಆಗುತ್ತೆ, ಜೈಲಿಗೆ ಹಾಕುವುದಕ್ಕೆ ಆಗುತ್ತಾ? ಕೊರೊನಾ ಸಂದರ್ಭದಲ್ಲಿ ಆನ್ಲೈನ್ ಕ್ಲಾಸ್ ಏಕೆ ಮಾಡುತ್ತಿದ್ದರು ಎಂದು ಪ್ರಶ್ನೆ ಮಾಡಿದ್ದಾರೆ.ಮೊಬೈಲ್ ಜಗತ್ತಿನ ಮಾಹಿತಿ ತಿಳಿಯಲು ವಿದ್ಯಾರ್ಥಿಗಳಿಗೆ ಅನುಕೂಲ. ಮೊಬೈಲ್ ಬ್ಯಾನ್ ಅಥವಾ ಸಾಮಾಜಿಕ ಜಾಲತಾಣ ನಿಷೇಧ ಸರಿಯಲ್ಲ. ಸರ್ಕಾರದ ಈ ಆದೇಶ ಹಿಂಪಡೆಯಬೇಕು ಎಂದು ವಾಟಾಳ್ ನಾಗರಾಜ್ ಒತ್ತಾಯಿಸಿದ್ದಾರೆ.

# ಗ್ರಾಮ ಪಂಚಾಯತಿಗೊಂದು ಜೋಳ ಖರೀದಿ ಕೇಂದ್ರ: ರೈತಸಂಘದ ಮನವಿ

**ರಾಯಚೂರು, ಮಾ. 8:** ಶೀಘ್ರಗತಿಯಲ್ಲಿ ಗ್ರಾಮ ಪಂಚಾಯಿತಿಗೊಂದು ಜೋಳ ಖರೀದಿ ಕೇಂದ್ರ ತೆರೆಯಬೇಕು. ಜೋಳ ಖರೀದಿ ಪ್ರಕ್ರಿಯೆಲ್ಲಿ ನಡೆಯುತ್ತಿರುವ ವಂಚನೆಯನ್ನು ತಡೆಯಬೇಕು ಎಂದು ಒತ್ತಾಯಿಸಿ ಕರ್ನಾಟಕ ರೈತಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳು ಜಿಲ್ಲಾಧಿಕಾರಿ ನಿತೀಶ್ ಕೆ.ಅವರಿಗೆ ಮನವಿ ಪತ್ರ ಸಲ್ಲಿಸಿದರು.



ಜೋಳ ಕಟಾವು ಕಾರ್ಯ ಮುಗಿದು ಒಂದು ತಿಂಗಳು ಕಳೆದಿದೆ. ಎರಡು ತಿಂಗಳಿನಿಂದ ನೋಂದಣಿ ಕಾರ್ಯದಲ್ಲಿ ಕಾಲಹರಣ ಮಾಡುತ್ತಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ಹೊರಹಾಕಿದರು.

ಖಾಲಿಚೀಲ ಖರೀದಿಸುವ ನೆಪದಲ್ಲಿ ಖರೀದಿ ಕೇಂದ್ರ ತೆರೆಯದೇ ವಿಳಂಬ ಮಾಡಿರುವುದು ಸರ್ಕಾರ ಹಾಗೂ ಜಿಲ್ಲಾಡಳಿತದ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ. ಕೆಲವು ರೈತರು ಬೆಳೆ ಬೆಳೆಯಲು ಪಡೆದ ಸಾಲ ತೀರಿಸಲು ಹಾಗೂ ಇತರೆ ಕಾರಣಗಳಿಂದ ಖಾಸಗಿ ವ್ಯಾಪಾರಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಿ ನಷ್ಟಕ್ಕೊಳಗಾಗಿದ್ದಾರೆ. ಸಮಯಕ್ಕೆ ಸರಿಯಾಗಿ ಖರೀದಿ ಕೇಂದ್ರ ತೆರೆಯದ ಕಾರಣದಿಂದ, ಕನಿಷ್ಠ ಬೆಂಬಲ ಬೆಲೆಯ ಲಾಭ ವರ್ತಕರಿಗೆ ದೊರೆಯುತ್ತದೆ ಎಂದು ಹೇಳಿದರು.

ರೈತರ ಆರ್ಥಿಕ ದೌರ್ಬಲ್ಯಗಳನ್ನು ದುರುಪಯೋಗಪಡಿಸಿಕೊಳ್ಳುವ ದಲ್ಲಾಳಿಗಳು, ಕಡಿಮೆ ಬೆಲೆಗೆ ಖರೀದಿಸಿ ಅವರ ಹೆಸರಿನಲ್ಲಿ ನೋಂದಣಿ ಮಾಡಿಸಿ ಲಾಭ ಪಡೆದುಕೊಳ್ಳುತ್ತಿದ್ದಾರೆ. ಈ ಭ್ರಷ್ಟಾಚಾರದ ವ್ಯವಹಾರದಲ್ಲಿ ಸ್ಥಳೀಯ ಸೊಸೈಟಿ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇಂತಹ ಅಧಿಕಾರಿಗಳು ಖಾಸಗಿ ವ್ಯಾಪಾರಿಗಳೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಅವ್ಯವಹಾರ ನಡೆಸುತ್ತಿದ್ದಾರೆ ಎಂದು ದೂರಿದರು.

ಎರಡು ವರ್ಷಗಳಿಂದ ಅನೇಕ ಬಾರಿ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಳೆದ ವರ್ಷ ತನಿಖಾ ತಂಡ ಸಿಂಧನೂರು ಸೇರಿ ಜಿಲ್ಲೆಯ ಇತರೆ ತಾಲ್ಲೂಕಿಗಳಲ್ಲಿ ತನಿಖೆ ಕೈಗೊಂಡರೂ ಅಕ್ರಮ ಪತ್ತೆಹಚ್ಚಿ ಯಾವ ಅಧಿಕಾರಿಗಳನ್ನೂ ಶಿಕ್ಷೆಗೊಳಪಡಿಸಿರುವುದಿಲ್ಲ. ಒಳಗಿಂದೊಳಗೆ ಅಕ್ರಮ–ವ್ಯವಹಾರಗಳನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕಲಾಯಿತು. ಇಂತಹ ಬೆಳವಣಿಗೆಗಳಿಗೆ ಜಿಲ್ಲಾಡಳಿತವೇ ನೇರ ಹೊಣೆ ಎಂದು ಆರೋಪಿಸಿದರು.

ಜಾಗದ ಸಮಸ್ಯೆಯಿಂದ ರೈತರು ತಮ್ಮ ಮನೆಯ ಮುಂದಿನ, ರಸ್ತೆ ಬೀದಿಗಳಲ್ಲಿ ಜೋಳದ ನಿಟ್ಟನ್ನು ಹಾಕಿದ್ದಾರೆ. ಈಗಾಗಲೇ ಜಿಲ್ಲೆಯ ಕೆಲಭಾಗದಲ್ಲಿ ಅಕಾಲಿಕ ಮಳೆ ಸುರಿದಿದ್ದರಿಂದ ಜೋಳ ಹಾಳಾಗಿದೆ. ಪುನಃ ಮಳೆ ಬರುವ ಸಾಧ್ಯತೆ ಇರುವುದರಿಂದ ಶೀಘ್ರಗತಿಯಲ್ಲಿ ಖರೀದಿ ಕೇಂದ್ರ ತೆರೆದು ರೈತರನ್ನು ನಷ್ಟದಿಂದ ಪಾರು ಮಾಡಬೇಕಾಗಿದೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

# ಮಹಿಳೆಯರ ಪ್ರಗತಿಗೆ ಶಿಕ್ಷಣದ ಜತೆಗೆ ಕುಟುಂಬದ ಬೆಂಬಲವೂ ಅವಶ್ಯ: ಎಂಎಲ್‌ಸಿ ಬಲ್ಕೀಶ್ ಬಾನು

**ಶಿವಮೊಗ್ಗ, ಮಾ.8:** ದೇಶದ ಪ್ರಗತಿಯಾಗಬೇಕಾದರೆ ಮಹಿಳೆಯರ ಪ್ರಗತಿಯಾಗಬೇಕು. ಮಹಿಳೆ ಪ್ರಗತಿ ಹೊಂದಲು ಶಿಕ್ಷಣ ಮತ್ತು ಕುಟುಂಬದ ಬೆಂಬಲ ಅತಿ ಅವಶ್ಯ ಎಂದು ವಿಧಾನ ಪರಿಷತ್ ಸದಸ್ಯೆ ಬಲ್ಕೀಶ್ ಬಾನು ತಿಳಿಸಿದರು.



1908ರಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡಿದ ಮಹಿಳಾ ಕಾರ್ಮಿಕರಿಗೆ ನಮನಗಳು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಘೋಷಣೆ ಯಾಗಲು ಈ ಹೋರಾಟವೂ ಕಾರಣವಾಗಿದೆ. ಮನೆಯಿಂದ ಸಮಾಜ ಶುರುವಾಗುತ್ತದೆ.ಅಲ್ಲಿಂದಲೇ ಅವಕಾಶ ಸಿಕ್ಕರೆ ಪ್ರಗತಿ ಸಾಧಿಸಲು ಸಾಧ್ಯವಾಗಿದ್ದು ಶಿಕ್ಷಣ ಪಡೆಯುವುದು ಬಹಳ ಮುಖ್ಯವಾಗಿದೆ. ಭೂಮಿಯಿಂದ ಆಕಾಶದವರೆಗೆ ಇಂದು ಎಲ್ಲ ಕ್ಷೇತ್ರದಲ್ಲಿ ಹೆಣ್ಣು ಮುಂದೆ ಬರುತ್ತಿದ್ದಾಳೆ. ಇದಕ್ಕೆ ಮುಖ್ಯ ಕಾರಣ ಶಿಕ್ಷಣ. ಹಿಂದೆ ಹೆಣ್ಣುಮಕ್ಕಳಿಗೆ ಹೆಚ್ಚಿನದಾಗಿ ಮೌಲ್ಯಾ ಧಾರಿತ ಉಪಚಾರ ಹೇಳಲಾಗುತ್ತಿತ್ತು. ಆಕೆಯ ಪ್ರಗತಿಗೆ ಅವಕಾಶ ಇರಲಿಲ್ಲ. ತ್ಯಾಗ, ಸಹನೆ ಜನ್ಮತಃ ಹೊಂದಿರುವ ಹೆಣ್ಣು ಮನೆಯಲ್ಲಿ ಹೋಂಮಿನಿಸ್ಟರ್ ಆದಿಯಾಗಿ ಎಲ್ಲ ಜವಾಬ್ದಾರಿ ನಿರ್ವಹಣೆ ಮಾಡುತ್ತಾಳೆ. ಕೃಷಿ, ಕೈಗಾರಿಕೆಯಿಂದ ಹಿಡಿದು ದೊಡ್ಡ ದೊಡ್ಡ ಹುದ್ದೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.ಮಹಿಳಾ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ನೀಡಿದೆ. ಮಹಿಳೆಯರ ಯುಗ ರಾಜ್ಯದಲ್ಲಿದೆ. ಗ್ಯಾರಂಟಿ ಯೋಜನೆಗಳು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ರಾಜಕೀಯ ವಲಯದಲ್ಲಿ ಅವಕಾಶಗಳು ಇನ್ನೂ ಹೆಚ್ಚಬೇಕು.ಈ ವಲಯದಲ್ಲಿ ಹೆಣ್ಣುಮಕ್ಕಳು ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕು. ಕೈಗಾರಿಕಾ ಕ್ಷೇತ್ರದ ಅವಕಾಶಗಳನ್ನು ಬಳಸಿಕೊಳ್ಳಬೇಕು. 20 ನಿಮಿಷ ನಿಮಗೆ ಇಷ್ಟವಾದ ಕೆಲಸಕ್ಕಾಗಿ, ಹವ್ಯಾಸಕ್ಕಾಗಿ ಮೀಸಲಿಡಿರಿ. ನಿಮಗಾಗಿ ಸಮಯ ಮಾಡಿಕೊಂಡು ನಿಮ್ಮ ಹವ್ಯಾಸಗಳಿಗೆ ಒತ್ತು ನೀಡಿದರೆ ನಿಮ್ಮಲ್ಲಿ ಉತ್ತಮ ಬದಲಾವಣೆ ಸಾಧ್ಯವಾಗುತ್ತದೆ. ಕೊಡುವಂತಹ ಮನೋಭಾವ ವನ್ನು ಮಕ್ಕಳಿಗೆ ಕಲಿಸಿಕೊಡಬೇಕು ಎಂದ ಅವರು ಮಕ್ಕಳನ್ನು ಆಸ್ತಿ ಮಾಡುವ ಶಕ್ತಿ ತಾಯಿಗಿದೆ ಎಂದರು.

ಕರ್ನಾಟಕ ರಾಜ್ಯ ಎಸ್ ಸಿ /ಎಸ್ ಟಿ ಅಲೆಮಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಮಾತನಾಡಿ , ಕುಟುಂಬ, ಸಮಾಜದಲ್ಲಿ ಎದುರಾಗುವ ಸವಾಲುಗಳು ಮಹಿಳೆಗೆ ಮಾತ್ರ ತಿಳಿದಿದೆ. ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಹೋಗಿದ್ದರೂ ಕಟ್ಟುಪಾಡುಗಳು ಅಷ್ಟೇ ಇವೆ. ನಮ್ಮ ಹಕ್ಕುಗಳಿಗಾಗಿ 98 ವರ್ಷಗಳ ಹಿಂದೆ ನಡೆದ ಕಾರ್ಮಿಕ ಹೋರಾಟವು ಮಹಿಳಾ ದಿನಾಚರಣೆಗೆ ಕಾರಣವಾಗಿದೆ. 12 ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದಲ್ಲಿ ಹೆಣ್ಣಿಗೆ ಸಮಾನ ಅವಕಾಶ ನೀಡಿ ಸಾಮಾಜಿಕ ನ್ಯಾಯ ಮೆರೆದರು. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮಹಿಳೆಗೆ ಸಾಂವಿಧಾನಿಕ ಹಕ್ಕುಗಳನ್ನು ನೀಡಿದ್ದು ಇವರನ್ನೆಲ್ಲ ಸ್ಮರಿಸಲೇಬೇಕು. ದೇಶದ ಹೆಣ್ಣುಮಕ್ಕಳು ಸುಶಿಕ್ಷಿತರಾಗಿ ಎಲ್ಲ ರಂಗಗಳಲ್ಲಿ ಮುಂದೆ ಬರಬೇಕೆಂದು ಕ್ರಾಂತಿ ಮಾಡಿ, ಶಿಕ್ಷಣ ನೀಡಿದ ಮಹಿಳೆ ಸಾವಿತ್ರಿಬಾಯಿ ಫುಲೆಯಂತಹವರನ್ನು ಮರೆಯಬಾರದು. ಹೆಣ್ಣಿಗೆ ಜಾತಿ, ಧರ್ಮ ಇಲ್ಲ. ಅವಳೊಂದು ಶಕ್ತಿ. ಅವಕಾಶಗಳನ್ನು ಬಳಸಿಕೊಂಡು, ಪ್ರಗತಿ ಹೊಂದಿ, ಉತ್ತಮ ಕೊಡುಗೆ ನೀಡಬೇಕಿದೆ. ನಮ್ಮೊಂದಿಗೆ ಇತರೆ ಮಹಿಳೆಯರನ್ನು ಬೆಳೆಸಬೇಕು. ಹಾಗೂ ಆರೋಗ್ಯದ ಬಗ್ಗೆ ಗಮನ ಹರಿಸಬೇಕು ಎಂದರು.

ಸೂಡಾ ಅಧ್ಯಕ್ಷ ಎಚ್ ಎಸ್. ಸುಂದರೇಶ್ ಮಾತನಾಡಿ, 1908 ರಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ನಡೆಸಿದ ಹೋರಾಟಗಳು ಅಂತರಾಷ್ಟ್ರೀಯ ಮಹಿಳಾ ದಿನ ಘೋಷಣೆಗೆ ಕಾರಣವಾಯಿತು.ಎಲ್ಲ ಕ್ಷೇತ್ರದಲ್ಲಿ ಮಹಿಳೆಯರು ಉತ್ತಮವಾಗಿ ಸಾಧನೆ ಮಾಡಿದ್ದಾರೆ. ಉತ್ತಮ ಆಡಳಿತಗಾರರೂ ಆಗಿದ್ದಾರೆ. ತುಳಿತಕ್ಕೊಳಗಾಗಿ ಅಡುಗೆ ಮನೆಗೆ ಸೀಮಿತವಾಗಿದ್ದ ಹೆಣ್ಣು ಇಂದು ಎಲ್ಲ ರಂಗಗಳಲ್ಲಿ ಮುಂದೆ ಬರುತ್ತಿದ್ದಾರೆ. ಮಹಿಳಾ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಗೃಹಲಕ್ಷ್ಮಿ,ಶಕ್ತಿ ಯಂತಹ ಯೋಜನೆಗಳನ್ನು ನೀಡಿದೆ ಎಂದರು.ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ಕಮಲಾ ನೆಹರು ಮಹಿಳಾ ಕಾಲೇಜಿನ ನಿ.ಉಪನ್ಯಾಸಕ ಪ್ರೊ.ಕಿರಣ್ ಆರ್ ದೇಸಾಯಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಕೊಡು ಮತ್ತು ಪಡೆ ಎಂಬುದು ಈ ವರ್ಷದ ಮಹಿಳಾ ದಿನಾಚರಣೆ ಘೋಷವಾಕ್ಯ ವಾಗಿದ್ದು ಏನಾದರೂ ಪಡೆಯಲಿಕ್ಕಾಗಿ ಕೆಲವನ್ನು ತ್ಯಾಗ ಮಾಡಬೇಕು. ಮಹಿಳೆ ನಿರಂತರವಾಗಿ ಇದನ್ನೇ ಮಾಡುತ್ತಾ ಬಂದಿದ್ದಾಳೆ.

ಮಹಿಳಾ ದಿನ ನಮ್ಮನ್ನು ನಾವೇ ಸಂಭ್ರಮಿಸುವ ದಿನ. ಮಹಾ ಇಳೆ ಮಹಿಳೆ. ಇದೊಂದು ಶಕ್ತಿಶಾಲಿ ಪದ. ಆಕೆಗೆ ದೈಹಿಕ ಶಕ್ತಿ , ಭಾವನಾತ್ಮಕ ಶಕ್ತಿ, ಬೌದ್ಧಿಕ ಶಕ್ತಿ, ಮಾನಸಿಕ ಶಕ್ತಿ, ಆತ್ಮಿಕ ಶಕ್ತಿ ಅಗಾಧವಾಗಿದೆ. ಇತಿಹಾಸದುದ್ದಕ್ಕೂ ಹೆಣ್ಣಿನ ಶಕ್ತಿಯನ್ನು ಸಾಕ್ಷೀಕರಿಸುತ್ತಾ ಬಂದಿದ್ದೇವೆ. ಅಸಂಖ್ಯಾತ ಮಹಿಳಾ ಸಾಧಕಿಯರು ಮಾದರಿಯಾಗಿದ್ದಾರೆ. ಆತ್ಮವಿಶ್ವಾಸ, ದೃಢತೆ ಬಹಳ ಮುಖ್ಯವಾಗಿದ್ದು ನಡೆ–ನುಡಿ, ಉಡುಗೆ–ತೊಡುಗೆ ಬಗ್ಗೆ ಗಮನ ಹರಿಸಬೇಕು ಎಂದ ಅವರು ಮಕ್ಕಳಿಗೆ ಮಾನವೀಯತೆ ಕಲಿಸುವುದು ಬಹಳ ಮುಖ್ಯ ಎಂದರು.ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸಿ.ಎಸ್.ಚಂದ್ರಭೂಪಾಲ ಮಾತನಾಡಿದರು.

# ಬಾಲ್ಯವಿವಾಹ ಸಾಮಾಜಿಕ ಶಾಪ: ತಡೆಗೆ ನೈತಿಕ ಜಾಗೃತಿ ಅಗತ್ಯ– ನ್ಯಾ.ಇನವಳ್ಳಿ



**ಕಲಬುರಗಿ, ಮಾ. 8:** ಬಾಲ್ಯ ವಿವಾಹವು ಸಮಾಜಕ್ಕೆ ಅಂಟಿದ ದೊಡ್ಡ ಶಾಪವಾಗಿದೆ. ಇದನ್ನು ಕೇವಲ ಕಾನೂನಿನ ಮೂಲಕ ಮಾತ್ರವಲ್ಲದೆ, ಪೋಷಕರು ಮತ್ತು ಶಿಕ್ಷಕರಲ್ಲಿ ನೈತಿಕ ಜಾಗೃತಿ ಮೂಡಿಸುವ ಮೂಲಕ ಸಂಪೂರ್ಣ ನಿರ್ಮೂಲನೆ ಸಾಧ್ಯವಾಗಲಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಟಿ.ಎನ್. ಇನವಳ್ಳಿ ತಿಳಿಸಿದರು.

ಬಾಲ್ಯವಿವಾಹ ನಿಷೇಧ ಕಾಯ್ದೆಯ ಕುರಿತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಬಾಲ್ಯವಿವಾಹ ನಿಷೇಧ ಕಾಯ್ದೆ 2006 ತಿದ್ದುಪಡಿ 2016 ಕಾಯ್ದೆಯಲ್ಲಿ ಬಾಲ್ಯ ವಿವಾಹ ತಡೆಗೆ ಪ್ರಬಲ ಕಾನೂನುಗಳಿವೆ. ಕಾನೂನಿನ ಅರಿವಿಲ್ಲ ಎಂಬ ಕಾರಣ ನೀಡಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕಾನೂನು ಬದ್ಧವಾಗಿ ಮದುವೆಗೆ ಹುಡುಗನಿಗೆ 21 ವರ್ಷ ಮತ್ತು ಹುಡುಗಿಗೆ 18 ವರ್ಷ ತುಂಬಿರಲೇಬೇಕು. ಯಾವುದು ನೈತಿಕವಾಗಿ ಸರಿಯೋ ಅದು ಕಾನೂನಿನ ಪ್ರಕಾರವೂ ಸರಿಯಾಗಿರುತ್ತದೆ. ನೈತಿಕ ಜೀವನ ನಡೆಸಿದರೆ ಕೋರ್ಟ್ ಪೊಲೀಸ್ ಠಾಣೆ, ಆಸ್ಪತ್ರೆ ಮೆಟ್ಟಿಲು ಹತ್ತುವ ಅವಶ್ಯಕತೆ ಬರುವುದಿಲ್ಲ. ಮಕ್ಕಳ ರಕ್ಷಣೆ ಕೇವಲ ಒಂದು ಇಲಾಖೆಯ ಜವಾಬ್ದಾರಿಯಲ್ಲ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಸುಮಾರು 15ಕ್ಕೂ ಹೆಚ್ಚು ಇಲಾಖೆಗಳು ಒಗ್ಗಟ್ಟಾಗಿ ಕೆಲಸ ಮಾಡಿದರೆ ಮಾತ್ರ ಈ ಸಾಮಾಜಿಕ ಪಿಡುಗನ್ನು ತಡೆಯಲು ಸಾಧ್ಯ ಎಂದು ಹೇಳಿದರು.

ಕಾನೂನು ಸಲಹೆಗಾರರು, ಬಾರ್ ಅಸೋಸಿಯೇಶನ್ ಅಧ್ಯಕ್ಷ ರಾಜಕುಮಾರ ಎಸ್. ಕಡಗಾಂಚಿ, ಎಸ್.ಜೆ.ಪಿ.ಯು, ಸಿ.ಐ.ಡಿ, ತರಬೇತುದಾರ ರೋಹಿತ ಸಿ. ಜೆ ಬಾಲ್ಯವಿವಾಹ ನಿಷೇಧ ಕುರಿತು ಅಧಿಕಾರಿಗಳಿಗೆ, ಸಿಬಂದಿಗಳಿಗೆ ತರಬೇತಿ ನೀಡಿದ ಅವರು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಸಮಾಜದ ಪ್ರಗತಿಗೆ ಮಾರಕವಾಗಿರುವ ಬಾಲ್ಯ ವಿವಾಹವನ್ನು ತಡೆಗಟ್ಟುವುದು ಹೇಗೆ ಎಂದು ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳ ಹಕ್ಕುಗಳನ್ನು ಕಾಪಾಡುವುದು ಕೇವಲ ಕಾನೂನಿನ ಚೌಕಟ್ಟಲ್ಲ, ಅದು ಪ್ರತಿಯೊಬ್ಬ ಪೋಷಕರ ಮತ್ತು ನಾಗರಿಕರ ನೈತಿಕ ಜವಾಬ್ದಾರಿಯಾಗಿದೆ. ಬಾಲ್ಯವಿವಾಹ ನಿಷೇಧ ಕಾಯ್ದೆಯ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಪೋಕ್ಸೋ ಕಾಯ್ದೆಯ ಗಂಭೀರತೆ: ಬಾಲ್ಯವಿವಾಹಕ್ಕಿಂತಲೂ ಭೀಕರವಾದ ಸಾಮಾಜಿಕ ಪಿಡುಗು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಎಂದು ಕಳವಳ ವ್ಯಕ್ತಪಡಿಸಿದ ಅಧಿಕಾ–ರಿಗಳು, ಬಾಲ್ಯವಿವಾಹ ಮತ್ತು ಪೋಕ್ಸೋ ಕಾಯ್ದೆಗಳ ನಡುವಿನ ನೇರ ಸಂಬಂಧವನ್ನು ವಿವರಿಸಿದರು. ಪೋಕ್ಸೋ ಕಾಯ್ದೆಯಡಿ ಹತ್ತು ಪಟ್ಟು ಕಠಿಣ ಶಿಕ್ಷೆಯ ಅವಕಾಶವಿರುವುದನ್ನು ತಿಳಿಸುತ್ತಾ, ಮಕ್ಕಳ ಸುರಕ್ಷತೆಯ ವಿಚಾರದಲ್ಲಿ ರಾಜಿ ಮಾಡಿಕೊಳ್ಳಬಾರದು ಎಂದು ಎಚ್ಚರಿಸಿದರು.

**ಮೈಸೂರಿನಲ್ಲಿ ಭಾನುವಾರ** ಸರ್ಕಾರವು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತಲುಪುವ ಗುರಿಯನ್ನು ಹೊಂದಿದೆ. ಬಾಲ್ಯವಿವಾಹ ಮುಕ್ತ ರಾಷ್ಟ್ರ ನಿರ್ಮಾಣ. ಬಡತನ ನಿರ್ಮೂಲನೆ ಮತ್ತು ಹಸಿವು ಮುಕ್ತ ಸಮಾಜ. ಗುಣಮಟ್ಟದ ಶಿಕ್ಷಣ ಮತ್ತು ಲಿಂಗ ಸಮಾನತೆ. ಮಕ್ಕಳ ಸಾಗಾಣಿಕೆ ಮತ್ತು ಬಾಲಕಾರ್ಮಿಕ ಪದ್ಧತಿ ತಡೆಗಟ್ಟುವಿಕೆ. ಗ್ರಾಮ ಪಂಚಾಯತಿಗಳಿಗೆ ವಿಶೇಷ ಸವಾಲು, ರಾಜ್ಯದಲ್ಲಿ ಈವರೆಗೆ ಒಂದು ಗ್ರಾಮ ಪಂಚಾಯತಿಯೂ ಸಹ ಅಧಿಕೃತವಾಗಿ ಬಾಲ್ಯವಿವಾಹ ಮುಕ್ತ ಪಂಚಾಯತಿ ಎಂದು ಘೋಷಿಸಿಕೊಳ್ಳಲು ಮುಂದೆ ಬಂದಿಲ್ಲದಿರುವುದು ವಿಷಾದನೀಯ ಎಂದು ಅಧಿಕಾರಿಗಳು ತಿಳಿಸಿದರು.

ಮಕ್ಕಳನ್ನು ರಕ್ಷಿಸಿ: ಬಾಲ್ಯ ವಿವಾಹ ನಿಷೇಧ ಕಾಯಿದೆ–2006, ತಿದ್ದುಪಡಿ–2016 ಕಾಯ್ದೆ ಅಡಿಯಲ್ಲಿ 18 ವರ್ಷದೊಳಗಿನ ಹುಡುಗಿಯರು ಹಾಗೂ 21 ವರ್ಷದೊಳಗಿನ ಹುಡುಗರ ಮದುವೆ ಮಾಡಿದರೆ ಮದುವೆ ಗಂಡಿಗೆ, ಪೋಷಕರಿಗೆ, ಬೆಂಬಲ ಕೊಟ್ಟವಯಿರಿಗೆ, ಭಾಗವಹಿಸಿದವರಿಗೆ ಎಲ್ಲರಿಗೂ 1 ವರ್ಷದಿಂದ 2 ವರ್ಷದವರೆಗೆ ಜೈಲು, 1 ಲಕ್ಷ ರೂಪಾಯಿಗಳ ದಂಡ ವಿಧಿಸಲಾಗುವುದು. ಬಾಲ್ಯವಿವಾಹ ಕಂಡು ಬಂದಲ್ಲಿ 1098 ಗೆ ಕರೆಮಾಡಿ ತಿಳಿಸಬೇಕು ಎಂದು ಹೇಳಿದರು.



ಬೆಂಗಳೂರಿನ ಮಹದೇವಪುರದಲ್ಲಿರುವ ಕಿಮ್ಸ್ ಆಸ್ಪತ್ರೆಯಲ್ಲಿ ಪಿಇಎಸ್ ಸೂಪರ್ ಸ್ಪೆಷಾಲಿಟಿ ಬ್ಲಾಕ್ ಅನ್ನು ತೆಲುಗಿನ ಖ್ಯಾತ ನಟ ಜೂನಿಯರ್ ಎನ್‌ಟಿಆರ್ ಭಾನುವಾರ ಉದ್ಘಾಟಿಸಿದರು.

## ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಲು ಡಿಸಿ ಆಶಯ

### ಜಿಲ್ಲಾಮಟ್ಟದ ವಸ್ತು ಪ್ರದರ್ಶನ– ಮಾರಾಟ ಮೇಳಕ್ಕೆ ವಿಧ್ಯುಕ್ತ ಚಾಲನೆ



**ವಿಜಯಪುರ, ಮಾ.8–** ಜಿಲ್ಲಾ ಪಂಚಾಯತಿ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಇವರ ಸಹಯೋಗದಲ್ಲಿ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಜಿಲ್ಲಾಧಿಕಾರಿ ಕೆ. ಆನಂದ ಅವರು ಚಾಲನೆ ನೀಡಿದರು.

ಸ್ವ–ಸಹಾಯ ಸಂಘದ ಮಹಿಳೆಯರು ಉತ್ಪಾದಿಸಿದ ಉತ್ಪನ್ನಗಳ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ಸ್ವಸಹಾಯ ಸಂಘಗಳ ಮಹಿಳೆಯರು ತಯಾರಿಸಿದ ಹಲವಾರು ವಸ್ತುಗಳನ್ನು ಜಿಲ್ಲಾಧಿಕಾರಿಗಳು ವೀಕ್ಷಿಸಿ, ಪ್ರಶಂಸಿಸಿದರು. ಗ್ರಾಮೀಣ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಬೇಕು. ಎಲ್ಲ ಮಹಿಳೆಯರು ಸಬಲೀಕರಣ ಹೊಂದಬೇಕು ಎಂದು ಮಹಿಳೆಯರಿಗೆ ಪ್ರೇರಣೆ ನೀಡಿದರು.

ಮೇಳದಲ್ಲಿ ಜಿಲ್ಲೆಯ 13 ತಾಲೂಕುಗಳ ಸ್ವ–ಸಹಾಯ ಸಂಘಗಳ ಮಹಿಳಾ ಉದ್ಯಮಿದಾರರು ಭಾಗವಹಿಸಿದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಎನ್‌ಆರ್‌ಎಲ್‌ಎಂ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅತ್ಯುತ್ತಮವಾಗಿ ಕಾರ್ಯಸುತ್ತಿರುವ ಕೃಷಿ ಸಖಿಯರು ಹಾಗೂ ಪಶು ಸಖಿಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ. ಕೆ. ಚವ್ಹಾಣ, ಜಿಲ್ಲಾ ಪಂಚಾಯತಿಯ ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಾಯಿ, ಜಿಲ್ಲೆಯ ಎಲ್ಲ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಎನ್ ಆರ್ ಎಲ್‌ಎಂ ಸಿಬ್ಬಂದಿ ಉಪಸ್ಥಿತರಿದ್ದರು.

## ಮಾದಕ ವಸ್ತು ಸೇವನೆ–ಹೆಣ್ಣು ಮಕ್ಕಳೇ ಹೆಚ್ಚು: ಡಾ.ಭಗವಾನ್




**ರಾಯಚೂರು, ಮಾ. 8:** ಯುವಜನರಲ್ಲಿ ಮಾದಕ ವಸ್ತುಗಳ ಸೇವನೆ ಅಧಿಕವಾಗುತ್ತಿದೆ. ದೇಶದಲ್ಲಿ ಶೇ. 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನಿಗಳಾಗಿದ್ದಾರೆ. ಅವರಲ್ಲಿ ಹೆಣ್ಣು ಮಕ್ಕಳೇ ಹೆಚ್ಚಿರುವುದು ಆತಂಕಕಾರಿಯಾಗಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಕಳವಳ ವ್ಯಕ್ತಪಡಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಸಂಘ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾಭೋದ್ ಫೌಂಡೇಶನ್ ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊದ ಸಹಯೋಗದೊಂದಿಗೆ ನಗರದಲ್ಲಿ ಆಯೋಜಿಸ ಲಾಗಿದ್ದ 'ಸ್ವಾಸ್ಥ್ಯ ಭಾರತ, ಶ್ರೇಷ್ಠ ಭಾರತ', 'ಯುವ ಶುದ್ಧಿ ಅಭಿಯಾನ', 'ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ', 'ನಶಾ ಮುಕ್ತ ಕ್ಯಾಂಪಸ್' ಹಾಗೂ 'ಅಂಗಾಂಗ ದಾನ ಜಾಗೃತಿ' ಅಭಿಯಾನದಲ್ಲಿ ಮಾತನಾಡಿದರು.

ದೇಶದ ಬಹುದೊಡ್ಡ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವಾದ ನಮ್ಮ ಸಂಸ್ಥೆಯ ಅಡಿಯಲ್ಲಿ ಸುಮಾರು 1,500 ಶಿಕ್ಷಣ ಸಂಸ್ಥೆಗಳು ಸಂಯೋಜನೆಗೊಂಡಿವೆ. ಒಟ್ಟು 3.5 ಲಕ್ಷ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡುತ್ತಾರೆ. ಇಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾವು, ಕೇವಲ ತರಗತಿ, ಬೋಧನೆ, ಪರೀಕ್ಷೆ, ಫಲಿತಾಂಶಕ್ಕಷ್ಟೇ ಸೀಮಿತವಾದರೆ ಸಾಲದು. ಆರೋಗ್ಯವಂತ, ಸ್ವಸ್ಥ, ಮಾನವೀಯ ಗುಣಗಳ ಆರೋಗ್ಯ ವೃತ್ತಿಪರರನ್ನು ಬೆಳೆಸಬೇಕು ಎನ್ನುವುದು ನಮ್ಮ ವಿಶ್ವವಿದ್ಯಾಲಯದ ಧ್ಯೇಯವಾಗಿದೆ ಎಂದರು.

ಗದಗ, ಕೊಪ್ಪಳ, ಬೀದರ್, ದಕ್ಷಿಣ ಕನ್ನಡ, ಉಡುಪಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ, ಕೊಡಗು, ಹಾಸನ, ವಿಜಯಪುರ, ಬೆಳಗಾವಿ ಸೇರಿದಂತೆ 12 ಜಿಲ್ಲೆಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ 450ಕ್ಕೂ ಅಧಿಕ ಸಂಸ್ಥೆಗಳು ಭಾಗಿಯಾಗಿವೆ. ಸುಮಾರು 67 ಸಾವಿರ ವಿದ್ಯಾರ್ಥಿಗಳು ಈ ಜಾಗೃತಿ ನಡಿಗೆಗೆ ಸಾಕ್ಷಿಯಾಗಿದ್ದಾರೆ ಎಂದರು.

ರಾಯಚೂರು ಜಿಲ್ಲೆಯಲ್ಲಿ ಮಾದಕ ವಸ್ತುಗಳ ಬಳಕೆ ಯುವಜನತೆಯ ಆರೋಗ್ಯ ಮತ್ತು ಭವಿಷ್ಯವನ್ನು ಹಾಳುಮಾಡುತ್ತಿದೆ. ತಂಬಾಕು, ಮದ್ಯ, ಗಾಂಜಾ, ಡ್ರಗ್ಸ್ ಸೇರಿದಂತೆ ಅನೇಕ ವ್ಯಸನಗಳು ವಿದ್ಯಾರ್ಥಿಗಳ ಏಳಿಗೆಗೆ, ಭವಿಷ್ಯಕ್ಕೆ ಅಡ್ಡಿಯಾಗುತ್ತಿವೆ. ಇದನ್ನು ತಡೆಯಲು ನಾವೆಲ್ಲಾ ಒಗ್ಗಟ್ಟಾಗಿ ಹೋರಾಡಬೇಕಿದೆ ಎಂದು ಹೇಳಿದರು.

ದೇಶದಲ್ಲಿ ಲಕ್ಷಾಂತರ ರೋಗಿಗಳು ಅಂಗಾಂಗ ಕಸಿಗಾಗಿ ಕಾಯುತ್ತಿದ್ದಾರೆ. ಆದರೆ, ಅವರಿಗೆ ಲಭ್ಯವಾಗುತ್ತಿರುವ ಅಂಗಾಂಗಗಳು ಮಾತ್ರ ಸಾವಿರ ಸಂಖ್ಯೆ ದಾಟುತ್ತಿಲ್ಲ. ಈ ಅಂತರವನ್ನು ತುಂಬಲು ನಮ್ಮ ವಿಶ್ವವಿದ್ಯಾಲಯದಿಂದ ರಾಜ್ಯದಾದ್ಯಂತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಒಟ್ಟು 58 ಸಾವಿರ ಅಂಗಾಂಗ ದಾನಗಳು ನಡೆದಿವೆ. ಈವರೆಗೆ ನಮ್ಮ ವಿಶ್ವವಿದ್ಯಾಲಯದಿಂದ ಸುಮಾರು 10 ಸಾವಿರದಷ್ಟು ಅಂಗಾಂಗ ದಾನ ಪ್ರತಿಜ್ಞೆಗಳು ನಡೆದಿವೆ ಎಂದು ಹೇಳಿದರು.

## ಬಜೆಟ್‌ನಲ್ಲಿ ಬೀದರ್‌ಗೆ ಹೊಸ ಯೋಜನೆಗಳ ಬಂಪರ್; ರೈತರು, ನೀರಾವರಿ ನಿರ್ಲಕ್ಷ್ಯ



**ಬೀದರ್, ಮಾ. 8:** ಕಳೆದ ಶುಕ್ರವಾರ ಮಂಡಿಸಿದ 2026–27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಬೀದರ್ ಜಿಲ್ಲೆಗೆ ಕೆಲ ಹೊಸ ಯೋಜನೆಗಳನ್ನು ಘೋಷಿಸಲಾಗಿದೆ. ಆದರೆ, ರೈತರು, ನೀರಾವರಿಯತ್ತ ಹೆಚ್ಚಿನ ಚಿತ್ತ ಹರಿಸಿಲ್ಲ. ಬಸವಾದಿ ಶರಣರು ನೆಲದಾಡಿದ ನೆಲ ಬಸವಕಲ್ಯಾಣದಲ್ಲಿ 750 ಕೋಟಿ ವೆಚ್ಚದಲ್ಲಿ ನೂತನ ಅನುಭವ ಮಂಟಪ ನಿರ್ಮಿಸಲಾಗುತ್ತಿದ್ದು, ಅದನ್ನು ಈ ವರ್ಷದೊಳಗೆ ಪೂರ್ಣಗೊಳಿಸಿ, ಉದ್ಘಾಟಿಸಲಾಗುವುದು ಎಂದು ಘೋಷಿಸಿದ್ದಾರೆ.

ಖಾಸಗಿ ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ 25 ಎಕರೆ ಜಮೀನು ನೀಡಲು ನಿರ್ಧರಿಸಲಾಗಿದೆ. ಬಸವ ಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರ ನೇತೃತ್ವದ ನಿಯೋಗ ಇತ್ತೀಚೆಗೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ವಚನ ವಿವಿ ಸ್ಥಾಪನೆಯ ಬೇಡಿಕೆ ಮಂಡಿಸಿತ್ತು.

ಕಳೆದ ವರ್ಷ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಬೀದರ್ ಮಹಾನಗರ ಪಾಲಿಕೆಗೆ ಹೆಚ್ಚಿನ ಅನುದಾನ ನೀಡಬೇಕೆಂಬ ಬೇಡಿಕೆಗೆ ಮನ್ನಣೆ ದೊರೆತಿದೆ. ಬಜೆಟ್‌ನಲ್ಲಿ 200 ಕೋಟಿ ಕಾಯ್ದಿರಿಸಲಾಗಿದೆ. ಇದರಿಂದ ಬೀದರ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಹಕಾರಿಯಾಗಲಿದೆ. 100 ಕೋಟಿ ನೀಡಬೇಕೆಂದು ಜಿಲ್ಲೆಯವರೇ ಆದ ಪೌರಾಡಳಿತ ಸಚಿವ ರಹೀಂ ಖಾನ್ ಪ್ರಸ್ತಾವ ಸಲ್ಲಿಸಿದ್ದರು.

ಬೀದರ್ ಜಿಲ್ಲೆಯಲ್ಲಿ 4 ಕೋಟಿ ವೆಚ್ಚದಲ್ಲಿ ಹೊಸ ತಾರಾಲಯ ಸ್ಥಾಪನೆ. ಬೀದಿನಾಯಿಗಳ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಂತಾನ ಹರಣ ನಿಯಂತ್ರಣವನ್ನು ವೈಜ್ಞಾನಿಕ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರಲು ಪಶುವೈದ್ಯರು ಮತ್ತು ಪಶುವೈದ್ಯಕೀಯ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ತಾಂತ್ರಿಕ ತರಬೇತಿ ನೀಡಲು ಬೀದರ್‌ನಲ್ಲಿ ಶ್ವಾನ ಸಂತಾನ ನಿಯಂತ್ರಣ ತರಬೇತಿ ಕೇಂದ್ರ ಸ್ಥಾಪಿಸಲಾಗುವುದು ಎಂದು ಘೋಷಿಸಲಾಗಿದ್ದು, ಜಿಲ್ಲೆಯ ಮಟ್ಟಿಗೆ ಪ್ರಮುಖ ಯೋಜನೆಗಳಾಗಿವೆ.

ಬೀದರ್‌ನಲ್ಲಿ ಸಾವಿರ ಕೈದಿಗಳ ಸಾಮರ್ಥ್ಯದ ಜಿಲ್ಲಾ ಕೇಂದ್ರ ಕಾರಾಗೃಹ ನಿರ್ಮಾಣ ಪೂರ್ಣಗೊಂಡಿರುವುದನ್ನು ಸಿಎಂ ಪ್ರಸ್ತಾಪಿಸಿದ್ದಾರೆ. ಇದರಲ್ಲಿ ಹೊಸತೇನೂ ಇಲ್ಲ. ಈಗಾಗಲೇ ಕಾರಾಗೃಹ ನಿರ್ಮಾಣ ಕಾರ್ಯ ಮುಗಿದಿದ್ದು, ಉದ್ಘಾಟನೆಗೆ ಸಜ್ಜುಗೊಂಡಿದೆ. ಇನ್ನುಳಿದಂತೆ ಭಾಲ್ಕಿ, ಚಿಟಗುಪ್ಪ ಹಾಗೂ ಹುಮನಾಬಾದ್ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕೆರೆ ಹಾಗೂ ಕಾಲುವೆಗಳ ಅಭಿವೃದ್ಧಿ ಮಾಡಲಾಗುವುದು ಎಂದು ಸಿಎಂ ತಿಳಿಸಿದ್ದಾರೆ. ಇಷ್ಟೇ ಅಲ್ಲ, ಆಲಮಟ್ಟಿ ಯೋಜನೆಯಲ್ಲಿ ಜಮೀನು ಕಳೆದುಕೊಂಡು ಸಂತ್ರಸ್ತ ರಾದವರಿಗೆ ಪರಿಹಾರ ನೀಡುವುದರ ಕುರಿತು ತಿಳಿಸಿದ್ದಾರೆ. ಆದರೆ, ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯಲ್ಲಿ ಜಮೀನು ಕಳೆದುಕೊಂಡು ಸಂತ್ರಸ್ತರಾದ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸ ಬೇಕೆನ್ನುವುದು ಜಿಲ್ಲೆಯ ರೈತರ ಪ್ರಮುಖ ಬೇಡಿಕೆಯಾಗಿದೆ. ಬಜೆಟ್‌ನಲ್ಲಿ ಅದರ ಬಗ್ಗೆ ಎಲ್ಲೂ ಚಕಾರ ಎತ್ತಿಲ್ಲ. ಹಲವು ದಶಕಗಳ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ರೈತರು ಕಳೆದ ವರ್ಷ ಸತತ ಒಂದು ವರ್ಷ ಧರಣಿ ನಡೆಸಿದ್ದರು. ಹಲವು ಸಲ ಹೋರಾಟಗಳನ್ನು ಮಾಡಿದ್ದರು. ಈ ಕುರಿತು ಸಭೆಗಳನ್ನು ನಡೆಸಲಾಗಿ ತ್ತಾದರೂ ಬಜೆಟ್‌ನಲ್ಲಿ ಯಾವುದೇ ಪರಿಹಾರ ದೊರೆತಿಲ್ಲ.

ಹೊಸ ತಾಲ್ಲೂಕುಗಳು, ಮಹಾರಾಷ್ಟ್ರ ಹಾಗೂ ತೆಲಂಗಾಣದ ಗಡಿಯಲ್ಲಿರುವ ಗ್ರಾಮಗಳಲ್ಲಿ ಮೂಲ ಸೌಕರ್ಯ ಕಲ್ಪಿಸುವುದು. ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಅಗತ್ಯ ಸೌಕರ್ಯ ಕಲ್ಪಿಸಬೇಕೆನ್ನುವ ಬೇಡಿಕೆಗಳಿಗೂ ಸ್ಪಂದನೆ ದೊರೆತಿಲ್ಲ.

## ನಾಗರಾಜ ಮಂಜಗುಣಿ ನಾರಾಯಣಗುರು ಪುಸ್ತಕ ಬಿಡುಗಡೆ ಇಂದು



**ಅಂಕೋಲಾ, ಮಾ.8:** ಪತ್ರಕರ್ತ ನಾಗರಾಜ ಮಂಜಗುಣಿ ಅವರು ಬರೆದ 'ಶ್ರೀ ನಾರಾಯಣಗುರು ಅಸ್ಪೃಶ್ಯತೆ ಮತ್ತು ನಾಮಧಾರಿಗಳು' ಕೃತಿಯು ಇಂದು ಮಾ.8 ರಂದು ಬೆಳಗ್ಗೆ 10.30 ಕ್ಕೆ ಪಟ್ಟಣದ ಪಿ.ಎಂ. ಹೈಸ್ಕೂಲ್ ರೈತಭವನದಲ್ಲಿ ಬಿಡುಗಡೆ ಗೊಳ್ಳಲಿದೆ.

ಇದೇ ಸಂದರ್ಭದಲ್ಲಿ ನಿವೃತ್ತ ಡಿಎಫ್‌ಓಗಳಾದ ಉದಯ ನಾಯಕ, ಯು.ಡಿ.ನಾಯ್ಕ, ಕರ್ನಾಟಕ ಆರ್ಯ ಈಡಿಗ ನಾಮಧಾರಿ ಸಂಘದ ಅಧ್ಯಕ್ಷ ಎಂ.ಪಿ.ನಾಯ್ಕ, ಜಿಲ್ಲಾ ಧಾರ್ಮಿಕ ಪರಿಷತ್‌ನ ಜಿಲ್ಲಾ ಸದಸ್ಯ ದಾಮೋದರ ಜಿ. ನಾಯ್ಕ, ಬೊಬ್ರುವಾಡ ನಾಮಧಾರಿ ಸಮಾಜದ ಸುಗ್ಗಿ ಸಮಿತಿ ಅಧ್ಯಕ್ಷ ವೆಂಕಪ್ಪ ಟಿ. ನಾಯ್ಕ ಇವರಿಗೆ 'ಬ್ರಹ್ಮಶ್ರೀ ನಾರಾಯಣಗುರು ಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ.

ಕರ್ನಾಟಕ ಆರ್ಯ ಈಡಿಗ ನಾಮಧಾರಿ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಎಲ್. ನಾಯ್ಕ ಕೃತಿ ಬಿಡುಗಡೆಗೊಳಿಸಲಿದ್ದು, ತಾಲೂಕು ನಾಮಧಾರಿ ಅಭಿವೃದ್ಧಿ ಒಕ್ಕೂಟದ ಅಧ್ಯಕ್ಷ ನಾಗೇಶ ನಾಯ್ಕ ಆಚಾ ಅಧ್ಯಕ್ಷತೆ ವಹಿಸಲಿದ್ದಾರೆ. ನಿವೃತ್ತ ಪ್ರಾಧ್ಯಾಪಕ ಮತ್ತು ಡೀನ್ ಡಾ. ನಾಗೇಶ ನಾಯ್ಕ, ಭಾರತ್ ಗ್ಯಾಸ್ ವಿತರಕ ವಿಜಯಕುಮಾರ ನಾಯಕ, ಆರ್ಯ ಈಡಿಗ ನಾಮಧಾರಿ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸುರೇಶ ನಾಯ್ಕ ಪಾಲ್ಗೊಳ್ಳಲಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಮತ್ತು ನಾರಾಯಣ ಗುರು ಅಭಿಮಾನಿಗಳು ಆಗಮಿಸುವಂತೆ ಸಂಘಟಕರು ತಿಳಿಸಿದ್ದಾರೆ.

## ರೈತರಿಗೆ ಕೃಷಿ ಪಂಪ್‌ಸೆಟ್ ವಿತರಣೆ



**ಬೀದರ್, ಮಾ. 8:** ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ ಕೊಳವೆಬಾವಿ ಸ್ಥಾಪನೆಗೆ ಅಗತ್ಯವಾದ ಮೋಟಾರ್, ಪಂಪ್‌ಸೆಟ್ ಹಾಗೂ ಇತರೆ ಪರಿಕರಗಳನ್ನು ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರು ನಗರದಲ್ಲಿ ವಿತರಿಸಿದರು.

ರೈತರಿಗೆ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸುವುದು ಗ್ರಾಮೀಣಾಭಿವೃದ್ಧಿಗೆ ಅತ್ಯಂತ ಅಗತ್ಯವಾಗಿದೆ. ಈ ಯೋಜನೆ ರೈತರ ಆರ್ಥಿಕ ಸ್ಥಿರತೆಗೆ ನೆರವಾಗಲಿದೆ. ನೀರಿನ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿರುವ ರೈತರಿಗೆ ಗಂಗಾ ಕಲ್ಯಾಣ ಯೋಜನೆ ಶಾಶ್ವತ ಪರಿಹಾರ ಒದಗಿಸಿ, ವರ್ಷಪೂರ್ತಿ ಕೃಷಿ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಲು ಸಹಕಾರಿಯಾಗಲಿದೆ.

ನೀರಾವರಿ ವ್ಯವಸ್ಥೆ ಸದುಪಯೋಗದಿಂದ ಬೆಳೆ ಉತ್ಪಾದನೆ ಹೆಚ್ಚಾಗಿ, ರೈತರ ಆದಾಯದಲ್ಲಿ ಗಣನೀಯ ಏರಿಕೆ ಕಂಡು ಬರಲಿದೆ. ಪರಿಶಿಷ್ಟ ಪಂಗಡದ ರೈತರ ಆರ್ಥಿಕ ಸದೃಢತೆ, ಸ್ವಾವಲಂಬನೆ ಹಾಗೂ ಸಾಮಾಜಿಕ ಉನ್ನತಿಗೆ ಸರ್ಕಾರದಿಂದ ಗಂಗಾ ಕಲ್ಯಾಣ ಗುರಿ ಹೆಚ್ಚಿಸಬೇಕು ಎಂದು ತಿಳಿಸಿದರು.

## ದೇವಾಲಯಗಳು ಬಳಲಿ ಬಂದ ಜನತೆಗೆ ನೆಮ್ಮದಿ ನೀಡುವ ತಾಣಗಳು



**ಬೆಂಗಳೂರು–ಮಾರ್ಚ–8.** ಭೌತಿಕ ಬದುಕಿನಲ್ಲಿ ಬಳಲಿ ಬಂದ ಜೀವಾತ್ಮರಿಗೆ ದೇವಾಲಯಗಳು ಶಾಂತಿ ನೆಮ್ಮದಿ ನೀಡುವ ಕೇಂದ್ರ ಗಳಾಗಿವೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಎಲೆಕೊಡಿಗೆನಹಳ್ಳಿಯಲ್ಲಿ ನೂತನವಾಗಿ ನಿರ್ಮಾಣಗೊಂಡ ಮಹಾಗಣಪತಿ, ನಂದಿ ಬಸವೇಶ್ವರ ಮತ್ತು ಪಂಚಮುಖಿ ಶಿವಲಿಂಗದ ಶಿಲಾ ದೇಗುಲ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಕಳಸಾರೋಹಣ ಅಂಗವಾಗಿ ಜರುಗಿದ ಧರ್ಮಜಾಗೃತಿ ಸಮಾರಂಭ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯ ಯಾವಾಗಲೂ ಸುಖವನ್ನೇ ಬಯಸುತ್ತಾನೆ. ಸುಖದ ಮೂಲ ಧರ್ಮಾಚರಣೆಯಲ್ಲಿದೆ. ದೇವರು ಕೊಟ್ಟ ಕೊಡುಗೆ ಬೇರೆ ಯಾರೂ ಕೊಡಲು ಸಾಧ್ಯವಿಲ್ಲ. ನಿಂತ ನೆಲ, ಕುಡಿಯುವ ನೀರು, ತಿನ್ನುವ ಅನ್ನ ಬೀಸುವ ಗಾಳಿ ಇವೆಲ್ಲವೂ ಭಗವಂತ ಕೊಟ್ಟ ಕೊಡುಗೆ ಗಳಾಗಿವೆ. ಶಿಥಿಲಗೊಂಡ ದೇವಸ್ಥಾನವನ್ನು ತೆಗೆದು ಶಿಲಾಮಯ ಭವ್ಯ ದೇವಾಲಯ ನಿರ್ಮಾಣ ಮಾಡಿರುವುದು ಕೊಡಿಗೆನಹಳ್ಳಿ ಭಕ್ತರ ಭಕ್ತಿ ಶ್ರದ್ಧೆ ಈ ಅದ್ಭುತ ಕಾರ್ಯಕ್ಕೆ ಸಾಕ್ಷಿಯಾಗಿದೆ. ಎಸ್.ನಂಜುಂಡೇಶ ಮುಂದಾಳತ್ವದಲ್ಲಿ ಶ್ರಮಿಸಿದ ಎಲ್ಲ ಸಮಿತಿಯ ಸದಸ್ಯರಿಗೆ ಶುಭವನ್ನು ಹಾರೈಸಿದರು.

ಸಾನ್ನಿಧ್ಯ ವಹಿಸಿದ ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಭಾರತ ಪುಣ್ಯ ಭೂಮಿಯಲ್ಲಿ ಇರುವಷ್ಟು ದೇವಸ್ಥಾನ, ಮಠ ಮಂದಿರಗಳು ಬೇರೆಲ್ಲಿಯೂ ಇಲ್ಲ. ಆಧ್ಯಾತ್ಮದ ಅರಿವು ಶಾಂತಿ ನೆಮ್ಮದಿ ಬದುಕಿಗೆ ಕಾರಣ. ದೇವಾಲಯಗಳು ಮನಸ್ಸಿಗೆ ಸಮಾಧಾನ ಶಾಂತಿ ಉಂಟು ಮಾಡುತ್ತವೆ ಎಂದರು.

ಮೈಸೂರು ರಾಜಮನೆತನದ ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಶಾಸಕ ಎಸ್.ಟಿ.ಸೋಮಶೇಖರ್, ಮಾಜಿ ಶಾಸಕ ಅಶೋಖ ಖೇಣಿ, ಡಾ.ಸಿ.ಸೋಮಶೇಖರ್, ಎಂ.ರುದ್ರೇಶ್, ಜಿ.ಮರಿಸ್ವಾಮಿ, ಸಿದ್ಧೇಶ ನಾಗೇಂದ್ರ, ಹರೀಶ ಆರಾಧ್ಯ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು. ಡಾ. ಎಸ್.ನಂಜುಂಡೇಶ ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಿದಾನಂದ ಮಠದ ನಿರೂಪಿಸಿದರು.

ಸಮಾರಂಭಕ್ಕೂ ಮುನ್ನ ಉಭಯ ಜಗದ್ಗುರುಗಳವರ ಭವ್ಯ ಸಾರೋಟ ಮೆರವಣಿಗೆ ಸಂಭ್ರಮದಿಂದ ಜರುಗಿತು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಉಭಯ ಜಗದ್ಗುರುಗಳವರಿಂದ ಆಶೀರ್ವಾದ ಪಡೆದರು. ಆಗಮಿಸಿದ ಭಕ್ತರಿಗೆ ಅನ್ನ ದಾಸೋಹ ಜರುಗಿತು.

## ಶರಣ ಬಸವೇಶ್ವರರ ಮಹಾರಥೋತ್ಸವ: ಐತಿಹಾಸಿಕ ಶರಣಬಸವೇಶ್ವರ ಜಾತ್ರೆಗೆ ಸಾಕ್ಷಿಯಾದ ಲಕ್ಷಾಂತರ ಭಕ್ತರು



**ಕಲಬುರಗಿ, ಮಾ. 8:** ಹದಿನೆಂಟನೇ ಶತಮಾನದ ಸಂತ ಶ್ರೀಶರಣ ಬಸವೇಶ್ವರರ 204 ನೇ ಪುಣ್ಯಾರಾಧನೆ ನಿಮಿತ್ಯ ನಗರದ ಶರಣಬಸವೇಶ್ವರ ದೇವಾಲಯದ ವಿಶಾಲ ಆವರಣದಲ್ಲಿ ಐತಿಹಾಸಿಕ ಶರಣಬಸವೇಶ್ವರ ಯಾತ್ರಾ ಮಹೋತ್ಸವ ಸಡಗರ ಸಂಭ್ರಮದಿಂದ ನಡೆದ ಮಹಾರಥೋತ್ಸವ ದೇಶಾದ್ಯಂತ ಮತ್ತು ವಿದೇಶಗಳಿಂದ ಬಂದ ಲಕ್ಷಾಂತರ ಭಕ್ತರು ಸಾಕ್ಷಿಯಾದರು.

ನಿಗದಿತ ಸಮಯದಲ್ಲಿ, ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ದೊಡ್ಡಪ್ಪ ಅಪ್ಪಾಜಿ ಅವರು ವಿಧ್ಯುಕ್ತವಾಗಿ ಶಂಖನಾದದ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಶರಣಬಸವೇಶ್ವರ ವಿಗ್ರಹವನ್ನು ಹೊತ್ತ ಹಾಗೂ ಸುಂದರವಾಗಿ ಅಲಂಕರಿಸಿದ ಮಹಾರಥವನ್ನು ದೇವಾಲಯದ ಆವರಣದಲ್ಲಿ ಭಕ್ತರ ಹರ್ಷೋದ್ಗಾರ ಮತ್ತು ಜಯಘೋಷ ಗಳೊಂದಿಗೆ ಮಹಾರರಥವು ಮುಂದೆ ಚಲಿಸಿತು. ಮಹಾರಥ ಎಳೆಯುವ ಸಮಯದಲ್ಲಿ ದೇವಾಲಯದ ಸಂಕೀರ್ಣದ ಸುತ್ತಲೂ ವಿವಿಧ ಸ್ಥಳಗಳಿಂದ ಬಣ್ಣಗಳ ಚಿತ್ತಾರ ಮೂಡಿ ಬಂದವು. ಮುಂಜಾನೆಯಿಂದಲೇ ಬಂದ ಭಕ್ತರು ಬಾಳೆಹಣ್ಣು ಮತ್ತು ಖರ್ಜೂರವನ್ನು ಎಸೆದು ಪುನೀತ ರಾದರು. ದೇವಾಲಯ ಸಂಕೀರ್ಣದಲ್ಲಿ ಸೇರಿದ್ದ ಜನಸ್ತೋಮ ಹಬ್ಬಕ್ಕೆ ಅಗತ್ಯವಾದ ರಂಗನ್ನು ಸೂಚಿಸುತ್ತಿತ್ತು.

ಇದಕ್ಕೂ ಮುನ್ನ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಅವರು ಸುಂದರವಾಗಿ ಅಲಂಕರಿಸಲ್ಪಟ್ಟ ರಥಕ್ಕೆ ಪ್ರದಕ್ಷಿಣೆ ಹಾಕಿ, ಪೂಜೆ ಸಲ್ಲಿಸಿ, ವಿಶೇಷ "ನೈವೇದ್ಯ" ಅರ್ಪಿಸಿದರು. ದೇವಾ ಲಯದ ಪಕ್ಕದಲ್ಲಿರುವ ದಾಸೋಹ ಮಹಾಮನೆಯಲ್ಲಿ ವಿಶೇಷವಾಗಿ ನಿರ್ಮಿಸಲಾದ ಆವರಣ ದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ದಾಕ್ಷಾಯಣಿ ಅಪ್ಪಾ ಮತ್ತು ಸಹೋದರಿಯರಾದ ಕು. ಭವಾನಿ, ಕು. ಶಿವಾನಿ ಮತ್ತು ಕು. ಮಹೇಶ್ವರಿ ಅವರೊಂದಿಗೆ ರಥೋತ್ಸವ ವೀಕ್ಷಿಸಿದರು. ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಡಾ. ಅಲ್ಲಮಪ್ರಭು ದೇಶಮುಖ, ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲ ಕುಮಾರ ಬಿಡವೆ, ಕುಲಸಚಿವ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಸೇರಿದಂತೆ ಇತರ ಪ್ರಮುಖರು ಉಪಸ್ಥಿತರಿದ್ದರು.

ಈ ಐತಿಹಾಸಿಕ ಕ್ಷಣವನ್ನು ವೀಕ್ಷಿಸಲು ದೇವಾಲಯ ಸಂಕೀರ್ಣದಲ್ಲಿ ನೆರೆದಿದ್ದ ಲಕ್ಷಾವಧಿ ಭಕ್ತರಿಗೆ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಪ್ರಸಾದ ಬಟ್ಟಲು (ಸಂತ ಶರಣಬಸವೇಶ್ವರರು ತಮ್ಮ ಆಹಾರವನ್ನು ಸೇವಿಸುತ್ತಿದ್ದ ಬೆಳ್ಳಿ ತಟ್ಟೆ) ಮತ್ತು ಲಿಂಗ ಸಜ್ಜಿಕೆ (ಸಂತರು ಧರಿಸುತ್ತಿದ್ದ ಪವಿತ್ರ ಲಿಂಗ ಇರಿಸುವ ಬೆಳ್ಳಿ ಪೆಟ್ಟಿಗೆ) ಯನ್ನು ಭಕ್ತ ಸಮೂಹಕ್ಕೆ ಪ್ರದರ್ಶಿಸಿದರು.

ಸಂತರ ಪುಣ್ಯತಿಥಿಯನ್ನು ಭಕ್ತರು ದಿನವಿಡೀ ಉಪವಾಸ ಮಾಡಿ ಸಂಜೆ ರಥೋತ್ಸವ ಜರುಗಿದ ನಂತರ ಸಿಹಿ ನೈವೇದ್ಯ ಮಾಡಿದ ನಂತರ ಉಪವಾಸ ಬಿಡುವುದು ವಾಡಿಕೆ. ಇಡೀ ಕಲಬುರಗಿ ನಗರದಾದ್ಯಂತ ಹೂವಿನ ಅಲಂಕಾರ ಗಳೊಂದಿಗೆ ಹಬ್ಬದ ವಾತಾವರಣವನ್ನು ನಿರ್ಮಾಣಗೊಂಡಿತ್ತು. ಸಂತ ಶರಣಬಸವೇಶ್ವರರು ಬೋಧಿಸಿದ ಮತ್ತು ಆಚರಿಸಿದ ದಾಸೋಹದ ಸಂಪ್ರದಾಯಗಳಿಗೆ ಅನುಗುಣವಾಗಿ, ಇಡೀ ನಗರವು ದಾಸೋಹ ಮಹಾಮನೆಯಾಗಿ ರೂಪಾಂತರ ಗೊಂಡಿತು. ಜನರು ಶರಣಬಸವೇಶ್ವರ ದೇಗುಲಕ್ಕೆ ಹೋಗುವ ಎಲ್ಲಾ ರಸ್ತೆಗಳಲ್ಲಿ ಪೆಂಡಾಲ್‌ಗಳು ಮತ್ತು ವಿಶೇಷ ಮಳಿಗೆಗಳನ್ನು ಸ್ಥಾಪಿಸಿ, ಪೂಜೆ ಸಲ್ಲಿಸಲು ದೇಗುಲಕ್ಕೆ ಬರುವ ಎಲ್ಲಾ ಭಕ್ತಾದಿಗಳಿಗೆ ಉಚಿತ ಆಹಾರದ ಅನ್ನದಾಸೋಹ ಮತ್ತು ನೀರನ್ನು ನೀಡುತ್ತಿದ್ದರು. ಉತ್ತಮ ಕಾರ್ಯವಾಗಿ, ನಗರ ಕೇಂದ್ರ ಬಸ್ ನಿಲ್ದಾಣದ ಎದುರಿನ ಸೆಂಟ್ರಲ್ ಮಾಲ್‌ನ ಪಕ್ಕದಲ್ಲಿರುವ ಆಟೋರಿಕ್ಷಾ ಸ್ಟ್ಯಾಂಡ್ ನಲ್ಲಿರುವ ಚಾಲಕರು ದೂರದ ಸ್ಥಳಗಳಿಂದ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಉಚಿತ ಸಾರಿಗೆಯನ್ನು ಒದಗಿಸಿದರು ಮತ್ತು ಬಸ್ ನಿಲ್ದಾಣಕ್ಕೆ ಹಿಂತಿರುಗಲು ಉಚಿತವಾಗಿ ಅವಕಾಶ ನೀಡಿದರು.

ದೇವಾಲಯ ಸಂಕೀರ್ಣದೊಳಗಿನ ಭದ್ರತಾ ವ್ಯವಸ್ಥೆಗಳು ಪರಿಪೂರ್ಣವಾಗಿದ್ದವು. ಯಾವುದೇ ಅಹಿತಕರ ಘಟನೆಗಳನ್ನು ನಡೆಯದಂತೆ ಪೊಲೀಸರು ಹಾಗೂ ಗುರುತಿಸಲ್ಪಟ್ಟ ಭಕ್ತರು ಮತ್ತು ಸ್ವಯಂಸೇವಕರ ವಿಶೇಷ ಗುಂಪು ರಥವನ್ನು ಎಳೆಯುವ ಮಾರ್ಗಕ್ಕೆ ಬ್ಯಾರಿಕೇಡ್ ಹಾಕಿದ್ದರು. ದಾಸೋಹ ಮಹಾಮನೆಗೆ ಪ್ರವೇಶವನ್ನು ಸಹ ನಿರ್ಬಂಧಿಸಲಾಗಿತ್ತು. ಅಧಿಕೃತ ಮತ್ತು ಪೂಜ್ಯ ಡಾ. ಅಪ್ಪಾಜಿಯವರ ಸಂಬಂಧಿಕರ ಪ್ರಮುಖ ಅತಿಥಿಗಳಿಗೆ ಮಾತ್ರ ಮಹಾಮನೆಗೆ ಪ್ರವೇಶಿಸಲು ಅವಕಾಶ ನೀಡಲಾಗಿತ್ತು.


ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ.
SINCE 1945
PIONEERS IN SWITCH GEARS
ಕರ್ನಾಟಕ ಸರ್ಕಾರದ
ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ.,ನ ಅಧ್ಯಕ್ಷರಾದ
ಶ್ರೀ ಎಸ್.ಮನೋಹರ್ ಅವರಿಗೆ
ರಾಜ್ಯ ಸಚಿವ ಸ್ಥಾನಮಾನ
ಅವಕಾಶ ಕಲ್ಪಿಸಿಕೊಟ್ಟಿರುವ
ಎಐಸಿಸಿ ಅಧ್ಯಕ್ಷರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಜೀ ರವರಿಗೆ,
ಎಐಸಿಸಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಮತ್ತು ರಾಜ್ಯ ಉಸ್ತುವಾರಿಗಳಾದ
ಶ್ರೀ ರಣದೀಪ್‌ಸಿಂಗ್ ಸುರ್ಜೆವಾಲ ಜೀ ರವರಿಗೆ,
ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಸಾಹೇಬರಿಗೆ,
ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ಸಾಹೇಬರಿಗೆ,
ಮಾನ್ಯ ಇಂಧನ ಸಚಿವರಾದ ಶ್ರೀ ಕೆ.ಜೆ.ಜಾರ್ಜ್ ಸಾಹೇಬರಿಗೆ,
ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಸಾಹೇಬರಿಗೆ,
ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೆ
ತುಂಬು ಹೃದಯದ ಕೃತಜ್ಞತೆಗಳು.
ನಷ್ಟದಲ್ಲಿದ್ದ ಎಂ.ಇ.ಐ ಸಂಸ್ಥೆಯಲ್ಲಿ ಹೆಚ್ಚಿನ ಉತ್ಪಾದನೆ ಮಾಡಿ
ಸಂಸ್ಥೆಯನ್ನು ಲಾಭದಾಯಕ ದತ್ತ ತರಲು ಶ್ರಮಿಸಿದ
ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕ, ಸಂಘಟನಾ ಚತುರ,
ಸಕ್ರಿಯ ಕ್ರಿಯಾಶೀಲ ಹೋರಾಟಗಾರ, ಪಕ್ಷದ ಏಳಿಗೆಗಾಗಿ ಅಹರ್ನಿಷಿ ಶ್ರಮಿಸುತ್ತಿರುವ
ಕಾರ್ಯಕರ್ತರ ಹಾಗೂ ಜನಸಾಮಾನ್ಯರ ಧ್ವನಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ
ಎಂ.ಇ.ಐ ಅಧ್ಯಕ್ಷರಾದ ಶ್ರೀ ಎಸ್.ಮನೋಹರ್ ಅವರಿಗೆ ಅಭಿನಂದನೆಗಳು.
ಇವರ ಅಧಿಕಾರವಧಿಯಲ್ಲಿ ಕಂಪನಿ ಮತ್ತಷ್ಟು ಉತ್ತುಂಗಕ್ಕೆ ಏರಲಿ ಎಂದು ಶುಭಹಾರೈಸುತ್ತೇವೆ.
THE MYSORE ELECTRICAL INDUSTRIES LTD.
MEI
MEI Products Display Centre
ಎಂಇಐ ಆಡಳಿತ ಕಛೇರಿ
ಆಡಳಿತ ಕಛೇರಿ
ಪ್ರಾಮಾಣಿಕ ಕಾರ್ಯಕರ್ತರೇ ಪಕ್ಷದ ಆಸ್ತಿ
ಕಾರ್ಯಕರ್ತರ ಹೋರಾಟವೇ ಪಕ್ಷದ ನೈಜ ಶಕ್ತಿ